# www.karunaduexams.com

ಪ್ರಚಲಿತ ವಿದ್ಯಮಾನಗಳು-ಆಗಸ್ಟ್, 2016

www.karunaduexams.com

www.karunaduexams.com

# Contents


ಅಂತರ್ ರಾಷ್ಟ್ರೀಯ ..... 3

ಪ್ರಶಸ್ತಿಗಳು ..... 11

ಪರಿಸರ ..... 19

ಸುದ್ದಿಯಲ್ಲಿರುವ ವ್ಯಕ್ತಿಗಳು ..... 19

ವ್ಯವಹಾರ ..... 29

ರಾಜ್ಯ ಸರ್ಕಾರದ-ಯೋಜನೆಗಳು ..... 38

ಕೇಂದ್ರ ಸರ್ಕಾರದ-ಯೋಜನೆಗಳು ..... 46

ವಿಜ್ಞಾನ-ತಂತ್ರಜ್ಞಾನ ..... 60

ವಿಶೇಷ ದಿನ ..... 69

ಕ್ರೀಡೆ ..... 72


ಹೆಚ್ಚಿನ ಮಾಹಿತಿಗಾಗಿ,

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ, WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mobile: +91- 98805 33259 (Content related queries)

Mobile: +91-9844915689 (Technical and Marketing related queries)

Mobile:+91-9972355744(Management related queries)

www.karunaduexams.com

# ಅಂತರ್ ರಾಷ್ಟ್ರೀಯ

**ದಕ್ಷಿಣ ಚೀನಾಕ್ಕೆ ಅಪ್ಪಳಿಸಿದ ಚಂಡಮಾರುತ ನಿಡಾ**

ದಕ್ಷಿಣ ಚೀನಾದ ಗಾಂಗ್ ಡಾಂಗ್ ಪ್ರಾಂತಕ್ಕೆ ನಿಡಾ ಚಂಡಮಾರುತ ಅಪ್ಪಳಿಸಿದ್ದು, ಸಾವಿರಾರು ಜನ ತೊಂದರೆಗೆ ಸಿಲುಕಿದ್ದಾರೆ. ಫಿಲಿಪೈನ್ಸ್ ನ ಮನಿಲಾದಿಂದ ಸುಮಾರು 1,020 ಕಿಮೀ ಪೂರ್ವ-ಆಗ್ನೇಯದಲ್ಲಿ ದಿಕ್ಕಿನಲ್ಲಿ ವಾಯು ಕುಸಿತದಿಂದ ಚಂಡಮಾರುತ ಉಂಟಾಗಿದ್ದು, ಫಿಲಿಪೈನ್ಸ್ ಗೆ ಅಪ್ಪಳಿಸಿದ ನಂತರ ಚೀನಾದಲ್ಲಿ ಅವಾಂತರ ಸೃಷ್ಟಿಸಿದೆ.

- ನಿಡಾ ಚಂಡಮಾರುತ ಕಳೆದ 33 ವರ್ಷಗಳಲ್ಲಿ ಚೀನಾಕ್ಕೆ ಅಪ್ಪಳಿಸಿದ ಅತ್ಯಂತ ಬಲಿಷ್ಠ ಚಂಡಮಾರುತ ಎನ್ನಲಾಗಿದೆ.
- ದಕ್ಷಿಣ ಚೀನಾದ ಗಾಂಗ್‌ಡಾಂಗ್‌ನಲ್ಲಿ ಚಂಡಮಾರುತದ ಕೇಂದ್ರಬಿಂದುವಿದ್ದು, ಚಂಡಮಾರುತದಿಂದಾಗಿ ಗಂಟೆಗೆ 151 ಕಿ.ಮೀ. ವೇಗದಲ್ಲಿ ಗಾಳಿ ಬೀಸುತ್ತಿದೆ.
- ಚಂಡಮಾರುತದ ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲಾಗಿದ್ದು, ಜನಜೀವನ ಅಸ್ತವ್ಯಸ್ಥವಾಗಿದೆ.
- ನಿಡಾ ಚಂಡಮಾರುತದಿಂದ ಚೀನಾದ ಈಶಾನ್ಯ ಭಾಗದಲ್ಲಿ ಮಳೆಯಾಗುತ್ತಿದ್ದು, 180 ಬುಲೆಟ್ ರೈಲು ಸೇರಿದಂತೆ 200 ರೈಲುಗಳ ಸಂಚಾರ ಸ್ತಬ್ಧವಾಗಿದೆ.
- ಚೀನಾದಲ್ಲಿ 1983ರಲ್ಲಿ ಇಂಥ ಚಂಡಮಾರುತ ಬೀಸಿತ್ತು.

**ಹೊಸ ಇತಿಹಾಸ ಬರೆದ ಅಮೆರಿಕಾದ ಸ್ಕೈಡೈವರ್ ಲೂಕ್ ಐಕಿನ್ಸ್**

ಅಮೆರಿಕಾದ ಖ್ಯಾತ ಸ್ಕೈಡೈವರ್ ಲೂಕ್ ಐಕಿನ್ಸ್ ರವರು ಪ್ಯಾರಾಚೂಟ್ ಬಳಸದೇ 25 ಸಾವಿರ ಅಡಿಗಳಿಂದ ಕೆಳಕ್ಕೆ ಧುಮುಕುವ ಮೂಲಕ ದಾಖಲೆ ಸೃಷ್ಟಿಸಿದ್ದಾರೆ. ಆ ಮೂಲಕ ಇಷ್ಟು ಎತ್ತರದಿಂದ ಸುರಕ್ಷಿತವಾಗಿ ಧುಮುಕಿದ ವಿಶ್ವದ ಮೊದಲ ವ್ಯಕ್ತಿ ಲೂಕ್ ಆಗಿದ್ದಾರೆ.

- 25000 ಅಡಿ ಎತ್ತರದಿಂದ ವಿಮಾನದಿಂದ ಜಿಗಿದ ಲೂಕ್ ರವರು ಎರಡು ನಿಮಿಷಗಳಲ್ಲಿ 100 ಅಡಿ ಉದ್ದ 100 ಅಡಿ ಅಗಲದ ನೆಟ್ ಮೇಲೆ ಸುರಕ್ಷಿತವಾಗಿ ಇಳಿಯುವ ಮೂಲಕ ನೋಡುಗರನ್ನು ಬೆರಗಾಗಿಸಿದರು. ಪ್ಯಾರಾಚೂಟ್ ಅನ್ನು ಬಳಸದೇ ಇಂತಹ ಸಾಹಸ ಮಾಡಿದ ಹಿರಿಮೆ ಅವರದು. ದಕ್ಷಿಣ ಕ್ಯಾಲಿಫೋರ್ನಿಯಾದ ಸಿಮಿ ಕಣಿವೆಯಲ್ಲಿ ಈ ಸಾಹಸವನ್ನು ಏರ್ಪಡಿಸಲಾಗಿತ್ತು.
- ತಮ್ಮ 26 ವರ್ಷ ಸ್ಕೈಡೈವಿಂಗ್ ವೃತ್ತಿಯಲ್ಲಿ ಲೂಕ್ ರವರು 18,000ಕ್ಕೂ ಹೆಚ್ಚು ಜಿಗಿತಗಳನ್ನು ಮಾಡಿದ್ದಾರೆ.

**ಲೂಕ್ ಐಕಿನ್ ಬಗ್ಗೆ:**

- ಲೂಕ್ ಐಕಿನ್ ರವರು ಅಮೆರಿಕಾದ ಪ್ರಸಿದ್ಧ ವೃತ್ತಿಪರ ಸ್ಕೈಡೈವರ್, ಪೈಲಟ್ ಹಾಗೂ ಬೇಸ್ ಸ್ಕೈಡೈವ್ ತಂಡದ ಸದಸ್ಯ. ತಮ್ಮ 12ನೇ ವಯಸ್ಸಿನಲ್ಲಿಯೇ ಇವರು ಸ್ಕೈಡೈವ್ ಅನ್ನು ಕರಗತ ಮಾಡಿಕೊಂಡಿದ್ದರು. ಲೂಕ್ ಕೇವಲ ಸ್ಕೈಡೈವಿಂಗ್ ಅಲ್ಲದೇ ವೈಜ್ಞಾನಿಕ ಛಾಯಾಗ್ರಾಹಕರೂ ಆಗಿದ್ದಾರೆ, ಇವರು ತೆಗೆದಿರುವ ಅನೇಕ ಪೋಟೋಗಳನ್ನು ನಿಯತಕಾಲಿಕೆ ಮತ್ತು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ.

**ನೇಪಾಳದ ನೂತನ ಪ್ರಧಾನಿಯಾಗಿ ಪುಷ್ಪ ಕುಮಲ್ ದಹಲ್ ಆಯ್ಕೆ**

ಮಾವೋವಾದಿ ಬಂಡುಕೋರ (Communist Party of Nepal-Maoist Chairperson (CPN-MC)) ಮುಖ್ಯಸ್ಥ ಪುಷ್ಪ ಕಮಲ್ ದಹಲ್ ಅವರು ನೇಪಾಳದ ನೂತನ ಪ್ರಧಾನ ಮಂತ್ರಿಯಾಗಿ ಬುಧವಾರ ಆಯ್ಕೆಯಾಗಿದ್ದಾರೆ. ರಾಜಕೀಯ ಪ್ರಕ್ಷುಬ್ಧತೆ ಹಿನ್ನಲೆಯಲ್ಲಿ ಜುಲೈ 2016 ರಂದು ಪ್ರಧಾನಿ ಕೆ ಪಿ ಓಲಿ ರವರು ರಾಜೀನಾಮೆ ನೀಡಿದ ನಂತರ ಪ್ರಧಾನಿ ಹುದ್ದೆಗೆ ಸ್ಪರ್ಧಿಸಿದ್ದ ಏಕೈಕ ವ್ಯಕ್ತಿ ದಹಲ್ ಆಗಿದ್ದರು. ದಹಲ್ ರವರು ನೇಪಾಳದಲ್ಲಿ ಹೊಸ ಸಂವಿಧಾನ ಜಾರಿಗೆ ಬಂದ ನಂತರ ಈ ಹುದ್ದೆಯನ್ನು ಅಲಂಕರಿಸಿದ ಎರಡನೇಯವರು. ಎರಡನೇ ಬಾರಿಗೆ ಪ್ರಧಾನಿಯಾಗಿ ಆಯ್ಕೆಯಾಗಿರುವ ದಹಲ್ ರವರು ಈ ಹಿಂದೆ 2008 ರಿಂದ 2009 ರವರೆಗೆ ಪ್ರಧಾನಿಯಾಗಿ ಸೇವೆ ನಿರ್ವಹಿಸಿದ್ದರು.

- ನೇಪಾಳಿ ಸಂಸತ್ತಿನಲ್ಲಿ ನೂತನ ಪ್ರಧಾನಮಂತ್ರಿ ಆಯ್ಕೆಗಾಗಿ ನಡೆದ ಮತದಾನದಲ್ಲಿ ಶೇ 50ಕ್ಕಿಂತ ಅಧಿಕ ಮತವನ್ನು ಪುಷ್ಪ ಕಮಲ್ ಪಡೆದುಕೊಂಡ್ದರು. 573 ಜನಪ್ರತಿನಿಧಿಗಳ ಪೈಕಿ 363 ಮಂದಿ ದಹಲ್ ಪರ ಮತ ಹಾಕಿದರು. ಪ್ರಧಾನಿ ಪಟ್ಟಕ್ಕೇರಲು ದಹಲ್ ಅವರಿಎಗ್ ಒಟ್ಟಾರೆ 595 ಸಂಸತ್ ಸದಸ್ಯರ ಪೈಕಿ 298 ಮತಗಳು ಅಗತ್ಯವಿತ್ತು.

**ಹಿನ್ನಲೆ:**

ನೇಪಾಳದ ಪ್ರಧಾನಿಯಾಗಿದ್ದ ಕೆ.ಪಿ.ಓಲಿ ರವರು ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಮಾದೇಸಿ ಪ್ಯೂಪಲ್ಸ್ ರೈಟ್ಸ್ ಫೋರಂ ಡೆಮೊಕ್ರೆಟಿಕ್ ಮತ್ತು ರಾಷ್ಟ್ರೀಯ ಪ್ರಜಾತಂತ್ರ ಪಕ್ಷ ಹಿಂಪಡೆದ ಕಾರಣ ರಾಜಕೀಯ ಅಸ್ಥಿರತೆ ಉಂಟಾಗಿತ್ತು. ಅವಿಶ್ವಾಸದ ಗೊತ್ತುವಳಿಯಲ್ಲಿ ಪರಾಭವಗೊಳ್ಳುವ ಸಾಧ್ಯತೆಯಿಂದ ಪಾರಾಗಲು ಕೆ.ಪಿ. ಒಲಿ ಅವರು ಇತ್ತೀಚೆಗೆ ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ನೀಡಿದ್ದರು.

**ಭಾರತ- ರಷ್ಯಾ ಅಣು ಒಪ್ಪಂದ 1988:**

- ಭಾರತ ರಷ್ಯಾ ಅಣು ಒಪ್ಪಂದಕ್ಕೆ ಅಂದಿನ ಭಾರತದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಮತ್ತು ಸೊವಿಯತ್ ಒಕ್ಕೂಟದ ಮುಖ್ಯಸ್ಥರಾಗಿದ್ದ ಮೈಕೆಲ್ ಗೋರ್ಬಚೆವ್ 1988 ರಲ್ಲಿ ಸಹಿ ಮಾಡಿದ್ದರು. ಈ ಒಪ್ಪಂಧವನ್ನು 1998 ರಲ್ಲಿ ಪುನಶ್ಚೇತನಗೊಳಿಸಲಾಗಿತ್ತಾದರೂ, ರಷ್ಯಾದ ಅಂತರಿಕ ಸಮಸ್ಯೆಯಿಂದಾಗಿ ಕಾಮಗಾರಿಗೆ 2002 ರಲ್ಲಿ ಚಾಲನೆ ನೀಡಲಾಯಿತು.
- ಈ ವಿದ್ಯುತ್ ಸ್ಥಾವರದಿಂದ ಉತ್ಪಾದಿಸಲಾಗುವ ವಿದ್ಯುತ್ ಅನ್ನು ತಮಿಳು ನಾಡು (925 ಮೆ.ವ್ಯಾ), ಕರ್ನಾಟಕ (442 ಮೆ,ವ್ಯಾ), ಕೇರಳ (266 ಮೆ.ವ್ಯಾ) ಮತ್ತು ಪುದುಚೇರಿ (67 ಮೆ.ವ್ಯಾ) ನಡುವೆ ಹಂಚಿಕೆ ಮಾಡಲಾಗುವುದು.

**ಗ್ಲೋಬಲ್ ಇನೋವೇಶನ್ ಸೂಚ್ಯಂಕ (Global Innovation Index) ಭಾರತಕ್ಕೆ 66 ನೇ ಸ್ಥಾನ**

ಗ್ಲೋಬಲ್ ಇನೋವೇಶನ್ ಸೂಚ್ಯಂಕವನ್ನು ಬಿಡುಗಡೆಗೊಳಿಸಲಾಗಿದ್ದು, ಕಳೆದ ಬಾರಿಗಿಂತ ಭಾರತ ಉತ್ತಮ ಸಾಧನೆ ಮಾಡುವ ಮೂಲಕ 66ನೇ ಸ್ಥಾನವನ್ನು ಪಡೆದುಕೊಂಡಿದೆ. 2015ರ ಗ್ಲೋಬಲ್ ಇನೋವೇಶನ್ ಸೂಚ್ಯಂಕದಲ್ಲಿ ಭಾರತ 81 ನೇ ಸ್ಥಾನವನ್ನು ಪಡೆದುಕೊಂಡಿತ್ತು. ಉನ್ನತ ಶಿಕ್ಷಣ, ಸಾಪ್ಟ್ ವೇರ್ ರಫ್ತು ಮತ್ತು ಕಾರ್ಪೋರೆಟ್ ಆರ್ & ಡಿ ಕ್ಷೇತ್ರದಲ್ಲಿ ಪ್ರಗತಿ ಆಗಿರುವುದು ಭಾರತದ ಸ್ಥಾನ ಮೇಲೆರಲು ಕಾರಣವಾಗಿದೆ. ಇನೋವೇಶನ್ ಗುಣಮಟ್ಟದಲ್ಲಿ ಮಧ್ಯಮ ಆದಾಯ ದೇಶಗಳ ಪೈಕಿ ಭಾರತ 27 ಸ್ಥಾನದಲ್ಲಿದ್ದರೆ, ಚೀನಾ 25ನೇ ಸ್ಥಾನದಲ್ಲಿದೆ.

**ಅಗ್ರ ಐದು ಸ್ಥಾನದಲ್ಲಿರುವ ದೇಶಗಳು:**

- ಸ್ವಿಟ್ಜರ್ಲ್ಯಾಂಡ್, ಸ್ವೀಡನ್, ಯು.ಕೆ, ಯುಎಸ್, ಫಿನ್ ಲ್ಯಾಂಡ್ ಟಾಪ್ ಐದರಲ್ಲಿರುವ ದೇಶಗಳು

www.karunaduexams.com

**ಇನೋವೇಶನ್ ಗುಣಮಟ್ಟದಲ್ಲಿ:**

- ಜಪಾನ್, ಯು.ಎಸ್, ಉಕ್ರೇನ್, ಜರ್ಮನಿ ಮತ್ತು ಸ್ವಿಟ್ಜರ್ಲ್ಯಾಂಡ್

**ಬ್ರಿಕ್ಸ್ (BRICS) ದೇಶಗಳ ಪೈಕಿ:**

- ಚೀನಾ (25), ರಷ್ಯಾ (43), ದಕ್ಷಿಣ ಆಫ್ರಿಕಾ (54), ಭಾರತ (66) ಮತ್ತು ಬ್ರೆಜಿಲ್ (69).

**ಸೂಚ್ಯಂಕದ ಬಗ್ಗೆ:**

ವಿಶ್ವ ಭೌಧಿಕ ಹಕ್ಕು ಸಂಸ್ಥೆ (ಡಬ್ಲ್ಯುಐಪಿಒ) ಕಾರ್ನೆಲ್ ವಿಶ್ವವಿದ್ಯಾಲಯ ಮತ್ತು ಇನ್ಸಿಯಾಡ್(ಅಂತಾರಾಷ್ಟ್ರೀಯ ಬ್ಯುಸಿನೆಸ್ ಸ್ಕೂಲ್) ಜೊತೆಯಾಗಿ ಈ ಸೂಚ್ಯಂಕವನ್ನು 2007 ರಿಂದ ಬಿಡುಗಡೆ ಮಾಡುತ್ತಿವೆ. ಸಮೀಕ್ಷೆಯಲ್ಲಿ ಶಿಕ್ಷಣ, ಆರ್ & ಡಿ, ಪೇಟೆಂಟ್ ಅರ್ಜಿ ಹಾಕಿರುವುದು ಸೇರಿದಂತೆ 80 ಕ್ಕೂ ಹೆಚ್ಚು ಮಾನದಂಡಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

**<u>ಸಿಂಗಾಪುರದ ಮಾಜಿ ಅಧ್ಯಕ್ಷ ಎಸ್ ಆರ್ ನಾಥನ್ ನಿಧನ</u>**

ಭಾರತ ಮೂಲದ ಸಿಂಗಾಪುರದ ಮಾಜಿ ಅಧ್ಯಕ್ಷ ಎಸ್.ಆರ್.ನಾಥನ್ ನಿಧನರಾದರು. ನಾಥನ್ ಸಿಂಗಾಪುರದ ಆರನೇ ಅಧ್ಯಕ್ಷರಾಗಿದ್ದು ಈ ಹುದೆಯಲ್ಲಿ ದೀರ್ಘಕಾಲ ಸೇವೆಸಲ್ಲಿಸಿದ್ದ ಖ್ಯಾತಿಯನ್ನು ಹೊಂದಿದ್ದಾರೆ.

**ನಾಥನ್ ಬಗ್ಗೆ:**

- ಸೆಲ್ಲಪನ್ ರಾಮನಾಥನ್ ಜುಲೈ 3, 1924 ರಲ್ಲಿ ಜನಸಿದರು. ಭಾರತ ಮೂಲದ ತಮಿಳು ಕುಟುಂಬದಲ್ಲಿ ಜನಸಿದ ಇವರು ಸಿಂಗಾಪುರದಲ್ಲಿ ನೆಲೆಸಿದ್ದರು.
- 1999 ರಿಂದ 2011ರವರೆಗೆ ಎರಡು ಅವಧಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1999 ರಲ್ಲಿ ಮೊದಲ ಬಾರಿಗೆ ಅಧ್ಯಕ್ಷ ಹುದ್ದೆಗೆ ಅವಿರೋಧವಾಗಿ ಆಯ್ಕೆಯಾಗಿದ್ದು ವಿಶೇಷ.
- 2011 ರಲ್ಲಿ ಮೂರನೇ ಬಾರಿಗೆ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಲು ಇಚ್ಚಿಸಿದೆ ಹುದ್ದೆಯಿಂದ ಕೆಳಗಿಳಿದು ಇನ್ ಸ್ಟಿಟ್ಯೂಟ್ ಆಫ್ ಸೌತ್ ಏಷಿಯನ್ ಸ್ಟಡೀಸ್ ಮತ್ತು ಸಿಂಗಾಪುರ ಮ್ಯಾನೆಜ್ಮೆಂಟ್ ಯೂನಿವರ್ಸಿಟಿ ಸ್ಕೂಲ್ ಆಫ್ ಸೋಶಿಯಲ್ ಸೈನ್ಸ್ ನಲ್ಲಿ ಸಿನಿಯರ್ ಫೆಲೊ ಆಗಿ ಕಾರ್ಯನಿರ್ವಹಿಸಿದ್ದರು.
- ಭಾರತ ಮತ್ತು ಸಿಂಗಾಪುರ ದೇಶಗಳ ನಡುವೆ ಸಂಬಂಧವನ್ನು ವೃದ್ಧಿಪಡಿಸಿದಕ್ಕಾಗಿ ಭಾರತ ಸರ್ಕಾರ ಇವರಿಗೆ 2012 ರಲ್ಲಿ ಪ್ರವಾಸಿ ಭಾರತೀಯ ಸಮ್ಮಾನ್ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

**ಚೀನಾದಲ್ಲಿ ವಿಶ್ವದ ಅತಿ ಎತ್ತರದ ಮತ್ತು ಉದ್ದದ ಗಾಜು ಸೇತುವೆ ಅನಾವರಣ**

ವಿಶ್ವದ ಅತಿ ಎತ್ತರದ ಮತ್ತು ಉದ್ದದ ಗಾಜಿನ ಸೇತುವೆಯನ್ನು ಚೀನಾದಲ್ಲಿ ಲೋಕಾರ್ಪಣೆ ಮಾಡಲಾಯಿತು. ಚೀನಾದ ಹುನಾನ್ ಪ್ರಾಂತ್ಯದಲ್ಲಿ ಬೃಹತ್ ಗಾಜಿನ ಸೇತುವೆಯನ್ನು ನಿರ್ಮಿಸಲಾಗಿದ್ದು, ವಿಶ್ವದ ಅತಿ ಎತ್ತರದ ಮತ್ತು ಅತಿ ಉದ್ದದ ಗಾಜು ಸೇತುವೆ ಎಂಬ ಖ್ಯಾತಿಗೆ ಒಳಗಾಗಿದೆ. ಚೀನಾನ್ ಹುನಾನ್ ಪ್ರಾಂತ್ಯದಲ್ಲಿರುವ ಎರಡು ಬೆಟ್ಟಗಳನ್ನು ಈ ಸೇತುವೆ ಸಂಪರ್ಕಸಲಿದೆ.

ಗಾಜು ಸೇತುವೆಯ ವಿಶೇಷತೆಗಳು:

- ಮೂರು ಪದರ ಗಾಜಿನ ಕೋಟಿಂಗ್ ಹೊಂದಿರುವ ಈ ಗಾಜಿನ ಸೇತುವೆ 430 ಮೀಟರ್ ಉದ್ದ ಮತ್ತು 6 ಮೀಟರ್ ಅಗಲವಿದೆ.
- ಯಾನ್ಮನ್ ಮೌಂಟೇನ್ ನ್ಯಾಷನಲ್ ಪಾರ್ಕ್ನ ಕಣಿವೆಯಲ್ಲಿ ಸಮುದ್ರ ಮಟ್ಟದಿಂದ 430 ಮೀಟರ್ ಎತ್ತರದಲ್ಲಿ ಈ ಸೇತುವೆ ನಿರ್ಮಾಣಗೊಂಡಿದೆ. ಹಾಲಿವುಡ್‌ನ ಸೂಪರ್‌ಹಿಟ್ ಚಿತ್ರ "ಅವತಾರ್" ಕೆಲಭಾಗವನ್ನು ಇದೇ ಪಾರ್ಕ್ನ ಬೆಟ್ಟದ ತಪ್ಪಲಲ್ಲಿ ಶೂಟಿಂಗ್ ಮಾಡಲಾಗಿತ್ತು ಎಂಬುದು ವಿಶೇಷ.
- ಇಸ್ರೇಲ್ ನ ವಾಸ್ತುಶಿಲ್ಪಿ ಹೈಮ್ ಡೊಟನ್ ಈ ಸೇತುವೆಯನ್ನು ವಿನ್ಯಾಸಗೊಳಿಸಿದ್ದಾರೆ.
- ಈ ಸೇತುವೆಯ ನಿರ್ಮಾಣ ಡಿಸೆಂಬರ್ 2015 ರಂದು ಪೂರ್ಣಗೊಂಡಿತ್ತು. ಆದರೆ ಸುರಕ್ಷತ ಪರೀಕ್ಷೆಗಳನ್ನು ನಡೆಸಿದ ಮೇಲೆ ವೀಕ್ಷಕರಿಗೆ ಮುಕ್ತಗೊಳಿಸಲಾಗಿದೆ.
- ಪ್ರತಿದಿನ 8000 ಪ್ರವಾಸಿಗರಿಗೆ ಈ ಸೇತುವೆಯನ್ನು ವೀಕ್ಷಿಸಲು ಅವಕಾಶ ನೀಡಲಾಗುವುದು.

**ಬಾಂಗ್ಲದೇಶದ ಬಂಗಾಳಿ ಕೇಳುಗರಿಗೆ ಆಕಾಶವಾಣಿ ಮೈತ್ರಿ ಚಾನೆಲ್**

ಬಂಗಾಳಿ ಕೇಳುಗರಿಗಾಗಿ ಆಕಾಶವಾಣಿ ಮೈತ್ರಿ ಚಾನೆಲ್ ಮತ್ತು ಅದರ ವೆಬ್ ಸೈಟ್ ಅನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಕೊಲ್ಕತ್ತಾದಲ್ಲಿ ಉದ್ಘಾಟಿಸಿದರು. ಮೈತ್ರಿ ಚಾನೆಲ್ ಕೊಲ್ಕತ್ತ ಆಕಾಶವಾಣಿ ಕೇಂದ್ರದ ವಿಶಿಷ್ಟ ಯೋಜನೆಯಾಗಿದ್ದು, ಭಾರತ ಮತ್ತು ಬಾಂಗ್ಲಾದೇಶದ ಕೇಳುಗರಿಗೆ ಸಮಾನ ವೇದಿಕೆಯನ್ನು ಕಲ್ಪಿಸುವ ಉದ್ದೇಶದಿಂದ ಈ ಹೊಸ ವಾಹಿನಿಯನ್ನು ಆರಂಭಿಸಲಾಗಿದೆ.

- ಈ ವಾಹಿನಿಯನ್ನು ಹೊಸ ಬಗೆಯ ಅತಿ ಹೆಚ್ಚು ಸಾಮರ್ಥ್ಯ ಹೊಂದಿರುವ 1000kw DRM (Digital Radio Mondiale) ಟ್ರಾನ್ಸಮಿಟರ್ ಮೂಲಕ ಪ್ರಸಾರ ಮಾಡಲಾಗುವುದು.
- ಇದು ಮಧ್ಯಮ ತರಂಗದ ಮೂಲಕ ಬಾಂಗ್ಲದೇಶದ ಉದ್ದಗಲ ವಿಸ್ತರಿಸುವ ಸಾಮರ್ಥ್ಯವನ್ನು ಹೊಂದಿದೆ. ಅಲ್ಲದೇ ವೆಬ್ ಸೈಟ್ ಮತ್ತು ಮೊಬೈಲ್ ಆಪ್ ಮೂಲಕವೂ ಕೇಳಬಹುದಾಗಿದೆ.
- ಪ್ರಧಾನಿ ನರೇಂದ್ರ ಮೋದಿ 2015ರಲ್ಲಿ ಢಾಕಾಕ್ಕೆ ಭೇಟಿ ನೀಡಿದಾಗ ಹೊಸ ಚಾನೆಲ್ ವಿಚಾರ ಕಲ್ಪನೆಯನ್ನು ಹುಟ್ಟುಹಾಕಿದ್ದರು.

**ಆಕಾಶವಾಣಿ ಮೈತ್ರಿ:**

- ಬಾಂಗ್ಲದೇಶ ವಿಮೋಚನ ಚಳುವಳಿ 1971ರಲ್ಲಿ ಪಶ್ಚಿಮ ಬಂಗಾಳದಲ್ಲಿ ಆಲ್ ಇಂಡಿಯಾ ರೇಡಿಯೋ ಆಕಾಶವಾಣಿ ಮೈತ್ರಿಯನ್ನು ಆರಂಭಿಸಿತ್ತು. ಬಾಂಗ್ಲದೇಶ ವಿಭಜನೆಯ ಹೋರಾಟದಲ್ಲಿ ಈ ವಾಹಿನಿ ಐತಿಹಾಸಿಕ ಪಾತ್ರವಹಿಸಿತ್ತು. ಆದರೆ 2010ರಲ್ಲಿ ಸ್ಥಗಿತಗೊಳಿಸಲಾಗಿತ್ತು.

**ಪುನರ್ ಆರಂಭ ಏಕೆ?**

- ಭಾರತ ಮತ್ತು ಬಾಂಗ್ಲದೇಶ ನಡುವೆ ಸಂಬಂಧಗಳನ್ನು ಉತ್ತಮಪಡಿಸುವುದು.
- ಉಭಯ ದೇಶಗಳಲ್ಲಿ ಬಂಗಾಳಿ ಕೇಳುಗರನ್ನು ಆಕರ್ಷಿಸಿ, ಸಾಮರಸ್ಯ ಮೂಡಿಸುವುದು.
- ಈ ಪ್ರದೇಶದಲ್ಲಿ ಅಧಿಪತ್ಯ ಸಾಧಿಸಲು ಪ್ರಯತ್ನಿಸುತ್ತಿರುವ ಚೀನಾ ರೇಡಿಯೋದ ಪ್ರಭಾವವನ್ನು ತಗ್ಗಿಸುವುದು.

www.karunaduexams.com

**ಆಫ್ಘಾನಿಸ್ತಾನದ ಸ್ಟೋರ್ ಪ್ಯಾಲೆಸ್ (Stor Palace) ಲೋಕಾರ್ಪಣೆ ಮಾಡಿದ ಮೋದಿ**

ಪ್ರಧಾನಿ ನರೇಂದ್ರ ಮೋದಿ ಮತ್ತು ಆಫ್ಘಾನ್ ಅಧ್ಯಕ್ಷ ಆಶ್ರಫ್ ಘಾನಿ ಅವರು ಆಪ್ಘಾನಿಸ್ತಾನದ ಕಾಬೂಲ್ ನಲ್ಲಿ ನವೀಕರಿಸಲಾಗಿರುವ ಸ್ಟೋರ್ ಪ್ಯಾಲೆಸ್ ಅನ್ನು ಜಂಟಿಯಾಗಿ ವಿಡಿಯೋ ಸಂವಾದ ಮೂಲಕ ಲೋಕಾರ್ಪಣೆ ಮಾಡಿದರು. ಸ್ಟೋರ್ ಪ್ಯಾಲೆಸ್ ಆಪ್ಘಾನಿಸ್ತಾನದ ವಿದೇಶಾಂಗ ವ್ಯವಹಾರ ಸಚಿವಲಾಯದ ಆವರಣದಲ್ಲಿದ್ದು, ಹೊಸದಾಗಿ ನವೀಕರಿಸಲಾಗಿರುವ ಈ ಭವನದಲ್ಲಿ ಇನ್ನು ಮುಂದೆ ಆಪ್ಘಾನಿಸ್ತಾನದ ವಿದೇಶಾಂಗ ವ್ಯವಹಾರ ಸಚಿವಲಾಯ ಕಾರ್ಯನಿರ್ವಹಿಸಲಿದೆ. ಜೊತೆಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಭೆ ಸಮಾರಂಭಗಳು ಇಲ್ಲಿ ನಡೆಯಲಿವೆ.

**ಹಿನ್ನಲೆ:**

- ಸ್ಟೋರ್ ಪ್ಯಾಲೆಸ್ ನವೀಕರಿಸುವ ತ್ರಿಪಕ್ಷೀಯ ಒಪ್ಪಂದಕ್ಕೆ ಸಂಬಂಧ ಅಂದಿನ ಭಾರತದ ಪ್ರಧಾನಿ ಮನಮೋಹನ್ ಸಿಂಗ್ ಅವರು ಆಪ್ಘಾನಿಸ್ತಾನಕ್ಕೆ ಭೇಟಿ ನೀಡಿದ್ದ ವೇಳೆ ಸಹಿ ಹಾಕಿದ್ದರು. ಅಗಾ ಖಾನ್ ಡೆವಲಪ್ಮೆಂಟ್ ನೆಟವರ್ಕ್, ಆಪ್ಘಾನಿಸ್ತಾನ ಸರ್ಕಾರ ಮತ್ತು ಭಾರತ ಸರ್ಕಾರ ಈ ಒಪ್ಪಂದಕ್ಕೆ ಸಹಿಹಾಕಿದ್ದವು.

**ಆಪ್ಘಾನಿಸ್ತಾನ ಅಭಿವೃದ್ಧಿಗೆ ಭಾರತ ಕೊಡುಗೆ:**

- ಭಾರತ ಕಳೆದ ಕೆಲವು ವರ್ಷಗಳಿಂದ ಆಪ್ಘಾನಿಸ್ತಾನದಲ್ಲಿ ಪುನರ್ನಿಮಾಣ ಮತ್ತು ಪುನರ್ವಸತಿ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದೆ.
- ಕಳೆದ ಜೂನ್ 2016 ರಲ್ಲಿ ಆಪ್ಘಾನ್ ಹೆರಾತ್ ಪ್ರಾಂತ್ಯದಲ್ಲಿ ಭಾರತ ನೆರವಿನಿಂದ ನಿರ್ಮಿಸಲಾದ $300 ಮಿಲಿಯನ್ ಭಾರತ ಮತ್ತು ಆಪ್ಘಾನಿಸ್ತಾನ ಫ್ರೆಂಡ್ ಶಿಪ್ ಡ್ಯಾಂ ಅನ್ನು ಲೋಕಾರ್ಪಣೆಗೊಳಿಸಿದ್ದವು. 2015 ಡಿಸೆಂಬರ್ ನಲ್ಲಿ ಭಾರತ ಆಪ್ಘಾನಿಸ್ತಾನದಲ್ಲಿ ಹೊಸ ಸಂಸತ್ ಭವನವನ್ನು ನಿರ್ಮಿಸಿ ಕೊಡುಗೆಯಾಗಿ ನೀಡಿತ್ತು.
- ಇಲ್ಲಿಯವರೆಗೆ ಭಾರತ ಸರಿಸುಮಾರು $2 ಬಿಲಿಯನ್ ಡಾಲರ್ ನೆರವನ್ನು ಆಪ್ಘಾನಿಸ್ತಾನದ ಪುನರ್ನಿಮಾಣ ಮತ್ತು ಪುನರ್ವಸತಿ ಕಲ್ಪಿಸುವ ವಿವಿಧ ಯೋಜನೆಗಳಿಗೆ ನೆರವು ನೀಡಿದೆ.

**ಜಗತ್ತಿನ ಅತಿ ದೊಡ್ಡ ಸಾಗರ ಸಂರಕ್ಷಿತ ಪ್ರದೇಶ (Marine Protected Area) ರಚಿಸದ ಅಮೆರಿಕ**

ವಿಶ್ವದ ಅತಿದೊಡ್ಡ ಸಾಗರ ಸಂರಕ್ಷಿತ ಪ್ರದೇಶವನ್ನು ಅಮೆರಿಕಾದಲ್ಲಿ ರಚಸಿಲಾಗಿದೆ. ಪಾಪಾನೊಮೌಕ್ವಕಿ ಸಾಗರ ರಾಷ್ಟ್ರೀಯ ಸ್ಮಾರಕ (Papahanaumokuakea Marine National Monument)ಹೆಸರಿನ ಈ ಸಂರಕ್ಷಿತ ಪ್ರದೇಶವನ್ನು ಪ್ರಸ್ತುತ ಇರುವ ಹವಾಯಿ ರಾಷ್ಟ್ರೀಯ ಸ್ಮಾರಕ ಪ್ರದೇಶದ ವಿಸ್ತೀರ್ಣವನ್ನು ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮರವರು ವಿಸ್ತರಿಸಿದ್ದು ಜಗತ್ತಿನ ಅತಿ ದೊಡ್ಡ ಸಾಗರ ಸಂರಕ್ಷಿತ ಪ್ರದೇಶವೆನಿಸಿದೆ.

- ವಿಸ್ತರಣದ ನಂತರ ಪಾಪಾನೊಮೌಕ್ವಕಿ ಸಾಗರ ರಾಷ್ಟ್ರೀಯ ಸ್ಮಾರಕದ ವಿಸ್ತೀರ್ಣತೆ 582,578 ಚದರ ಮೀಟರಷ್ಟಿದ್ದು, ಮೂಲ ವಿಸ್ತೀರ್ಣತೆಗಿಂತ ನಾಲ್ಕುಪಟ್ಟು ಹೆಚ್ಚಾಗಿದೆ.
- ಈ ಪ್ರದೇಶದ ವಿಸ್ತರಣೆತೆಯಿಂದ ಸುಮಾರು 7000ಕ್ಕೂ ಹೆಚ್ಚು ಪ್ರಭೇದಗಳ ಸಂರಕ್ಷಣೆಗೆ ಅನುಕೂಲವಾಗಲಿದೆ. ಅಲ್ಲದೇ ಸಾಗರ ಆಮ್ಲೀಕರಣ ಮತ್ತು ತಾಪಾಮಾನ ನಿರ್ವಹಣೆಯಲ್ಲೂ ಪ್ರಮುಖ ಪಾತ್ರವಹಿಸಲಿದೆ.
- ಈ ಸಾಗರ ಸಂರಕ್ಷಿತ ಪ್ರದೇಶವೂ ಹವಳದ ಬಂಡೆಗಳಿಗೆ ಶಾಶ್ವತ ನೆಲೆ ಕಲ್ಪಿಸಲಿದೆ. ಅಲ್ಲದೇ ಅಪರೂಪದ ತಿಮಿಂಗಿಲ ಮತ್ತು ಸಮುದ್ರ ಆಮೆಗಳಂತಹ ಸಮುದ್ರ ಆಳದಲ್ಲಿ ಜೀವಿಸುವ ಜಲಜೀವಿಗಳ ವಾಸಕ್ಕೆ ಯೋಗ್ಯ ನೆಲೆಯಾಗಲಿದೆ.

www.karunaduexams.com

- 2006ರಲ್ಲಿ ಮೊದಲ ಬಾರಿಗೆ ಜಾರ್ಜ್ ಬುಷ್ ಅವರು ಈ ಪ್ರದೇಶವನ್ನು ಸಾಗರ ಸಂರಕ್ಷಿತ ಪ್ರದೇಶವೆಂದು ಘೋಷಿಸಿದ್ದರು. ಆಗ ಇದನ್ನು ನಾರ್ಥ್ ವೆಸ್ಟರ್ನ್ ಐಲ್ಯಾಂಡ್ಸ್ ಮೆರೈನ್ ನ್ಯಾಷನಲ್ ಮೊನುಮೆಂಟ್ ಎಂದು ಹೆಸರಿಡಲಾಗಿತ್ತು. ತದನಂತರ ಇದನ್ನು ಪಾಪಾನೊಮೌಕ್ಯುಕಿ ಸಾಗರ ರಾಷ್ಟ್ರೀಯ ಸ್ಮಾರಕವೆಂದು ಮರುನಾಮಕರಣ ಮಾಡಲಾಯಿತು.

**<u>ಪಾಕಿಸ್ತಾನದ ಇಸ್ಲಮಾಬಾದ್ ನಲ್ಲಿ 19ನೇ ಸಾರ್ಕ್ ಸಮ್ಮೇಳನ</u>**

ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಒಕ್ಕೂಟ (SAARC) ರಾಷ್ಟ್ರಗಳ 19ನೇ ಸಮ್ಮೇಳನ ಪಾಕಿಸ್ತಾನದ ಇಸ್ಲಮಾಬಾದ್ ನಲ್ಲಿ ನವೆಂಬರ್ 9-10 ರಂದು ನಡೆಯಲಿದೆ. ಈ ಸಮ್ಮೇಳನದಲ್ಲಿ ಸಾರ್ಕ್ನ ಎಂಟು ರಾಷ್ಟ್ರಗಳ ನಾಯಕರು ಭಾಗವಹಿಸಲಿದ್ದಾರೆ. ಇದರ ಜೊತೆ ಸಾರ್ಕ್ ವೀಕ್ಷಣಾ ಸ್ಥಾನಪಡೆದಿರುವ ಒಂಬತ್ತು ರಾಷ್ಟ್ರಗಳು ಸಹ ಪಾಲ್ಗೊಳ್ಳಲಿವೆ. 18ನೇ ಸಾರ್ಕ್ ಸಮ್ಮೇಳನ 2014 ರಲ್ಲಿ ನೇಪಾಳದ ಕಠ್ಮಂಡುವಿನಲ್ಲಿ ಆಯೋಜಿಸಲಾಗಿತ್ತು. ಈ ಸಮ್ಮೇಳನದಲ್ಲಿ ಸಾರ್ಕ್ ರಾಷ್ಟ್ರಗಳ ನಡುವೆ ವ್ಯವಸ್ಥಿತ ಸಂಪರ್ಕ ಕಲ್ಪಿಸಿ ಸಾರಿಗೆ ಸೌಲಭ್ಯ ಅಭಿವೃದ್ದಿಪಡಿಸಲು ಹೆಚ್ಚು ಒತ್ತು ನೀಡಲಾಗಿತ್ತು.

**ಸಾರ್ಕ್ ಬಗ್ಗೆ:**

- ಸಾರ್ಕ್ ದಕ್ಷಿಣ ಏಷ್ಯಾದ ಒಂದು ಪ್ರಾದೇಶೀಕ ಹಾಗೂ ಭೌಗೋಳಿಕ-ರಾಜಕೀಯ ಒಕ್ಕೂಟವಾಗಿದೆ. ವಿಶ್ವದ ಶೇ 3% ವಿಸ್ತೀರ್ಣತೆ, ಶೇ 21% ವಿಶ್ವದ ಜನಸಂಖ್ಯೆಯನ್ನು ಇದು ಹೊಂದಿದೆ.
- ಬಾಂಗ್ಲದೇಶದ ಮಾಜಿ ಅಧ್ಯಕ್ಷರಾದ ಝಿಯಿರ್ ರೆಹಮಾನ್ ಅವರು 1980 ರಲ್ಲಿ ಸಾರ್ಕ್ ಒಕ್ಕೂಟದ ಕಲ್ಪನೆಯನ್ನ ಹುಟ್ಟುಹಾಕಿದರು. ಆನಂತರ 1985 ರಲ್ಲಿ ಸಾರ್ಕ್ ಒಕ್ಕೂಟವನ್ನು ರಚಿಸಲಾಯಿತು. ಇದರ ಮೊದಲ ಸಮ್ಮೇಳನ ಬಾಂಗ್ಲದೇಶದ ಡಾಕಾದಲ್ಲಿ ಡಿಸೆಂಬರ್ 1985ರಲ್ಲಿ ನಡೆಯಿತು. ಸಾರ್ಕ್ ಕೇಂದ್ರ ಕಚೇರಿ ನೇಪಾಳದ ಕಠ್ಮಂಡುವಿನಲ್ಲಿದೆ.
- ಬಾಂಗ್ಲಾದೇಶ, ಭೂತಾನ, ಭಾರತ, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ, ಮತ್ತು ಶ್ರೀಲಂಕಾ ಇದರ ಮೂಲ ಸದಸ್ಯ ರಾಷ್ಟ್ರಗಳಾಗಿದ್ದವು. 2006ರಲ್ಲಿ ಈ ಸಮೂಹದ ಎಂಟನೇ ಸದಸ್ಯನಾಗಿ ಅಫ್ಘಾನಿಸ್ತಾನವನ್ನು ಸೇರಿಸಿಕೊಳ್ಳಲಾಯಿತು.
- ಆಸ್ಟ್ರೇಲಿಯಾ, ಚೀನಾ, ಯುರೋಪಿಯನ್ ಯೂನಿಯನ್, ಜಪಾನ್, ಇರಾನ್, ಮಾರಿಷಸ್, ಮಯನ್ಮಾರ್, ದಕ್ಷಿಣ ಕೊರಿಯಾ ಮತ್ತು ಅಮೆರಿಕಾ ಸಾರ್ಕ್ ನ ಒಂಬತ್ತು ವೀಕ್ಷಣಾ (Observer) ರಾಷ್ಟ್ರಗಳಾಗಿವೆ.
- ಅರ್ಜುನ್ ಬಹದ್ದೂರ್ ಥಾಪ ರವರು ಸಾರ್ಕ್ ನ ಪ್ರಸ್ತುತ ಸೆಕ್ರೆಟರಿ ಜನರಲ್ ಆಗಿದ್ದಾರೆ.

www.karunaduexams.com

**<u>ಪರಸ್ಪರ ಸಹಕಾರ: ಭಾರತ-ಮ್ಯಾನ್ಮಾರ್ ನಾಲ್ಕು ಪ್ರಮುಖ ಒಪ್ಪಂದಗಳಿಗೆ ಸಹಿ</u>**

ಭಾರತ ಮತ್ತು ಮಯನ್ಮಾರ್ ನಡುವೆ ಪರಸ್ಪರ ಸಹಕಾರ ಮತ್ತು ಸಂಬಂಧವನ್ನು ಉತ್ತಮಗೊಳಿಸುವ ಸಲುವಾಗಿ ಉಭಯದೇಶಗಳು ನಾಲ್ಕು ಪ್ರಮುಖ ಒಪ್ಪಂದಗಳಿಗೆ ಸಹಿಹಾಕಿದವು. ಭಾರತ ಭೇಟಿಯಲ್ಲಿರುವ ಮ್ಯಾನ್ಮಾರ್ ಅಧ್ಯಕ್ಷ ಯು ತಿನ್ ಕ್ಯಾವ್ ಮತ್ತು ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ನಡುವೆ ನಡೆದ ಉನ್ನತ ಮಟ್ಟದ ಮಾತುಕತೆ ಸಂದರ್ಭದಲ್ಲಿ ಈ ಒಪ್ಪಂದಗಳಿಗೆ ಸಹಿಹಾಕಿದರು. ಯು ತಿನ್ ಕ್ಯಾವ್ ಅವರು ಭಾರತಕ್ಕೆ ಭೇಟಿ ನೀಡಿದ ಮ್ಯಾನ್ಮಾರ್ ಪ್ರಜಾಪ್ರಭುತ್ವದಿಂದ ಆಯ್ಕೆಯಾದ ಮೊದಲ ಅಧ್ಯಕ್ಷ.

**ಸಹಿಮಾಡಲಾದ ಒಪ್ಪಂದಗಳು**:

- ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಒಪ್ಪಂದ
- 69 ಸೇತುವೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಒಪ್ಪಂದ
- ಸಾಂಪ್ರದಾಯಿಕ ಔಷಧ ಪದ್ಧತಿಗೆ ಸಂಬಂಧಿಸಿದಂತೆ ಒಪ್ಪಂದ
- ಕಲೆವ-ಯಾಗ್ಯಿ ರಸ್ತೆ ನಿರ್ಮಾಣ ಮತ್ತು ಉನ್ನತೀಕರಣಕ್ಕೆ ಸಂಬಂಧಿಸಿದ ಒಪ್ಪಂದ

**ಕೇಂದ್ರ ಸಂಪುಟ ಜನಸಾಮಾನ್ಯ ಇನ್ನೋವೇಶನ್ ಸಹಕಾರ ಸ್ಥಾಪಿಸಲು ದಕ್ಷಿಣ ಆಫ್ರಿಕಾ ಜೊತೆ ಒಪ್ಪಂದಕ್ಕೆ ಒಪ್ಪಿಗೆ**

- ಕೇಂದ್ರ ಸಂಪುಟ ಜನಸಾಮಾನ್ಯ ಇನ್ನೋವೇಶನ್ ಸಹಕಾರ ಸ್ಥಾಪಿಸಲು ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಅಂಡಸ್ಟ್ಯಾಂಡಿಂಗ್ (ಒಪ್ಪಂದಕ್ಕೆ) ಒಂದು ಮೆಮೊರಾಂಡಮ್ ಸಹಿ apprised ಮಾಡಲಾಗಿದೆ. ಒಪ್ಪಂದಕ್ಕೆ ಅಂತರ್ ಸರ್ಕಾರದ ಪ್ರಿಟೋರಿಯಾ, ದಕ್ಷಿಣ ಆಫ್ರಿಕಾ ಜುಲೈ, 2016 ರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಹಕಾರ ಎರಡು ದೇಶಗಳ ನಡುವಿನ ಒಪ್ಪಂದಕ್ಕೆ ಅನುಗುಣವಾಗಿ ಸಹಿ. ಈ ಒಪ್ಪಂದಕ್ಕೆ ಅಡಿಯಲ್ಲಿ ಎರಡೂ ದೇಶಗಳಲ್ಲಿ ಜಂಟಿಯಾಗಿ ಇಂತಹ ವೇದಿಕೆಗಳು, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಮತ್ತು ನಾವೀನ್ಯತೆ ಸಂಬಂಧಿಸಿದ ವಿಷಯಗಳ ತರಬೇತಿ ವಿವಿಧ ಕಾರ್ಯಕ್ರಮಗಳ ಸಂಘಟಿಸಲು ಕಾಣಿಸುತ್ತದೆ. ಅವರು ಪರಸ್ಪರ ಮುಕ್ತ ಮೂಲ ತಂತ್ರಜ್ಞಾನಗಳು ಹಂಚಿಕೊಳ್ಳುತ್ತೇವೆ ಮತ್ತು ಜಂಟಿಯಾಗಿ ನಿಲ್ಲಬಲ್ಲುದಾಗಿ ನಾವೀನ್ಯತೆಗಳ ತಮ್ಮ ಭಾವನೆಗಳನ್ನು ಪರಿವರ್ತಿಸುವ ಹೊಸತನದ ಸಹಾಯ ಮಾಡಲು ಯೋಜನೆಗಳಿಗೆ. ಒಪ್ಪಂದಕ್ಕೆ ಎರಡೂ ದೇಶಗಳಲ್ಲಿ ಮೂಲಭೂತ ಮಟ್ಟದಲ್ಲಿ ಸೇರಿದೆ ನಾವೀನ್ಯತೆ ಮತ್ತು ಉದ್ಯಮಶೀಲತೆ ಪ್ರಚಾರ ಎಂದು ಒಂದು ಪರಿಸರ ಸೃಷ್ಟಿಸುವಲ್ಲಿ ವ್ಯವಸ್ಥೆ ಮತ್ತು ಸಹಾಯ ಒದಗಿಸುತ್ತದೆ. ಇದು ಸ್ಥಳೀಯ ಜ್ಞಾನ ವ್ಯವಸ್ಥೆಗಳು ಮತ್ತು ಕೃಷಿ ಜೈವಿಕ ತಂತ್ರಜ್ಞಾನ ಮೇಲೆ ವಿಶೇಷ ಗಮನ ನೀಡುತ್ತದೆ.

**ಕೇಂದ್ರ ಸಂಪುಟ ಒಪ್ಪಿಗೆ ಪರಿಷ್ಕೃತ ಭಾರತ-ಸೈಪ್ರಸ್ ಡಬಲ್ ತೆರಿಗೆ ತಪ್ಪಿಸುವುದು ಒಪ್ಪಂದ**

- ಕೇಂದ್ರ ಸಂಪುಟ ಭಾರತ ಮತ್ತು ಸೈಪ್ರಸ್ ನಡುವೆ ಆದಾಯ ತೆರಿಗೆಯನ್ನು ಸಂಬಂಧಿಸಿದಂತೆ ಪರಿಷ್ಕೃತ ಡಬಲ್ ತೆರಿಗೆ ತಪ್ಪಿಸುವುದು ಒಪ್ಪಂದ (DTAA) ಮತ್ತು ಹಣಕಾಸಿನ ತಪ್ಪಿಸಿಕೊಳ್ಳುವಿಕೆ ತಡೆ ಅನುಮೋದನೆ. ಪರಿಷ್ಕೃತ DTAA ನಿವಾಸ ಆಧರಿಸಿ ಬದಲಿಗೆ ಒಂದು ಷೇರುಗಳ ವರ್ಗಾವಣೆ ಬಂಡವಾಳ ಗಳಿಕೆಗಳ ಮೂಲ ಆಧಾರಿತ ತೆರಿಗೆ ಒದಗಿಸುತ್ತದೆ. ಹೀಗಾಗಿ, ಇದು ತೆರಿಗೆ, ಸುತ್ತಿನಲ್ಲಿ ಮುಗ್ಗರಿಸಿ ಬೀಳುವುದನ್ನು ಮತ್ತು ಬೇಸ್ ಸವೆತ / ಲಾಭ ಬದಲಾಯಿಸುವ ವಿರುದ್ಧ

ಹೋರಾಟದಲ್ಲಿ ಒಂದು ಪ್ರಮುಖ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಇದು ಭಾರತ ಉದ್ಭವವಾಗುವ ಬಂಡವಾಳ ಲಾಭಗಳು ತೆರಿಗೆ ಹಕ್ಕನ್ನು ಹೊಂದಲು ಅನುಮತಿಸುತ್ತದೆ. ಇದು ಮತ್ತಷ್ಟು ತೆರಿಗೆ ತಪ್ಪಿಸುವ ಸಲುವಾಗಿ ನಿವಾಸ ಆಧಾರಿತ ತೆರಿಗೆ ಹಿಂದಿನ ಒಪ್ಪಂದದ ನಿಬಂಧನೆಗಳನ್ನು ಉಂಟಾಗುವ ಅಸ್ಪಷ್ಟತೆ ತೆಗೆದುಹಾಕುತ್ತದೆ. ಹಿನ್ನೆಲೆ ಭಾರತ ಮತ್ತು ಸೈಪ್ರಸ್ DTAA 1994 ರಲ್ಲಿ ಸೈಪ್ರಸ್ ವಿದೇಶಿ ನಿಧಿಗಳ ಒಂದು ಪ್ರಮುಖ ಮೂಲವಾಗಿದೆ ಭಾರತದಲ್ಲಿ ಹರಿಯುತ್ತದೆ ಸಹಿಹಾಕಿದ್ದರು. ಏಪ್ರಿಲ್ 2000 ರಿಂದ ಮಾರ್ಚ್ 2016 ರ ವರೆಗೆ ಭಾರತದ ವಿದೇಶಿ ನೇರ ಹೂಡಿಕೆ (ಎಫ್ಡಿಐ) 42,680.76 ಕೋಟಿ ರೂ.ಗಳ ಸೈಪ್ರಸ್ ನಿಂದ ಪಡೆದರು. ಸೈಪ್ರಸ್ ಮನಿ ಲಾಂಡರಿಂಗ್, ರೌಂಡ್ ಮುಗ್ಗರಿಸಿ ಬೀಳುವುದನ್ನು, ಮತ್ತು ಲಾಭ ಬದಲಾಯಿಸುವ ಪ್ರಮುಖ ಧಾಮ ಪರಿಗಣಿಸಲಾಗುತ್ತದೆ. ಪರಿಷ್ಕೃತ DTAA ಮಹತ್ವ ಮಾರಿಷಸ್ ಪರಿಷ್ಕೃತ ಒಪ್ಪಂದ ಸಹಿ ನಂತರ ಶೀಘ್ರದಲ್ಲೇ ಬರಲಿದೆ ಭಾವಿಸುತ್ತದೆ. ಡಬಲ್ ಟ್ಯಾಕ್ಸೇಶನ್ ಅವಾಯ್ಡೆನ್ಸ್ ಒಪ್ಪಂದ (DTAA) ಏನು? ಒಂದು DTAA ತಪ್ಪಿಸಲು ಅಥವಾ ಎರಡು ದೇಶಗಳಲ್ಲಿ ಅದೇ ಆದಾಯದ ಡಬಲ್ ಟ್ಯಾಕ್ಸೇಷನ್ ತೊಡೆದುಹಾಕಲು ಗುರಿ ಎಂದು ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ಆರ್ಥಿಕ ಒಪ್ಪಂದ. ಇದು ಒಂದು ತೆರಿಗೆ ಒಡಂಬಡಿಕೆ ಕರೆಯಲಾಗುತ್ತದೆ.

www.karunaduexams.com

# ಪ್ರಶಸ್ತಿಗಳು

**ಪ್ರೋ ಸಿ.ಎನ್.ಆರ್ ರಾವ್ ಗೆ ಗಣಿತತಜ್ಞ "ಭಾಸ್ಕರ" ಪ್ರಶಸ್ತಿ**

ಹಿರಿಯ ವಿಜ್ಞಾನಿ, ಭಾರತ ರತ್ನ ಪುರಸ್ಕೃತ ಪ್ರೋ ಚಿಂತಾಮಣಿ ನಾಗೇಶ ರಾಮಚಂದ್ರ ರಾವ್ ರವರನ್ನು ವಿಜಯಪುರ ಜಿಲ್ಲೆಯ ಸಿಂದಗಿ ಸಾರಂಗಮಠದ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನ ನೀಡುತ್ತಿರುವ ಮೊದಲ 'ಭಾಸ್ಕರ' ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಗಣಿತತಜ್ಞ, ಖಗೋಳವಿಜ್ಞಾನಿ ಭಾಸ್ಕರಾಚಾರ್ಯರ (ಭಾಸ್ಕರ-2) ಸ್ಮರಣಾರ್ಥ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ಪ್ರಶಸ್ತಿಯು 1 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ವಿಜ್ಞಾನ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದವರಿಗೆ ಪ್ರತಿ ವರ್ಷ ಪ್ರಶಸ್ತಿಯನ್ನು ನೀಡಲಾಗುವುದೆಂದು ಪ್ರತಿಷ್ಠಾನ ತಿಳಿಸಿದೆ.

**ಸಿ.ಎನ್.ಆರ್. ರಾವ್ ಬಗ್ಗೆ:**

- ಚಿಂತಾಮಣಿ ನಾಗೇಶ ರಾಮಚಂದ್ರ ರಾವ್ ರವರು ಜೂನ್ 30, 1934 ರಲ್ಲಿ ಜನಸಿದ್ದಾರೆ. ರಾವ್ ರವರು ವಿಶ್ವ ಪ್ರಸಿದ್ದ ವಿಜ್ಞಾನಿಯಾಗಿದ್ದು, ರಸಾಯನಶಾಸ್ತ್ರ ವಿಭಾಗದಲ್ಲಿ ಅಪಾರ ಸಾಧನೆ ಮಾಡಿದ್ದಾರೆ. ಇವರು ಮುಖ್ಯವಾಗಿ ಸಾಲಿಡ್ ಸ್ಟೇಟ್ ಮತ್ತು ಸ್ರಕ್ಚರಲ್ ಕೆಮಿಸ್ಟ್ರಿಯಲ್ಲಿ ಸಾಕಷ್ಟು ಸಂಶೋಧನೆ ನಡೆಸಿದ್ದಾರೆ.
- ಪ್ರಸ್ತುತ ಇವರು ಪ್ರಧಾನಿ ಮಂತ್ರಿಗಳ ವೈಜ್ಞಾನಿಕ ಸಲಹಾ ಸಮಿತಿಯ ಮುಖ್ಯಸ್ಥರಾಗಿದ್ದಾರೆ.
- ಸುಮಾರು 60 ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪಡೆದಿರುವ ಇವರು, 1500 ಕ್ಕೂ ಹೆಚ್ಚು ಸಂಶೋಧನಾ ಪತ್ರಿಕೆಗಳನ್ನು ಹಾಗೂ 60 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.
- ವಿಜ್ಞಾನ ಕ್ಷೇತ್ರಕ್ಕೆ ಇವರ ಕೊಡುಗೆಯನ್ನು ಗಮನಿಸಿ ಭಾರತ ಸರ್ಕಾರ ಇವರಿಗೆ ಭಾರತದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಭಾರತ ರತ್ನ ಪ್ರಶಸ್ತಿಯನ್ನು 2014 ರಲ್ಲಿ ನೀಡಿ ಗೌರವಿಸಿದೆ. ಸರ್ ಸಿ ವಿ ರಾಮನ್ ಹಾಗೂ ಎ.ಪಿ.ಜೆ ಅಬ್ದುಲ್ ಕಲಂ ನಂತರ ಭಾರತ ರತ್ನ ಪ್ರಶಸ್ತಿ ಪಡೆದ ಮೂರನೇ ವಿಜ್ಞಾನಿ ಇವರು.
- ಅನೇಕ ವಿದೇಶಿ ಪ್ರಶಸ್ತಿಗಳಿಗೂ ಭಾಜನರಾಗಿರುವ ಇವರಿಗೆ 1974 ರಲ್ಲಿ ಪದ್ಮ ಪ್ರಶಸ್ತಿ, 1985 ರಲ್ಲಿ ಪದ್ಮ ವಿಭೂಷಣ ಸಹ ದೊರೆತಿದೆ. ಕರ್ನಾಟಕ ರಾಜ್ಯ ಸರ್ಕಾರ ನೀಡುವ ಕರ್ನಾಟಕ ರತ್ನ ಪ್ರಶಸ್ತಿಯನ್ನು 2001 ರಲ್ಲಿ ಇವರಿಗೆ ನೀಡಲಾಗಿದೆ.

**ಶುಭಾ ಮುದ್ಗಲ್ ಗೆ ರಾಜೀವ್ ಗಾಂಧೀ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿ**

ಪ್ರಸಿದ್ದ ಗಾಯಕಿ ಶುಭಾ ಮುದ್ಗಲ್ ರವರನ್ನು ಪ್ರತಿಷ್ಠಿತ 23ನೇ ರಾಜೀವ್ ಗಾಂಧೀ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಕೋಮು ಸೌಹರ್ದತೆ, ಶಾಂತಿ ಮತ್ತು ಅಭಿಮಾನ ಪ್ರಚಾರಕ್ಕಾಗಿ ಶುಭಾ ರವರು ನೀಡಿದ ಮಹೋನ್ನತ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**ಶುಭಾ ಮುದ್ಗಲ್ ಬಗ್ಗೆ:**

- ಶುಭಾ ಮುದ್ಗಲ್ ರವರು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಾದಲ್ಲಿ ಪರಿಣಿತಿ ಹೊಂದಿರುವ ಪ್ರಸಿದ್ದ ಗಾಯಕಿ. ಅಲ್ಲದೇ ತುಮ್ರಿ, ಖಾಯಲ್, ದಾದ್ರ ಮತ್ತು ಭಾರತೀಯ ಪಾಪ್ ಸಂಗೀತದಲ್ಲೂ ಅಪಾರ ಜ್ಞಾನ ಹೊಂದಿದ್ದಾರೆ.
- ಸಂಗೀತಾ ಕ್ಷೇತ್ರಕ್ಕೆ ಇವರ ಕೊಡುಗೆಯನ್ನು ಪರಿಗಣಿಸಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು 2000 ವರ್ಷದಲ್ಲಿ ನೀಡಿ ಗೌರವಿಸಿದೆ. ಅಮೃತ್ ಬೀಜ್ ಚಿತ್ರಕ್ಕಾಗಿ ನೀಡಿದ ಇವರ ಸಂಗೀತಾ ನಿರ್ದೇಶನಕ್ಕಾಗಿ 1996 ರಲ್ಲಿ ರಾಷ್ಟ್ರೀಯ ಸಿನಿಮಾ ಪ್ರಶಸ್ತಿಯನ್ನು ನೀಡಲಾಗಿದೆ.

www.karunaduexams.com

**ರಾಜೀವ್ ಗಾಂಧೀ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿ ಬಗ್ಗೆ:**

- ರಾಜೀವ್ ಗಾಂಧೀ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿಯನ್ನು ಪ್ರತಿ ವರ್ಷ ಆಗಸ್ಟ್ 20 ರಂದು ಭಾರತದ ಮಾಜಿ ಪ್ರಧಾನಿಯಾದ ದಿವಂಗತ ರಾಜೀವ್ ಗಾಂಧೀ ರವರ ಹುಟ್ಟುಹಬ್ಬದ ಸ್ಮರಣಾರ್ಥ ನೀಡಲಾಗುತ್ತಿದೆ.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಅಲ್ ಇಂಡಿಯಾ ಕಾಂಗ್ರೆಸ್ ಸಮಿತಿ ಈ ಪ್ರಶಸ್ತಿಯನ್ನು 1992 ರಲ್ಲಿ ಸ್ಥಾಪಿಸಿದೆ. ಪ್ರಶಸ್ತಿಯು 10 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ.
- ಕೋಮು ಸೌಹರ್ದತೆ, ಶಾಂತಿ ಮತ್ತು ಅಹಿಂಸೆಗೆ ರಾಜೀವ್ ಗಾಂಧೀ ರವರು ನೀಡಿದ ಕೊಡುಗೆಯನ್ನು ಸ್ಮರಿಸುವ ಸಲುವಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.
- ಮದರ್ ಥೆರೆಸಾ, ಮಹಮದ್ ಯೂನಸ್, ಲತಾ ಮಂಗೇಶ್ಕರ್, ಉಸ್ತದ್ ಬಿಸ್ಮಿಲ್ಲಾ ಖಾನ್ ಮತ್ತು ಉಸ್ತದ್ ಅಮ್ಜದ್ ಅಲಿ ಖಾನ್ ಈ ಪ್ರಶಸ್ತಿಯನ್ನು ಪಡೆದ ಪ್ರಮುಖರು.

**<u>ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 2016-17ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಪ್ರಕಟ</u>**

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ನೀಡುವ ಕರ್ನಾಟಕ ಕಲಾಶ್ರೀ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ಕಲಾವಿದರನ್ನು ಆಯ್ಕೆ ಮಾಡಲು ಕಲಾವಿದರ ಪ್ರತಿಭೆ, ಸೇವಾ ಹಿರಿತನ, ಶಿಷ್ಯರನ್ನು ತಯಾರು ಮಾಡಿರುವುದು, ಗ್ರಂಥಗಳ ರಚನೆ, ಪ್ರಸ್ತುತ ಸಂಬಂಧಪಟ್ಟ ಪ್ರಕಾರಕ್ಕೆ ಮಾಡುತ್ತಿರುವ ಸೇವೆ ಇವುಗಳನ್ನೆಲ್ಲ ಗಣನೆಗೆ ತೆಗೆದುಕೊಳ್ಳಲಾಗಿದೆ. 2016-17ನೇ ಸಾಲಿನ ಪ್ರತಿಷ್ಠಿತ 'ಕರ್ನಾಟಕ ಕಲಾಶ್ರೀ' ವಾರ್ಷಿಕ ಪ್ರಶಸ್ತಿಗೆ ಖ್ಯಾತ ತಬಲಾ ವಾದಕ (ಹಿಂದುಸ್ತಾನಿ) ಧಾರವಾಡದ ಪಂ. ರವೀಂದ್ರ ಯಾವಗಲ್ ಮತ್ತು ಗಮಕ ಕಲಾವಿದ ಕಾಸರಗೋಡಿನ ಸುಬ್ರಹ್ಮಣ್ಯ ಭಟ್ ಆಯ್ಕೆಯಾಗಿದ್ದಾರೆ.

**ಇತರೆ ಪ್ರಶಸ್ತಿಗಳು**

- **ವಾರ್ಷಿಕ ಪ್ರಶಸ್ತಿ ಕರ್ನಾಟಕ ಸಂಗೀತ ಗಾಯನ**: ಡಾ. ಕೆ. ವರದರಂಗನ್ ಬೆಂಗಳೂರು ಪಿಟೀಲು- ನಾಗರತ್ನಮ್ಮ ಮೈಸೂರು ಮೃದಂಗ-ಸೂರ್ಯನಾರಾಯಣಾಚಾರ್ಯ ಕೋಲಾರ ಮೋರ್ಚಿಂಗ್ - ಗುರುರಾಜ್ ಬಳ್ಳಾರಿ
- **ಹಿಂದುಸ್ತಾನಿ ಸಂಗೀತ ಗಾಯನ**: ಪರಮೇಶ್ವರ ಹೆಗಡೆ ಹೊನ್ನಾವರ ಉ.ಕ ಗಾಯನ- ರಾಮುಲ ಗಾದಗಿ ಬೀದರ್ ತಬಲ- ಬಂಡೋಪಂತ್ ಕುಲಕರ್ಣಿ ಬೆಳಗಾವಿ.
- **ಸುಗಮ ಸಂಗೀತ:** ಆಮಯ್ಯಮಠ ಯಾದಗಿರಿ ವೀರೇಶ ಕಿತ್ತೂರ ಗದಗ ಸುಕುಮಾರ ಬಾಬು ಬೆಂಗಳೂರು (ಲಯವಾದ್ಯ)
- **ನೃತ್ಯ:** ಶೀಲಾ ಶ್ರೀಧರ್ ಮೈಸೂರು ಸತ್ಯನಾರಾಯಣರಾಜು ಬೆಂಗಳೂರು ಪೂರ್ಣಿಮಾ ಅಶೋಕ್ ಬೆಂಗಳೂರು ಕಥಾಕೀರ್ತನ-ಹನುಮಂತದಾಸ್ ತುಮಕೂರು
- **ಗಮಕ:** ಭಾರತಿ ಭಟ್ ಬೆಳಗಾವಿ ಶೈಲಜಾ ಚಂದ್ರಶೇಖರ್ ಮಂಡ್ಯ

**<u>ವೀರ ಯೋಧ "ಹವಾಲ್ದಾರ್ ಹಂಗ್ಪನ್ ದಾದಾ" ಗೆ ಅಶೋಕ ಚಕ್ರ ಗೌರವ</u>**

ವೀರ ಯೋಧ ಹುತ್ಮಾತ ಹವಾಲ್ದಾರ್ ಹಂಗ್ಪನ್ ದಾದಾ ರವರಿಗೆ ದೇಶದ ಅತ್ಯುನ್ನತ ಸೇನಾ ಗೌರವವಾದ ಅಶೋಕಚಕ್ರವನ್ನು ಮರಣೋತ್ತರವಾಗಿ ನೀಡಿ ಗೌರವಿಸಲಾಗಿದೆ. ಸ್ವಾತಂತ್ರ್ಯ ದಿನಾಚರಣೆ ದಿನ ಸಂಜೆ ರಾಷ್ಟ್ರಪತಿ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಅಶೋಕ ಚಕ್ರ ಪ್ರಶಸ್ತಿಯನ್ನು ಮರಣೋತ್ತರವಾಗಿ ದಾದಾ ಅವರಿಗೆ ಪ್ರದಾನ ಮಾಡಲಿದ್ದಾರೆ. ಇದೇ ವೇಳೆ ಸೇನಾ ಪಡೆ ಮತ್ತು ಅರೆ ಸೇನಾ ಪಡೆಯ ಯೋಧರಿಗೆ 82 ಶೌರ್ಯ ಪ್ರಶಸ್ತಿಗಳನ್ನು ನೀಡಲಾಗುವುದು.

www.karunadueyans.com

**ದಾದಾ ತೋರಿದ ಶೌರ್ಯ:**

- ಮೇ 27 ರಂದು ಉತ್ತರ ಕಾಶ್ಮೀರದಲ್ಲಿ 13,000 ಅಡಿ ಎತ್ತರದ ಕ್ಲಿಷ್ಟಕರ ವಾತಾವರಣದಲ್ಲಿ ಕಾರ್ಯನಿರತರಾಗಿದ್ದ ದಾದಾ ಗಡಿ ನಿಯಂತ್ರಣ ರೇಖೆಯ ಬಳಿ ಭಯೋತ್ಪಾದಕರು ಒಳನುಸುಳುವದನ್ನು ತಡೆಯಲು ನಡೆಸಿದ ಗುಂಡಿನ ಕಾಳಗದಲ್ಲಿ ದಾದಾ ಹುತಾತ್ಮರಾಗಿದ್ದರು. ಸತತವಾಗಿ 24 ಗಂಟೆಗಳ ಕಾಲ ನಡೆದ ಕಾರ್ಯಚರಣೆಯಲ್ಲಿ ದಾದಾ ಮರಣ ಹೊಂದುವ ಮುನ್ನ ನಾಲ್ವರು ಭಯೋತ್ಪಾದಕರನ್ನು ಕೊಂದಿದ್ದರು. ಇವರ ಶೌರ್ಯವನ್ನು ಗುರುತಿಸಿದ ಸೇನಾ ಪಡೆ ಅಶೋಕ ಚಕ್ರ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

**ದಾದಾ ಬಗ್ಗೆ:**

- 1997 ರಲ್ಲಿ ಸೇನೆಯ ಅಸ್ಸಾಂ ರೆಜಿಮೆಂಟ್ ಸೇರಿದ ದಾದಾ ಅವರನ್ನು, ದಂಗೆ ಹತ್ತಿಕ್ಕುವ ಸಲುವಾಗಿ ರಚಿಸಲಾಗಿರುವ 35 ರಾಷ್ಟ್ರೀಯ ರೈಫಲ್ಸ್ ಗೆ ನಿಯೋಜಿಸಲಾಗಿತ್ತು. ತಮ್ಮ ಅಪ್ರತಿಮ ಶೌರ್ಯದಿಂದ ಇವರು ತಂಡದಲ್ಲಿ ದಾದಾ ಎಂತಲೇ ಪ್ರಸಿದ್ದರಾಗಿದ್ದರು. ದಾದಾ ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

**ಲೆ.ಕರ್ಜನ್ ನಿರಂಜನ್ ಗೆ ಶೌರ್ಯ ಚಕ್ರ ಪ್ರಶಸ್ತಿ:**

- ಕಳೆದ ಜನವರಿಯಲ್ಲಿ ಪಂಜಾಬ್‌ನ ಪಠಾಣ್‌ಕೋಟ್ ವಾಯುನೆಲೆಯ ಮೇಲೆ ಉಗ್ರರು ದಾಳಿ ನಡೆಸಿದ್ದ ಸಂದರ್ಭದಲ್ಲಿ ಹುತಾತ್ಮರಾಗಿದ್ದ ಕನ್ನಡಿಗ ಯೋಧ ಲೆ.ಕರ್ನಲ್ ನಿರಂಜನ್ ಕುಮಾರ್ ಅವರಿಗೆ ಕೇಂದ್ರ ಸರ್ಕಾರ 'ಶೌರ್ಯ ಚಕ್ರ' ಪುರಸ್ಕಾರವನ್ನು ನೀಡಿದೆ. ಜನವರಿಯಲ್ಲಿ ಪಠಾಣ್ ಕೋಟ್ ವಾಯುನೆಲೆಯ ಮೇಲೆ ಪಾಕ್ ಉಗ್ರರು ದಾಳಿ ನಡೆಸಿದ ಸಂದರ್ಭದಲ್ಲಿ ನಿರಂಜನ್ ಮರಣಹೊಂದಿದ್ದರು. ಎನ್‌ಎಸ್‌ಜಿ ಕಮಾಂಡೋ ಪಡೆಯ ಬಾಂಬ್ ನಿಷ್ಕ್ರಿಯ ದಳದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನಿರಂಜನ್ ಕುಮಾರ್ ಕಾರ್ಯಾಚರಣೆ ಮುಗಿದ ನಂತರ ಮೃತ ಭಯೋತ್ಪಾದಕರನ್ನು ಪರೀಕ್ಷಿಸುತ್ತಿದ್ದಾಗ ಭಯೋತ್ಪಾದಕರು ಹೆಣೆದ ಸಂಚಿನ ಫಲವಾಗಿ ಗ್ರೆನೇಡ್ ಸ್ಫೋಟಗೊಂಡು ನಿರಂಜನ್ ಕುಮಾರ್ ತೀವ್ರವಾಗಿ ಗಾಯಗೊಂಡಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸಿದ ಕಾರಣ ಮರಣ ಹೊಂದಿದರು.

**ಅಶೋಕ ಚಕ್ರದ ಬಗ್ಗೆ:**

- **ಅಶೋಕ ಚಕ್ರ**ವು ಭಾರತೀಯ ಸೇನೆ ತನ್ನ ಯೋಧರಿಗೆ ನೀಡುವ ಶೌರ್ಯ ಪ್ರಶಸ್ತಿಯಾಗಿದೆ. ಅಶೋಕ ಚಕ್ರವನ್ನು ಮೊಟ್ಟಮೊದಲಿಗೆ ಜನವರಿ 4, 1952 ರಲ್ಲಿ ಹುಟ್ಟುಹಾಕಲಾಯಿತು. ರಣರಂಗದ ಹೊರಗಡೆ ಯೋಧನೊಬ್ಬ ತನ್ನ ಅಪ್ರತಿಮ ಶೌರ್ಯ,ಸಾಹಸ ಮತ್ತು ತ್ಯಾಗಕ್ಕಾಗಿ ಪಡೆಯಬಹುದಾದ ಪದಕವಿದು. ಸಾಮಾನ್ಯವಾಗಿ ಶಾಂತಿ ಸಮಯದಲ್ಲಿ ಪ್ರದಾನ ಮಾಡುವ ಪರಮ ವೀರ ಚಕ್ರಕ್ಕೆ ಸಮಾಂತರವಾದ ಪ್ರಶಸ್ತಿ ಇದಾಗಿದೆ. ಕೀರ್ತಿ ಚಕ್ರ ಮತ್ತು ಶೌರ್ಯ ಚಕ್ರ ಪದಕಗಳು ಅಶೋಕ ಚಕ್ರದ ವಿಸ್ತರಿತಗೊಂಡ ಪ್ರಶಸ್ತಿಗಳಾಗಿವೆ.

**ಕರ್ನಾಟಕದ ಮೂವರು ಸಂಸ್ಕೃತ ವಿದ್ವಾಂಸರಿಗೆ ರಾಷ್ಟ್ರಪತಿ ಪ್ರಶಸ್ತಿ**

ಕರ್ನಾಟಕದ ವ್ಯಾಕರಣ ವಿದ್ವಾಂಸ ಮಹಾಮಹೋಪಾಧ್ಯಾಯ ಸೋ.ತಿ. ನಾಗರಾಜ, ಸಂಸ್ಕೃತ ಅಷ್ಟಾವಧಾನಿ ಡಾ. ಶಂಕರ್ ರಾಜಾರಾಮನ್ ಹಾಗೂ ಸಂಸ್ಕೃತ ವಿದ್ವಾಂಸ ಪ್ರೊ. ಗುರುಪಾದ ಕೆ. ಹೆಗಡೆ ಸೇರಿದಂತೆ ಒಟ್ಟು 15 ಮಂದಿ ಸಂಸ್ಕೃತ ಪಂಡಿತರಿಗೆ ರಾಷ್ಟ್ರಪತಿ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ಪ್ರತಿ ವರ್ಷ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ಘೋಷಿಸಲಾಗುವುದು.

- **ಸೋ.ತಿ. ನಾಗರಾಜ** ಅವರನ್ನು 'ಸರ್ಟಿಫಿಕೇಟ್ ಆಫ್ ಆನರ್' ಗೌರವಕ್ಕೆ ಆಯ್ಕೆ ಮಾಡಲಾಗಿದೆ. ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣಶಾಸ್ತ್ರದ ಅಧ್ಯಾಪಕರಾಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ

ಹೊಂದಿದ್ದಾರೆ. ನಾಗರಾಜ್ ಕೃಷ್ಣ ಯಜುರ್ವೇದ ಸಾಯಣ ಭಾಷ್ಯದ ಕನ್ನಡಾನುವಾದ ಸೇರಿ ಹಲವು ಸಂಶೋಧನಾ ಕಾರ್ಯಗಳನ್ನು ನಡೆಸಿದ್ದಾರೆ.

- **ಪ್ರೊ.ಗುರುಪಾದ ಕೆ. ಹೆಗಡೆ** ಲಾಲ್ ಬಹದ್ದೂರ್ ಶಾಸ್ತ್ರಿ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಸಂಸ್ಕೃತದಲ್ಲಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಶ್ಲೇಷ ಸಿದ್ಧಾಂತ ಗ್ರಂಥವನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದ್ದಕ್ಕಾಗಿ ಅಮೆರಿಕದ ಮಿಸೌರಿ ಕಾಸ್ಮೋಪಲಿಟನ್ ವಿವಿ ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ.
- **ಡಾ. ಶಂಕರ್ ರಾಜಾರಾಮನ್** ಸಂಸ್ಕೃತ ಭಾಷೆಗೆ ನೀಡಿರುವ ಕೊಡುಗೆಗೆ ಮಹರ್ಷಿ ಬಾದರಾಯಣ ವ್ಯಾಸ ಸಮ್ಮಾನ್ ಪ್ರಶಸ್ತಿ ಪಡೆದಿರುವ ಇವರು ಈವರೆಗೆ 10 ಸಂಸ್ಕೃತ ಅಷ್ಟಾವಧಾನ ನಡೆಸಿಕೊಟ್ಟಿದ್ದಾರೆ. ಹಲವು ನಿಯತಕಾಲಿಕೆಗಳಲ್ಲಿ ಸಂಶೋಧನಾ ಲೇಖನ, ಪ್ರವಚನದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ.

## <u>ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಗೆ ತಮಿಳು ರತ್ನ ಪ್ರಶಸ್ತಿ</u>

ವಿಶ್ವ ಪ್ರಸಿದ್ಧ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಅವರಿಗೆ ತಮಿಳು ರತ್ನ ಪ್ರಶಸ್ತಿಯನ್ನು ನೀಡಿ ಗೌರವಸಿಲಾಗಿದೆ. ನ್ಯೂಯಾರ್ಕ್ ಮೂಲದ ತಮಿಳು ಸಂಗಮ್ ಈ ಪ್ರಶಸ್ತಿಯನ್ನು ನೀಡುತ್ತಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಖ್ಯಾತಿಯ ಎಂ.ಎಸ್.ಸುಬ್ಬುಲಕ್ಷ್ಮಿ ರವರ ಜನ್ಮಶತಾಬ್ದಿ ಅನ್ವಯ ಏರ್ಪಡಿಸದ್ದ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟ ಬಳಿಕ ರೆಹಮಾನ್ ಅವರಿಗೆ ಪ್ರಶಸ್ತಿಯನ್ನು ನೀಡಲಾಯಿತು.

- ಪ್ರಶಸ್ತಿಯನ್ನು ಈ ಮುಂಚೆ ಭರತ ನಾಟ್ಯ ಪ್ರವೀಣೆ ಕಮಲ ಲಕ್ಷಣ್, ಖ್ಯಾತ ತಮಿಳು ನಿರ್ದೇಶಕ ಭಾರತಿ ರಾಜ ಮತ್ತು ಗಣಿತಶಾಸ್ತ್ರಜ್ಞ ಶ್ರೀನಿವಾಸ ವರ್ಧನ್ ಪಡೆದುಕೊಂಡಿದ್ದಾರೆ

**ರೆಹಮಾನ್ ಬಗ್ಗೆ:**

- ಎ.ಆರ್.ರೆಹಮಾನ್ ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿರುವ ಭಾರತದ ಪ್ರಸಿದ್ದ ಸಂಗೀತ ನಿರ್ದೇಶಕ. "ಮೊಜಾರ್ಟ್ ಆಫ್ ಮೈಸೂರು" ಎಂದೇ ಇವರು ಖ್ಯಾತರಾಗಿದ್ದಾರೆ.
- ಪೌರತ್ಯ ಸಂಗೀತದೊಂದಿಗೆ ವಿದ್ಯುನ್ಮಾನ ಸಂಗೀತವನ್ನು ಸಂಯೋಜಿಸುವುದರಲ್ಲಿ ಇವರು ಪ್ರಸಿದ್ಧಿ ಹೊಂದಿದ್ದಾರೆ. ಇತ್ತೀಚೆಗೆ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಸಂಗೀತ ಕಾರ್ಯಕ್ರಮವನ್ನು ನೀಡುವ ಮೂಲಕ ವಿಶ್ವಸಂಸ್ಥೆಯಲ್ಲಿ ಸಂಗೀತ ಕಾರ್ಯಕ್ರಮ ನೀಡಿದ ಎರಡನೇ ಭಾರತೀಯ ಎಂಬ ಖ್ಯಾತಿಗೆ ಪಾತ್ರರಾದರು.
- ತಮ್ಮ ಸಂಗೀತ ಮೂಲಕ ವಿಶ್ವದ ಜನರನ್ನು ಮೋಡಿ ಮಾಡಿರುವ ಇವರು ಆಸ್ಕರ್ ಪ್ರಶಸ್ತಿ, 2 ಬಾರಿ ಗ್ರಾಮಿ ಪ್ರಶಸ್ತಿ, ಬಾಫ್ತ ಪ್ರಶಸ್ತಿ, ಗೋಲ್ಡನ್ ಗ್ಲೋಬ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

## <u>ಮಾಜಿ ಸಚಿವ ಬಿ.ಎ.ಮೊಯೀದ್ದಿನ್ ಅವರಿಗೆ ಡಿ ದೇವರಾಜು ಅರಸು ಪ್ರಶಸ್ತಿ</u>

ಹಿರಿಯ ರಾಜಕೀಯ ಮುತ್ಸದ್ದಿ ಹಾಗೂ ಮಾಜಿ ಶಿಕ್ಷಣ ಸಚಿವ ಬಿ.ಎ.ಮೊಯ್ದಿನ್ ಅವರನ್ನು ಪ್ರಸಕ್ತ ಸಾಲಿನ ಪ್ರತಿಷ್ಠಿತ 'ಡಿ.ದೇವರಾಜ ಅರಸು ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. ಅರಸು ಪ್ರಶಸ್ತಿಗೆ ಹೆಸರು ಶಿಫಾರಸು ಮಾಡಲು ನೇಮಿಸಲಾಗಿದ್ದ ಡಾ.ಕೃಷ್ಣಮೂರ್ತಿ ಹನೂರು ನೇತೃತ್ವದ ಸಮಿತಿ ಮಾಡಿದ ಶಿಫಾರಸಿನಂತೆ ಮೊಹಿದ್ದೀನ್ ಅವರಿಗೆ ಈ ಬಾರಿಯ ಅರಸು ಪ್ರಶಸ್ತಿಯನ್ನು ಆ.20ರಂದು ನಡೆಯುವ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಪ್ರದಾನ



www.karunaduexams.com

ಮಾಡಲಾಗುವುದು. ಪ್ರಶಸ್ತಿಗೆ ಮಾಜಿ ಸಚಿವರಾದ ರಘುಪತಿ, ಎಂ.ಸಿ.ನಾಣಯ್ಯ, ಎಸ್.ಕೆ.ಕಾಂತಾ, ಎಸ್ .ವಿ.ಸಿದ್ನಾಳ್, ಜೆ.ಶ್ರೀನಿವಾಸನ್ ಹಾಗೂ ಭೀಮ್ಸಿ ಕಲಾದಗಿ ಅವರ ಹೆಸರು ಪ್ರಸ್ತಾಪವಾಗಿತ್ತು. ಆದರೆ ಅಂತಿಮವಾಗಿ ಮೊಯೀದ್ದಿನ್ ಆಯ್ಕೆಯಾಗಿದ್ದಾರೆ.

**ಮೊಯೀದ್ದಿನ್ ಬಗ್ಗೆ:**

- 1938ರ ಮೇ 5ರಂದು ದಕ್ಷಿಣ ಕನ್ನಡ ಜಿಲ್ಲೆಯ ಬಜ್ಪೆಯಲ್ಲಿ ಅಬ್ದುಲ್ ಖಾದರ್ ಮತ್ತು ಹಲೀಮಾ ದಂಪತಿಗೆ ಜನಿಸಿದರು. ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಪದವಿ ಪಡೆದರು. 1969ರಲ್ಲಿ ಕಾಂಗ್ರೆಸ್ ಸೇರಿದ ಮೊಯ್ದಿನ್ 1978ರಲ್ಲಿ ಬಂಟ್ವಾಳ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದರು.
- 1995ರಲ್ಲಿ ಜೆ.ಎಚ್. ಪಟೇಲ್ ಸಂಪುಟದಲ್ಲಿ ಉನ್ನತ ಶಿಕ್ಷಣ ಮತ್ತು ಕೈಗಾರಿಕಾ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಹತ್ತು-ಹಲವು ಸುಧಾರಣೆಗಳನ್ನು ತರುವ ಮೂಲಕ ಅಪಾರ ಜನಮನ್ನಣೆಗೆ ಪಾತ್ರರಾಗಿದ್ದರು. ಜನಪರ ಜನಪ್ರತಿನಿಧಿ, ದಕ್ಷ ಆಡಳಿತಗಾರ, ಕಳಂಕರಹಿತ ರಾಜಕಾರಣಿಯಾಗಿರುವ ಮೊಯ್ದಿನ್ ಅವರು, ತನ್ನ ರಾಜಕೀಯ ಬದುಕನ್ನು ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮುಡಿಪಾಗಿಟ್ಟು ಶ್ರಮಿಸಿದ ನೇತಾರರಾಗಿದ್ದಾರೆ.
- ಪ್ರಸ್ತುತ ಬೆಂಗಳೂರಿನ ಸಂಜಯನಗರದಲ್ಲಿ ವಾಸವಾಗಿದ್ದಾರೆ.
- ಆ.20ರಂದು ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿರುವ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 101ನೆ ಜನ್ಮ ದಿನಾಚರಣೆ ಹಾಗೂ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

**ಒಲಂಪಿಕ್ಸ್ ಓಟದಲ್ಲಿ 9 ಚಿನ್ನದ ಪದಕ ಗೆದ್ದು ದಾಖಲೆ ನಿರ್ಮಿಸಿದ ಉಸೇನ್ ಬೋಲ್ಟ್**

ಜಮೈಕಾದ ವೇಗಿ ಉಸೇನ್ ಬೋಲ್ಟ್ ಅವರು ರಿಯೋ ಒಲಂಪಿಕ್ಸ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ಐತಿಹಾಸಿಕ ಸಾಧನೆ ಮಾಡಿದರು. ಬೋಲ್ಟ್ ರಿಯೋ ಕೂಟದ ಪುರುಷರ 4X100 ಮೀ. ರಿಲೇ ಸ್ಪರ್ಧೆಯಲ್ಲಿ ಜಮೈಕ ತಂಡವನ್ನು ಚಿನ್ನದೆಡೆಗೆ ಮುನ್ನಡೆಸಿ ಈ ದಾಖಲೆ ನಿರ್ಮಿಸಿದರು. ಈ ರಿಲೇ ತಂಡದಲ್ಲಿ ಉಸೇನ್ ಬೋಲ್ಟ್, ಅಸಫ್ ಪೊವೆಲ್, ಯೊಹನ್ ಬ್ಲೆಕ್ ಮತ್ತು ನಿಕಲ್ ಅಶ್ಮಡೆ ಭಾಗವಹಿಸಿದ್ದರು. ರಿಯೋ ಕ್ರೀಡಾಕೂಟದ 100ಮೀ ಓಟದಲ್ಲಿ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದರು. ಆ ಮೂಲಕ ಸತತವಾಗಿ ಮೂರು ಒಲಂಪಿಕ್ಸ್ ನಲ್ಲಿ ಚಿನ್ನ ಗೆದ್ದ ಮೊದಲ ಅಥ್ಲೆಟ್ ಎನಿಸಿದ್ದರು. ನಂತರ 200 ಮೀ 200 ಮೀ. ಓಟದಲ್ಲೂ ಚಿನ್ನ ಜಯಿಸಿದ್ದ ಬೋಲ್ಟ್ ರಿಯೊ ಕೂಟದಲ್ಲಿ 'ಟ್ರಿಪಲ್' ಸಾಧನೆ ಮಾಡಿದರು. 2008ರ ಬೀಜಿಂಗ್ ಮತ್ತು 2012ರ ಲಂಡನ್ ಕೂಟದಲ್ಲೂ ಅವರು ಇದೇ ಸಾಧನೆ ಮಾಡಿದ್ದರು.

**ಉಸೇನ್ ಬೋಲ್ಟ್**:

- ಉಸೇನ್ ಬೋಲ್ಟ್ ಜಮೈಕಾದ ವೇಗದ ಸರದಾರ. ಓಟದಲ್ಲಿ ವಿಶೇಷ ಸಾಧನೆ ಮಾಡಿರುವ ಇವರನ್ನು "ಲೈಟ್ನಿಂಗ್ ಬೋಲ್ಟ್" ಎಂದು ಕರೆಯಲಾಗುತ್ತದೆ.
- ವಿಶ್ವದಲ್ಲೆ ಅತ್ಯಂತ ವೇಗವಾಗಿ ಓಡುವ ವ್ಯಕ್ತಿ ಎಂದೇ ಇವರನ್ನು ಬಣ್ಣಿಸಲಾಗಿದೆ. 100 ಮೀಟರ್ ಓಟ ಹಾಗು 200 ಮೀಟರ್ ಓಟ ಸ್ಪರ್ಧೆಗಳಲ್ಲಿ ವಿಶ್ವ ಹಾಗು ಒಲಂಪಿಕ್ ದಾಖಲೆಗಳನ್ನು ಹೊಂದಿದ್ದಾರೆ.

www.karunaduexams.com

- ಜಮೈಕದ ಇತರ ತಂಡಗಾರರೊಂದಿಗೆ 4 x 100 ಮೀಟರ್ ರಿಲೇ ಸ್ಪರ್ಧೆಯಲ್ಲೂ ವಿಶ್ವದಾಖಲೆ ಸೃಷ್ಟಿಸಿದ್ದಾರೆ.

**ರಿಯೋ ಒಲಂಪಿಕ್ಸ್: ಬೆಳ್ಳಿ ಗೆದ್ದು ಐತಿಹಾಸಿಕ ದಾಖಲೆ ಬರೆದ ಪಿ.ವಿ.ಸಿಂಧು**

ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ಪುಸರ್ಲ ವೆಂಕಟ ಸಿಂಧು (P V ಸಿಂಧು) ರಿಯೋ ಒಲಂಪಿಕ್ಸ್ ಮಹಿಳೆಯರ ಸಿಂಗಲ್ಸ್ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಬೆಳ್ಳಿ ಪದಕ ಗೆದ್ದು ದಾಖಲೆ ಬರೆದರು. ಫೈನಲ್ ಪಂದ್ಯದಲ್ಲಿ ಸಿಂಧು ಸ್ಪೇನ್ ನ ಕರೊಲಿನ ಮರಿನ್ ಅವರಿಂದ 21-19, 12-21, 15-21 ರಿಂದ ಪರಾಭವಗೊಂಡು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡರು. ಆ ಮೂಲಕ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದ ಭಾರತದ ಮೊದಲ ಮಹಿಳಾ ಕ್ರೀಡಾಪಟು ಎಂಬ ದಾಖಲೆಯನ್ನು ತಮ್ಮದಾಗಿಸಿಕೊಂಡರು. ಅಲ್ಲದೇ ಒಲಂಪಿಕ್ಸ್ ನಲ್ಲಿ ಬೆಳ್ಳಿ ಗೆದ್ದ ಭಾರತದ ನಾಲ್ಕನೇ ಕ್ರೀಡಾಪಟು ಎನಿಸಿದರು. ಈ ಹಿಂದೆ ಕುಸ್ತಿಪಟು ಸುಶೀಲ್ ಕುಮಾರ್ (2012 ಲಂಡನ್ ಒಲಂಪಿಕ್ಸ್), ಶೂಟರ್ ರಾಜ್ಯವರ್ಧನ್ ರಾಥೋಡ್ (2004 ಅಥೆನ್ಸ್ ಒಲಂಪಿಕ್ಸ್) ಮತ್ತು ವಿಜಯ ಕುಮಾರ್ (2012 ಲಂಡನ್ ಒಲಂಪಿಕ್ಸ್) ಬೆಳ್ಳಿ ಪದಕ ಗೆದ್ದಿದ್ದರು. ಸೈನಾ ನೆಹ್ವಾಲ್ ನಂತರ ಬ್ಯಾಡ್ಮಿಂಟನ್ ನಲ್ಲಿ ಪದಕ ಗೆದ್ದ ಭಾರತದ ಎರಡನೇ ಮಹಿಳಾ ಷಟ್ಲರ್ ಸಹ ಆಗಿದ್ದಾರೆ.

**ಪಿ.ವಿ.ಸಿಂಧು ಬಗ್ಗೆ:**

- ಸಿಂಧು 5 ಜುಲೈ 1995 ರಲ್ಲಿ ಹೈದ್ರಾಬಾದ್ ನಲ್ಲಿ ಜನಿಸಿದರು. 2012 ರಲ್ಲಿ ಬ್ಯಾಡ್ಮಿಂಟನ್ ವಿಶ್ವ ಫೆಡರೇಷನ್ ಬಿಡುಗಡೆಗೊಳಿಸಿದ ವಿಶ್ವದ ಟಾಪ್ ಬ್ಯಾಡ್ಮಿಂಟನ್ ಆಟಗಾರರ ಪಟ್ಟಿಯಲ್ಲಿ ಸ್ಥಾನಗಳಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದರು.
- 2013 ವಿಶ್ವ ಚಾಂಪಿಯನ್ ಷಿಪ್ ನಲ್ಲಿ ಕಂಚು ಗೆಲ್ಲುವ ಮೂಲಕ ಈ ಸಾಧನೆ ಮಾಡಿದ ಭಾರತದ ಪ್ರಥಮ ಮಹಿಳಾ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.
- ಭಾರತದ ನಾಲ್ಕನೇ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿಯನ್ನು 2015 ರಲ್ಲಿ ಸಿಂಧು ಅವರಿಗೆ ನೀಡಲಾಗಿದೆ.

**ಖ್ಯಾತ ಹಿಂದಿ ಲೇಖಕಿ ಸುನೀತಾ ಜೈನ್ ಗೆ ವ್ಯಾಸ ಸಮ್ಮಾನ್ ಪ್ರಶಸ್ತಿ ಪ್ರಧಾನ**

ಖ್ಯಾತ ಹಿಂದಿ ವಿದ್ವಾಂಸಕಿ ಮತ್ತು ಲೇಖಕಿ ಸುನೀತಾ ಜೈನ್ ಅವರಿಗೆ 25ನೇ ವ್ಯಾಸ ಸಮ್ಮಾನ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಪಶ್ಚಿಮ ಬಂಗಾಳದ ಗವರ್ನರ್ ಕೆ.ಎನ್.ತ್ರಿಪಾಠಿ ಅವರು ಪ್ರಶಸ್ತಿಯನ್ನು ಪ್ರಧಾನ ಮಾಡಿದರು. ಸುನೀತಾ ಜೈನ್ ಅವರ 2008 ರಲ್ಲಿ ಪ್ರಕಟಣಗೊಂಡ "ಕ್ಷಮಾ" ಕವನ ಸಂಕಲನಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

**ಸುನೀತಾ ಜೈನ್ ಬಗ್ಗೆ:**

- ಸುನೀತಾ ಜೈನ್ ಖ್ಯಾತ ಹಿಂದಿ ಲೇಖಕಿ ಮತ್ತು ವಿದ್ವಾಂಸಕಿ. ಹಿಂದಿ ಮತ್ತು ಇಂಗ್ಲೀಷ್ ಎರಡು ಭಾಷೆಯಲ್ಲೂ ಸಣ್ಣಕಥೆಗಳನ್ನು ರಚಿಸುವ ಮೂಲಕ ಇವರು ಪ್ರಸಿದ್ದರಾಗಿದ್ದಾರೆ. ಸುನೀತಾ ತಮ್ಮ 22ನೇ ವಯಸ್ಸಿನಿಂದಲೇ ಸಾಹಿತ್ಯದ ಕಡೆ ಆಕರ್ಷಣೆಗೊಂಡವರು.
- ಕಥೆ, ಸಣ್ಣ ಕಥೆ ಮತ್ತು ಕಾದಂಬರಿಗಳನ್ನು ಹೊರತುಪಡಿಸಿ ಸುಮಾರು 100 ಪುಸ್ತಕಗಳನ್ನು ಇವರು ಬರೆದಿದ್ದಾರೆ. ಸಾಕಷ್ಟು ಜೈನ ಕೃತಿಗಳನ್ನು ಇಂಗ್ಲೀಷ್ ಗೆ ತರ್ಜುಮೆ ಮಾಡಿದ್ದಾರೆ.

www.karunaduexams.com

- ಸಾಹಿತ್ಯ ಲೋಕಕ್ಕೆ ಆಗಾಧ ಕೊಡುಗೆ ನೀಡಿರುವ ಸುನೀತಾ ಅವರಿಗೆ 2004 ರಲ್ಲಿ ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ನೀಡಲಾಗಿದೆ.

**ವ್ಯಾಸ ಸಮ್ಮಾನ್ ಪ್ರಶಸ್ತಿ ಬಗ್ಗೆ:**

- ಕೆ.ಕೆ.ಬಿರ್ಲಾ ಫೌಂಡೇಷನ್ ಈ ಪ್ರಶಸ್ತಿಯನ್ನು 1991 ರಲ್ಲಿ ಸ್ಥಾಪಿಸಿದೆ.
- ಹಿಂದಿ ಸಾಹಿತ್ಯಕ್ಕೆ ಅಗಾಧ ಕೊಡುಗೆ ನೀಡಿದ ಭಾರತೀಯ ಪ್ರಜೆಗೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಪ್ರಶಸ್ತಿಯು ರೂ 2.5 ಲಕ್ಷ ನಗದು, ಸ್ಮರಣಿಕೆ ಮತ್ತು ಫಲಕವನ್ನು ಒಳಗೊಂಡಿದೆ.

**IEI-IEEE ಮೊದಲ ಪ್ರಶಸ್ತಿಗೆ ಭಾಜನರಾದ ಜಿ.ಸತೀಶ್ ರೆಡ್ಡಿ**

ರಕ್ಷಣ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯ ಹಿರಿಯ ವಿಜ್ಞಾನಿ ಜಿ.ಸತೀಶ್ ರೆಡ್ಡಿ ಅವರು IEI-IEEE ಇದೇ ಮೊದಲ ಬಾರಿಗೆ ನೀಡುತ್ತಿರುವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕ್ಷಿಪಣಿ ಮತ್ತು ಅಂತರಿಕ್ಷಯಾನ ತಂತ್ರಜ್ಞಾನ ಅಭಿವೃದ್ಧಿಗೆ ಸತೀಶ್ ನೀಡಿರುವ ಅಗಾಧ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**ಸತೀಶ್ ರೆಡ್ಡಿ ಬಗ್ಗೆ:**

- ಸತೀಶ್ ಅವರು ಹೆಸರಾಂತ ಏರೋಸ್ಪೇಸ್ ಮತ್ತು ನ್ಯಾವಿಗೇಷನ್ ವಿಜ್ಞಾನಿ. ಪ್ರಸ್ತುತ ಇವರು ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರ ಮತ್ತು DRDOದ ಡೈರೆಕ್ಟರ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.
- DRDOದ ಅಂಗಸಂಸ್ಥೆಯಾದ ರಿಸರ್ಚ್ ಸೆಂಟರ್ ಇಮರತ್ (Research Centre Imarat)ನ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.
- ಭಾರತ ಕ್ಷಿಪಣಿ ಸಂಬಂಧಿಸಿದ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ರೆಡ್ಡಿ ಅವರು ಮುಂಚೂಣಿಯಲ್ಲಿದ್ದಾರೆ. ಮಧ್ಯಮ ಶ್ರೇಣಿಯ ಭೂಮಿಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆ (Medium Range Surface-to-Air Weapon System) ಸೇರಿದಂತೆ ಗೈಡೆಡ್ ಬಾಂಬ್ ಅಭಿವೃದ್ಧಿಯಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದಾರೆ.
- ಅಗ್ನಿ-V ಖಂಡಾಂತರ ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗುವಲ್ಲಿ ಸತೀಶ್ ಮಹತ್ವದ ಪಾತ್ರವಹಿಸಿದ್ದರು.
- 2015 ರಲ್ಲಿ ರಾಯಲ್ ಇನ್ಸ್ ಟಿಟ್ಯೂಟ್ ಆಫ್ ನ್ಯಾವಿಗೇಷನ್ ಇಂದ ಫೇಲೊಶಿಪ್ ಪಡೆದ ಮೊದಲ ಭಾರತೀಯ ಎನಿಸಿದ್ದಾರೆ.

**IEI-IEEI ಪ್ರಶಸ್ತಿ ಬಗ್ಗೆ:**

- Institution of Engineers (India) and the Institute of Electrical and Electronics Engineers, 50ನೇ ಸಂಸ್ಥಾಪನ ದಿನದ ಅಂಗವಾಗಿ ಪ್ರಶಸ್ತಿಯನ್ನು ಸ್ಥಾಪಿಸಿದ್ದು, ಮೊದಲ ಪ್ರಶಸ್ತಿಯನ್ನು ಸತೀಶ್ ರೆಡ್ಡಿ ಪಡೆದುಕೊಂಡಿದ್ದಾರೆ.

www.karunaduexams.com

**<u>ಪದ್ಮ ಸಚ್ದೇವ್ ರವರಿಗೆ 2015 ಸರಸ್ವತಿ ಸಮ್ಮಾನ್ ಪ್ರಶಸ್ತಿ ಪ್ರಧಾನ</u>**

ಖ್ಯಾತ ಡೊಗ್ರಿ ಭಾಷೆಯ ಕವಯತ್ರಿ ಮತ್ತು ಕಾದಂಬರಿಗಾರ್ತಿ ಪದ್ಮ ಸಚ್ದೇವ್ ಅವರಿಗೆ ಪ್ರತಿಷ್ಠಿತ 2015ನೇ ಸಾಲಿನ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ಸಚ್ದೇವ್ ಅವರ ಆತ್ಮಕತೆ ಚಿತ್-ಚೇಟೆ (Chit-Chete)ಗಾಗಿ ಈ ಪ್ರಶಸ್ತಿ ಆಯ್ಕೆಯಾಗಿದೆ. ಚಿತ್-ಚೇಟೆ ಕೃತಿಯನ್ನು ಡೊಗ್ರಿ ಭಾಷೆಯಲ್ಲಿ ರಚಿಸಲಾಗಿದ್ದು, 2007 ರಲ್ಲಿ ಪ್ರಕಟಗೊಂಡಿದೆ.

**ಪದ್ಮ ಸಚ್ದೇವ್:**

- ಪದ್ಮ ಸಚ್ದೇವ್ ಅವರು ಡೊಗ್ರಿ ಭಾಷೆಯ ಆಧುನಿಕ ಕವಯತ್ರಿ. ಡೊಗ್ರಿ ಅಲ್ಲದೇ ಹಿಂದಿ ಭಾಷೆಯಲ್ಲೂ ಕವಿತೆಗಳನ್ನು ರಚಿಸಿದ್ದಾರೆ.
- ಸುಮಾರು 60ಕ್ಕೂ ಹೆಚ್ಚು ಪುಸ್ತಕಗಳು ಮತ್ತು ಹಲವು ಕವನ ಸಂಕಲನಗಳನ್ನು ಸಚ್ದೇವ್ ಬರೆದಿದ್ದಾರೆ. ಅವರ "ಮೇರಿ ಕವಿತ ಮೇರಿ ಗೀತಾ" ಕವನ ಸಂಕಲನಕ್ಕೆ 1971 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.
- ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಸಚ್ದೇವ್ ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1971), ಪದ್ಮಶ್ರೀ (2001), ಮಧ್ಯಪ್ರದೇಶದ ಕಬೀರ್ ಸಮ್ಮಾನ್ (2007-08) ಪ್ರಶಸ್ತಿ ಲಭಿಸಿವೆ.

**ಸರಸ್ವತಿ ಸಮ್ಮಾನ್ ಪ್ರಶಸ್ತಿ:**

- ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು <u>ಭಾರತೀಯ ಭಾಷೆಗಳಲ್ಲಿ</u> ಬರೆಯುವ ಶ್ರೇಷ್ಠ ಗದ್ಯ ಮತ್ತು ಪದ್ಯ ಪ್ರಕಾರಕ್ಕೆ ಕೊಡಮಾಡಲಾಗುತ್ತದೆ. ಇದನ್ನು ವಿದ್ಯೆಯ ದೇವಿಯಾಗಿರುವ <u>ಸರಸ್ವತಿ</u>ಯ ಹೆಸರಿನಲ್ಲಿ ಸ್ಥಾಪಿತವಾಗಿರುತ್ತದೆ. ಈ ಪ್ರಶಸ್ತಿಯು 15ಲಕ್ಷ ರೂಪಾಯಿ ನಗದನ್ನು ಹೊಂದಿದೆ. <u>ಕೆ. ಕೆ. ಬಿರ್ಲಾ ಪ್ರತಿಷ್ಠಾನ</u>ವು ಈ ಪ್ರಶಸ್ತಿಯನ್ನು 1991ರಲ್ಲಿ ಸ್ಥಾಪಿಸಿದೆ.

www.karunaduexams.com

# ಪರಿಸರ

**ಪುಣೆಯಲ್ಲಿ ದೇಶದ ಮೊದಲ ಬಯೋ-ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (Bio-CNG) ಉತ್ಪಾದನ ಘಟಕ**

ದೇಶದ ಮೊದಲ ಬಯೋ-ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ ಉತ್ಪಾದನ ಘಟಕ ಪುಣೆಯಲ್ಲಿ ಕಾರ್ಯಾರಂಭಗೊಂಡಿತು. ಕೃಷಿ ತ್ಯಾಜ್ಯವನ್ನು ಬಳಸಿ ಅನಿಲ ಉತ್ಪಾದಿಸುವ ಈ ಘಟಕವನ್ನು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹಾಗೂ ಕೇಂದ್ರ ರಕ್ಷಣಾ ಸಚಿವ ಮನೋಹರ್ ಪಣಿಕ್ಕರ್ ಜಂಟಿಯಾಗಿ ಉದ್ಘಾಟಿಸಿದರು.

**ಈ ಘಟಕದ ಬಗ್ಗೆ:**

- ಪುಣೆ ಮೂಲದ ಪ್ರೈಮೊವ್ ಎಂಜನಿಯರಿಂಗ್ ಪ್ರೈವೆಟ್ ಲಿಮಿಟೆಡ್ ಈ ಘಟಕವನ್ನು ಸ್ಥಾಪಿಸಿದೆ. ತಂತ್ರಜ್ಞಾನ ಪ್ರದರ್ಶಿಸಲು ನಿರ್ಮಿಸಲಾಗಿರುವ ಈ ಘಟಕವನ್ನು ಅತಿ ಸುಲಭವಾಗಿ ಬೇಕೆಂದ ಕಡೆ ನಿರ್ಮಿಸಬಹುದಾಗಿದೆ.
- ಕೃಷಿ ತ್ಯಾಜ್ಯವನ್ನು ವಿಶೇಷ ಬ್ಯಾಕ್ಟಿರೀಯಾ ದ್ರಾವಕ ಬಳಸಿ ಕೊಳಸುವ ಮೂಲಕ ಅನಿಲವನ್ನು ಉತ್ಪಾದಿಸಲಾಗುವುದು. ಬಳಿಕ ಅನಿಲವನ್ನು ಶುದ್ದೀಕರಿಸಿ, ಕಂಪ್ರೆಸ್ ಮಾಡಿ ವಾಹನಗಳಲ್ಲಿ ಇಂಧನವಾಗಿ ಬಳಸಬಹುದುದಾಗಿದೆ.

**ಜೈವಿಕ ಇಂಧನದ ಮಹತ್ವ:**

- ಜೈವಿಕ ಇಂಧನದ ಬಳಕೆಯಿಂದ ಶೇ 50% ಡೀಸೆಲ್ ಆಮದನ್ನು ಕಡಿಮೆ ಮಾಡಬಹುದಾಗಿದೆ. ಆ ಮೂಲಕ ಬೃಹತ್ ಮೊತ್ತದ ವಿದೇಶಿ ವಿನಿಮಯ ಉಳಿತಾಯವಾಗಲಿದೆ. ಎಲ್ಲದಕ್ಕಿಂತ ಮಿಗಿಲಾಗಿ ಜೈವಿಕ ಇಂಧನವನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಬಹುದಾಗಿದ್ದು, ಪರಿಸರ ಸ್ನೇಹಿಯಾಗಿದೆ.
- ಇಂತಹ ಯೋಜನೆಗಳು ಭಾರತದ ಪ್ರಮುಖ ಯೋಜನೆಯಾದ ಮೇಕ್ ಇನ್ ಇಂಡಿಯಾಗೆ ಸ್ಪೂರ್ತಿಯಾಗಿದೆ. ಕೃಷಿ ದೇಶವಾದ ಭಾರತದಲ್ಲಿ ಕೃಷಿ ತ್ಯಾಜ್ಯ ವಿಲೇವಾರಿ ದೊಡ್ಡ ಸವಾಲಿಗಿದ್ದು, ಈ ಅನ್ವೇಷಣೆ ಹೊಸ ಕ್ರಾಂತಿ ಮಾಡಲಿದೆ.

# ಸುದ್ದಿಯಲ್ಲಿರುವ ವ್ಯಕ್ತಿಗಳು

**ರಾಣಿ ಸಿಂಗ್ ನಾಯರ್ ಕೇಂದ್ರ ನೇರ ತೆರಿಗೆ ಮಂಡಳಿ(CBDT)ಯ ನೂತನ ಚೇರಮನ್**

ಹಿರಿಯ ಭಾರತೀಯ ಕಂದಾಯ ಸೇವೆ (IRS) ಅಧಿಕಾರಿ ರಾಣಿ ಸಿಂಗ್ ನಾಯರ್ ರವರನ್ನು ಕೇಂದ್ರ ನೇರ ತೆರಿಗೆ ಮಂಡಳಿ (Central Board of Direct Tax) ಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟ ನೇಮಕಾತಿ ಸಮಿತಿ ನಾಯರ್ ರವರ ನೇಮಕಾತಿಯನ್ನು ಧೃಡೀಕರಿಸಿದೆ. ನಾಯರ್ ರವರು 31 ಅಕ್ಟೋಬರ್ 2016 ರವರೆಗೆ ಅಧಿಕಾರದಲ್ಲಿರಲಿದ್ದಾರೆ. ಹಾಲಿ ಅಧ್ಯಕ್ಷರಾಗಿದ್ದ ಅತುಲೇಶ್ ಜಿಂದಾಲ್ ರವರು ಜುಲೈ 30 ರಂದು ನಿವೃತ್ತಿ ಹೊಂದಿದ ಕಾರಣ ಈ ಹುದ್ದೆ ತೆರವಾಗಿತ್ತು.

**ರಾಣಿ ಸಿಂಗ್ ನಾಯರ್ ಬಗ್ಗೆ**:

- ರಾಣಿ ಸಿಂಗ್ ರವರು 1979 ನೇ ಬ್ಯಾಚ್ ನ ಭಾರತೀಯ ಕಂದಾಯ ಸೇವೆ ಅಧಿಕಾರಿ
- ನೇಮಕಾತಿಗೂ ಮುನ್ನ ಇವರು ಕೇಂದ್ರ ನೇರ ತೆರಿಗೆ ಮಂಡಳಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

www.karunaduexams.com

- ಮಹತ್ವದ ಆದಾಯ ಘೋಷಣೆ ಯೋಜನೆ ಜಾರಿಗೆ ತರುವ ಮೂಲಕ ಆದಾಯ ಹೆಚ್ಚಳ ಮಾಡುವಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದರು.

**ಕೇಂದ್ರ ನೇರ ತೆರಿಗೆ ಮಂಡಳಿ:**

- ಸಿಬಿಡಿಟಿಯನ್ನು ಸೆಂಟ್ರಲ್ ಬೋರ್ಡ್ ಆಪ್ ರೆವಿನ್ಯೂ ಆಕ್ಟ್-1963 ರಡಿಯಲ್ಲಿ ಸ್ಥಾಪಿಸಲಾಗಿದೆ. ಇದೊಂದು ಶಾಸನಬದ್ದ ಸಂಸ್ಥೆಯಾಗಿದ್ದು, ಒಬ್ಬ ಅಧ್ಯಕ್ಷ ಮತ್ತು ಆರು ಜನ ಸದಸ್ಯರನ್ನು ಒಳಗೊಂಡಿದೆ.
- ಆದಾಯ ತೆರಿಗೆ ಇಲಾಖೆಯ ನೊಡೆಲ್ ಸಂಸ್ಥೆಯಾದ ಸಿಬಿಡಿಟಿಯು ನೇರ ತೆರಿಗೆಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವ ಸರ್ವೋಚ್ಚ ಸಂಸ್ಥೆಯಾಗಿದೆ. ಸಿಬಿಡಿಟಿಯು ಕೇಂದ್ರ ಆರ್ಥಿಕ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತದೆ.

**ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯೆಯಾಗಿ ನೀತಾ ಅಂಬಾನಿ ಆಯ್ಕೆ**

ರಿಲಾಯನ್ಸ್ ಫೌಂಡೇಶನ್ ಸಂಸ್ಥಾಪಕ ಮುಖ್ಯಸ್ಥೆ ನೀತಾ ಅಂಬಾನಿರವರು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯೆಯಾಗಿ ನೇಮಕಗೊಂಡಿದ್ದಾರೆ. ಈ ಸಮಿತಿಗೆ ಭಾರತದಿಂದ ಆಯ್ಕೆಯಾದ ಮೊದಲ ಮಹಿಳಾ ಸದಸ್ಯೆ ಎಂಬ ಕೀರ್ತಿಗೆ ಅಂಬಾನಿ ಭಾಜನರಾಗಿದ್ದಾರೆ. ಬ್ರೆಜಿಲ್ ನ ರಿಯೋದಲ್ಲಿ ನಡೆದ ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿಯ 129ನೇ ಸಭೆಯಲ್ಲಿ ನೀತಾ ಆಯ್ಕೆಯನ್ನು ಅಂತಿಮಗೊಳಿಸಲಾಗಿದೆ.

- ನೀತಾ ಅಂಬಾನಿ ಜೂನ್ 2016ರಲ್ಲಿ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯ ಸ್ಥಾನಕ್ಕೆ ನಾಮನಿರ್ದೇಶನಗೊಂಡಿದ್ದರು.
- ನೀತಾ ತಮ್ಮ 70 ನೇ ವರ್ಷದವರೆಗೂ ಐಓಸಿ ಸದಸ್ಯೆಯಾಗಿ ನೀತಾ ಮುಂದುವರೆಯಲಿದ್ದಾರೆ.
- ನೀತಾ ಅವರು ಈಗ ಐಓಸಿಯಲ್ಲಿರುವ ಭಾರತದ ಏಕೈಕ ಪ್ರತಿನಿಧಿಯಾಗಿದ್ದಾರೆ.
- ಸರ್ ದೊರಬ್ಜಿ ಟಾಟಾ ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಪ್ರತಿನಿಧಿಸಿದ್ದ ಪ್ರಥಮ ಭಾರತೀಯನಾಗಿದ್ದರು, ನಂತರ ರಾಜಾ ರಣಧೀರ್ ಸಿಂಗ್ 2000-14 ರವರೆಗೆ ಸದಸ್ಯರಾಗಿ ಇದೀಗ ಗೌರವ ಸದಸ್ಯರಾಗಿ ಸಮಿತಿಯಲ್ಲಿದ್ದಾರೆ.
- ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿಯ ಕೇಂದ್ರ ಕಚೇರಿಯು ಲುಸನ್ನೆ, ಸ್ವಿಟ್ಜರ್ಲ್ಯಾಂಡ್ ನಲ್ಲಿದೆ.

**ಅಸ್ಸಾಂನ ಖ್ಯಾತ ಸಾಹಿತಿ ಮಹೀಮ್ ಬೋರ ನಿಧನ**

ಅಸ್ಸಾಮಿ ಭಾಷೆಯ ಪ್ರಸಿದ್ದ ಲೇಖಕ ಹಾಗೂ ಶಿಕ್ಷಣ ತಜ್ಞ ಮಹೀಮ್ ಬೋರಾ ನಿಧನರಾದರು. 92 ವರ್ಷ ವಯಸ್ಸಿನ ಬೋರ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು.

- ಜುಲೈ 6, 1924 ರಲ್ಲಿ ಅಸ್ಸಾಂನ ನಾಗೋನ್ ಜಿಲ್ಲೆಯಲ್ಲಿ ಬೋರ ಜನಿಸಿದರು. ಅಸ್ಸಾಮಿ ಸಾಹಿತ್ಯದಲ್ಲಿ ಎಂ.ಎ ಪಧವೀದರರಾದ ಇವರು ನೌಗಾಂಗ್ ಕಾಲೇಜಿನಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸಿದ್ದರು.
- ಸಣ್ಣ ಕಥೆಗಳು ಮತ್ತು ಕವಿತೆಗಳ ಮೂಲಕ ಅಸ್ಸಾಮಿ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ಬೋರ ನೀಡಿದ್ದರು.
- ಇವರ "ಇದಾನಿ ಮಹೀರ್ ಹನ್ನಿ" ಕೃತಿಗೆ 2001ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಲಾಗಿತ್ತು.
- "ರತಿ ಪುಲ ಪುಲ್", "ಚಕ್ರವತ್", "ತಿನಿರ್ ತಿನಿ ಗೋಲ್", "ಚಿಂತ ಬಿಚಿತ್ರ" "ಬರಯತ್ರಿ" ಇವರ ಪ್ರಮುಖ ಕೃತಿಗಳು

**ಪ್ರಶಸ್ತಿಗಳು:**

- 2011 ರಲ್ಲಿ ಪದ್ಮ ಪ್ರಶಸ್ತಿ
- 2001 ಸಾಹಿತ್ಯ ಅಕಾಡೆಮಿ ಪ್ರಶಸ್ತಿ
- 1998 ಅಸ್ಸಾಂ ವ್ಯಾಲಿ ಸಾಹಿತ್ಯ ಪ್ರಶಸ್ತಿ

**ಗುಜರಾತ್ನ ನೂತನ ಮುಖ್ಯಮಂತ್ರಿಯಾಗಿ ವಿಜಯ್ ರೂಪಾಣಿ ಪ್ರಮಾಣ ವಚನ ಸ್ವೀಕಾರ**

ಗುಜರಾತ್ನ ನೂತನ ಮುಖ್ಯಮಂತ್ರಿಯಾಗಿ ವಿಜಯ್ ರೂಪಾಣಿ ರವರು ಪ್ರಮಾಣ ವಚನ ಸ್ವೀಕರಿಸಿದರು. ಅನಿರೀಕ್ಷಿತ ಬೆಳವಣಿಗೆಯಿಂದ ಆನಂದಿಬೆನ್ ಪಟೇಲ್ ಅವರು ರಾಜೀನಾಮೆ ನೀಡಿದ ಹಿನ್ನಲೆಯಲ್ಲಿ ಮುಖ್ಯಮಂತ್ರಿ ಸ್ಥಾನ ತೆರವಾಗಿತ್ತು. ಗುಜರಾತ್ ರಾಜ್ಯಪಾಲ ಕೆ.ಪಿ.ಒಲಿ ಅವರು ಪ್ರಮಾಣ ವಚನ ಬೋಧಿಸಿದರು.

- ವಿಜಯ್ ರೂಪಾಣಿ ಪ್ರಸ್ತುತ ಗುಜರಾತ್ನ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿದ್ದಾರೆ. ಬಿಜೆಪಿ ಪಕ್ಷದೊಂದಿಗೆ ದೀರ್ಘಕಾಲದ ನಂಟಿರುವ ಇವರು ಗುಜರಾತ್ನಲ್ಲಿ ಪಕ್ಷದ ಬೆಳವಣಿಗೆಗೆ ಪ್ರಮುಖ ಪಾತ್ರವಹಿಸಿ, ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದಾರೆ.
- ಆಗಸ್ಟ್ 2014ರಂದು ವಜುಬಾಯ್ ವಾಲ ರವರು ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡ ಬಳಿಕ ತೆರವಾದ ರಾಜ್ ಕೋಟ್ ಕ್ಷೇತ್ರದಲ್ಲಿ ರೂಪಾಣಿ ಅವರು ಚುನಾವಣೆಯಲ್ಲಿ ಸ್ಪರ್ಧಿಸಿ ಜಯಗಳಿಸುವ ಮೂಲಕ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು.
- ರೂಪಾಣಿ ಅವರು ಗುಜರಾತ್ನ 16ನೇ ಮುಖ್ಯಮಂತ್ರಿ.

**ನಿತಿನ್ ಪಟೇಲ್ ಉಪಮುಖ್ಯಮಂತ್ರಿ**

- ಗುಜರಾತ್ನ ಮತ್ತೊಬ್ಬ ಹಿರಿಯ ರಾಜಕಾರಣಿ ನಿತಿನ್ ಪಟೇಲ್ ಅವರನ್ನು ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆಮಾಡಲಾಗಿದೆ. ಇದೇ ಮೊದಲ ಬಾರಿಗೆ ಗುಜರಾತ್ನಲ್ಲಿ ಈ ಹುದ್ದೆ ಸೃಷ್ಟಿಸಲಾಗಿದೆ.

**ಖ್ಯಾತ ತುಳು, ಕನ್ನಡ ಸಾಹಿತಿ ಬೋಲ ಚಿತ್ತರಂಜನ್ ಶೆಟ್ಟಿ ವಿಧಿವಶ**

ಪ್ರಸಿದ್ಧ ತುಳು, ಕನ್ನಡ ಸಾಹಿತಿ ಬೋಲ ಚಿತ್ತರಂಜನ್ ಶೆಟ್ಟಿ ಅವರು ಕೊನೆಯುಸಿರೆಳೆದರು. 72 ವರ್ಷ ವಯಸ್ಸಿನ ಚಿತ್ತರಂಜನ್ ಶೆಟ್ಟಿ ಹೃದಯಾಘಾತದಿಂದ ನಿಧನರಾದರು. ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಅವರು, 2013ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದರು.

- 1944ರ ಆಗಸ್ಟ್ 30ರಂದು ಉಡುಪಿ ಜಿಲ್ಲೆಯ ಕಾರ್ಕಳದ ಬೋಳ ಗ್ರಾಮದಲ್ಲಿ ಅವರು ಜನಿಸಿದ್ದರು.
- 1973 ರಲ್ಲಿ 'ಪೊಣ್ಣು ಮಣ್ಣ್‌ದ ಬೊಂಬೆ' ಎಂಬ ತುಳು ನಾಟಕವನ್ನು ರಚಿಸಿದ್ದ ಅವರು, 1983ರಲ್ಲಿ ಕಂಬುಲ ಎಂಬ ಪ್ರಬಂಧ ಬರೆದಿದ್ದರು. ಇದು ತುಳುನಾಡಿನ ಕ್ರೀಡೆಯಾದ ಕಂಬಳದ ಬಗೆಗಿನ ಪ್ರಥಮ ದಾಖಲೆ ಬರಹ ಆಗಿತ್ತು.
- 1990ರಲ್ಲಿ ಅಳಿಯ ಸಂತಾನ ಕಟ್ಟಿಗೆ ಸಂಬಂಧಿಸಿದಂತೆ 'ಅಳಿದುಳಿದವರು' ಎಂಬ ಕನ್ನಡ ಕಾದಂಬರಿಯನ್ನು ಬರೆದಿದ್ದರು. ಇದು ಇವರಿಗೆ ಪ್ರಖ್ಯಾತಿಯನ್ನು ತಂದು ಕೊಟ್ಟಿತು.
- 2005ರಲ್ಲಿ 'ಕುಡಿ ಕನ್ನಡ' ಕಾದಂಬರಿ 2006 ರಲ್ಲಿ 'ನೀರ್' ಎಂಬ ತುಳು ನಾಟಕವನ್ನು ಮಕ್ಕಳಿಗಾಗಿ ಬರೆದಿದ್ದರು.
- 'ಬಿನ್ನೆದಿ ತುಳು ಪಾಡ್ದನ', 'ಅಮರ ಬೀರೆರ ಮಾಮಣ್ಣೆ', 'ಒಂಟಿ ಒಬ್ಬಂಟಿ', 'ತಮ್ಮಲೆ ಅರುವತ್ತ ಕಟ್ಟ್' ಮುಂತಾದ ಕವನ ಸಂಕಲನ, 'ಶ್ರೀ ಮಧ್ವ ಭಾರತ ತುಳು ಪಾಡ್ದನ', 'ಅನ್ನಾರ್ಥಿ' ಇವರ ಪ್ರಸಿದ್ಧ ಕನ್ನಡ ಕವನ ಸಂಕಲನ ಆಗಿವೆ.

www.karunaduexams.com

**ಪ್ರಶಸ್ತಿಗಳು:**

- 2012ರಲ್ಲಿ ತುಳು ಗೌರವ ಪ್ರಶಸ್ತಿ, ಶ್ರೀಕೃಷ್ಣ ವಾದಿರಾಜ ಪ್ರಶಸ್ತಿ ಮತ್ತು 2013ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ಚಿತ್ತರಂಜನ್ ಶೆಟ್ಟಿ ಪಡೆದಿದ್ದರು. ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಆಯ್ಕೆಯಾಗಿದ್ದರು.

**ಪ್ರಖ್ಯಾತ ಯೋಗ ಗುರು ಟಿ.ಕೆ.ವಿ.ದೇಸಿಕಚಾರ್ ನಿಧನ**

ಪ್ರಸಿದ್ಧ ಯೋಗ ಗುರು ಟಿ.ಕೆ.ವಿ ದೇಸಿಕಚಾರ್ ಅವರು ಅನಾರೋಗ್ಯದ ಕಾರಣ ನಿಧನರಾದರು. ಮೂಲತಃ ಮೈಸೂರಿನವರಾದ ಇವರು 1960ರಲ್ಲಿ ಚೆನ್ನೈಗೆ ಸ್ಥಳಾಂತರಗೊಂಡಿದ್ದರು. ವೃತ್ತಿಯಲ್ಲಿ ಇಂಜನಿಯರ್ ಆಗಿದ್ದ ದೇಸಿಕಚಾರ್ ತಮ್ಮ ತಂದೆಯವರಿಂದ ಪ್ರೇರಣೆಗೊಂಡು ಯೋಗ ಅಭ್ಯಾಸದ ಕಡೆಗೆ ಆಕರ್ಷಣೆಗೊಂಡಿದ್ದರು.

- ದೇಸಿಕಚಾರ್ ಅವರು ಆಧುನಿಕ ಯೋಗದ ಪಿತಾಮಹ ಎಂದೇ ಖ್ಯಾತರಾಗಿದ್ದ ಟಿ.ಕೃಷ್ಣಮಚಾರ್ಯರ ಮಗ.
- ದೇಶದ ಪ್ರಸಿದ್ದ ಯೋಗ ಮಂದಿರಗಳಲ್ಲಿ ಒಂದಾದ ಕೃಷ್ಣಮಚಾರ್ಯ ಯೋಗ ಮಂದಿರವನ್ನು ತನ್ನ ತಂದೆಯವರ ಸ್ಮರಣಾರ್ಥ ಇವರು ಸ್ಥಾಪಿಸಿದ್ದರು. ಇಂದು ಈ ಯೋಗ ಮಂದಿರದಲ್ಲಿ 1000 ಕ್ಕೂ ಹೆಚ್ಚು ಜನ ಯೋಗ ಅಭ್ಯಾಸ ಮಾಡುತ್ತಿದ್ದಾರೆ.
- "ವಿನಿಯೋಗ" ದೇಸಿಕಚಾರ್ ರವರು ಕರಗತ ಮಾಡಿಕೊಂಡಿದ್ದ ಯೋಗ ಶೈಲಿಯ ಹೆಸರು.
- "ದಿ ಹಾರ್ಟ್ ಆಫ್ ಯೋಗ" ದೇಸಿಕಚಾರ್ ರವರು ಯೋಗ ಕುರಿತು ಬರೆದಿರುವ ಪುಸ್ತಕ.

**ಬಹು ಭಾಷೆ ನಟಿ, ಡ್ಯಾನ್ಸರ್ ಜ್ಯೋತಿ ಲಕ್ಷಿ ಇನ್ನಿಲ್ಲ**

ಬಹು ಭಾಷೆ ನಟಿ ಮತ್ತು ಕ್ಯಾಬರೆ ಡ್ಯಾನ್ಸರ್ ಜ್ಯೋತಿ ಲಕ್ಷಿರವರು ಸಾವನ್ನಪ್ಪಿದ್ದರು. ಜ್ಯೋತಿ ಲಕ್ಷಿ ಎಪ್ಪತ್ತರ ದಶಕದಲ್ಲಿ ತಮ್ಮ ಡ್ಯಾನ್ಸ್ ಮೂಲಕ ಸಿನಿಮಾ ರಂಗದಲ್ಲಿ ಸಂಚಲನ ಮೂಡಿಸಿದ್ದರು. ಅವರಿಗೆ 70 ವರ್ಷ ವಯಸ್ಸಾಗಿತ್ತು.

- ಜ್ಯೋತಿ ಲಕ್ಷಿ ಅವರು ತೆಲುಗು, ತಮಿಳು, ಕನ್ನಡ, ಮಲಯಾಳಂ, ಹಿಂದಿ ಸೇರಿದಂತೆ ಹಲವು ಭಾಷೆಗಳಲ್ಲಿ ಅಭಿನಯಿಸಿದ್ದಾರೆ.
- ಬಾಲ ನಟಿಯಾಗಿ ಚಿತ್ರರಂಗಕ್ಕೆ ಕಾಲಿಟ್ಟ ಲಕ್ಷ್ಮೀ 300ಕ್ಕೂ ಅಧಿಕ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಇನ್ನು ಕ್ಯಾಬರೆ ಡ್ಯಾನ್ಸ್ ಮೂಲಕ ಸಿನಿಮಾ ಲೋಕದಲ್ಲಿ ಮಿಂಚು ಮೂಡಿಸಿದ್ದರು.
- ಕನ್ನಡದಲ್ಲಿ ಕುಳ್ಳ ಏಜೆಂಟ್ 000 (1965), ಬೆಂಗಳೂರು ಮೇಲ್ (1966), ಪ್ರತಿಧ್ವನಿ (1969), ಚೆಲ್ಲಿದ ರಕ್ತ (1982), ವಿಜಯದಶಮಿ (2001) ಹಾಗೂ ರಕ್ತ ಕಣ್ಣೀರು (2004)ಚಿತ್ರಗಳಲ್ಲಿ ಜ್ಯೋತಿ ಲಕ್ಷ್ಮೀ ಅಭಿನಯಿಸಿದ್ದಾರೆ.
- ಹಿಂದಿಯಲ್ಲಿ ರಾಣಿ ಔರ್ ಜಾನಿ, ಜವಾಬ್ ಸೇರಿದಂತೆ ಹಲವು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

**16 ವರ್ಷ ಸುದೀರ್ಘ ಕಾಲದ ಉಪವಾಸ ಸತ್ಯಾಗ್ರಹಕ್ಕೆ ಅಂತ್ಯ ಹೇಳಿದ ಇರೋಮ್ ಶರ್ಮಿಳ**

ಮಣಿಪುರದ ಐರನ್ ಲೇಡಿ ಎಂದೇ ಪ್ರಸಿದ್ದರಾಗಿರುವ ಇರೋಮ್ ಶರ್ಮಿಳ 16 ವರ್ಷ ದೀರ್ಘಕಾಲದ ಉಪವಾಸ ಸತ್ಯಾಗ್ರವನ್ನು ಕೊನೆಮಾಡಿದರು. ಸಶಸ್ತ್ರಪಡೆ ವಿಶೇಷಾಧಿಕಾರ ಕಾಯ್ದೆ (ಎಎಫ್ಎಸ್‌ಪಿಎ) ರದ್ದುಮಾಡಬೇಕೆಂದು ಆಗ್ರಹಿಸಿ 16 ವರ್ಷಗಳಿಂದ ಇರೋಮ್ ಶರ್ಮಿಳಾ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು. ಮುಂದಿನ ದಿನಗಳಲ್ಲಿ ತಾವು ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುವ ಮೂಲಕ ಚುನಾವಣೆಗೆ ಸ್ಪರ್ಧಿಸುವ ಇಂಗಿತವನ್ನು ಶರ್ಮಿಳ ವ್ಯಕ್ತಪಡಿಸಿದ್ದಾರೆ.

**ಇರೋಮ್ ಶರ್ಮಿಳ ಬಗ್ಗೆ:**

- 14 ಮಾರ್ಚ್, 1972ರಲ್ಲಿ ಮಣಿಪುರದ ಇಪಾಂಲ್ ನಲ್ಲಿ ಜನಿಸಿದ ಶರ್ಮಿಳಾ ಅವರು ಸಾಮಾಜಿಕ ಕಾರ್ಯಕರ್ತೆ, ಸಕ್ರಿಯ ರಾಜಕಾರಣಿ ಹಾಗೂ ಕವಯತ್ರಿ ಕೂಡ ಆಗಿದ್ದಾರೆ.
- ಮಣಿಪುರದ ಉಕ್ಕಿನ ಮಹಿಳೆ ಎಂತಲೇ ಇವರು ಪ್ರಸಿದ್ದರಾಗಿದ್ದಾರೆ. ನವೆಂಬರ್ 1, 2000 ರಂದು ಇಂಪಾಲ್ ನ ಮಲೊಮ್ ನಲ್ಲಿ ಬಸ್ಸಿಗಾಗಿ ಕಾಯುತಿದ್ದ ಹತ್ತು ಜನ ಸಾರ್ವಜನಿಕರನ್ನು ಅಸ್ಸಾಂ ರೈಫಲ್ಸ್ ಯೋಧರು ಗುಂಡಿಕ್ಕಿ ಕೊಂದರು ಇದನ್ನು ಖಂಡಿಸಿ ಇರೋಮ್ ಶರ್ಮಿಳ ತಮ್ಮ 28ನೇ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಅಂದಿನಿಂದ ದ್ರವರೂಪದ ಆಹಾರವನ್ನು ಮೂಗಿನ ಮೂಲಕ ಅಳವಡಿಸಲಾಗಿರುವ ನಳಿಕೆಯಿಂದ ನೀಡಲಾಗುತ್ತಿತ್ತು.
- ಮಣಿಪುರದಲ್ಲಿ ಜಾರಿಯಲ್ಲಿದ್ದ ಸಶಸ್ತ್ರಪಡೆ ವಿಶೇಷಾಧಿಕಾರ ಕಾಯ್ದೆ (ಎಎಫ್ಎಸ್‌ಪಿಎ)ಯನ್ನು ರದ್ದುಮಾಡಬೇಕೆಂಬುದು ಅವರ ಪ್ರಮುಖ ಬೇಡಿಕೆ ಆಗಿತ್ತು.

**ಶರ್ಮಿಳಾ ಅವರಿಗೆ ಸಂದಿರುವ ಪ್ರಶಸ್ತಿಗಳು:**

- 2007 ರಲ್ಲಿ ಮಾನವ ಹಕ್ಕು ಹೋರಾಟಕ್ಕೆ ನೀಡುವ ಗ್ವಾಂಗ್ಜು ಪ್ರಶಸ್ತಿ, 2009 ರಲ್ಲಿ ಮಹಿಲಮ್ಮ ಪ್ರಶಸ್ತಿ, 2010 ರಲ್ಲಿ ಏಷ್ಯಾ ಮಾನವ ಹಕ್ಕು ಆಯೋಗ ನೀಡುವ ಜೀವಮಾನ ಸಾಧನೆ ಪ್ರಶಸ್ತಿ, 2010 ರಲ್ಲಿ ರಬಿಂದ್ರನಾಥ್ ಟಾಗೋರ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

**ಖ್ಯಾತ ತಮಿಳು ಸಾಹಿತಿ ನ. ಮುತ್ತುಕುಮಾರು ನಿಧನ**

ತಮಿಳು ಚಿತ್ರರಂಗದ ಖ್ಯಾತ ಸಾಹಿತಿ, ಎರಡು ಬಾರಿ ರಾಷ್ಟ್ರ ಪ್ರಶಸ್ತಿ ಪಡೆದಿದ್ದ ನ. ಮುತ್ತುಕುಮಾರ್ ಅವರು ನಿಧನರಾದರು. ಕೆಲವು ದಿನಗಳಿಂದ ಜಾಡೀಂಸ್ ನಿಂದ ಬಳಲುತ್ತಿದ್ದ ನ. ಮುತ್ತುಕುಮಾರ್ (41) ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು.

ನ.ಮುತ್ತುಕುಮಾರ್ ಬಗ್ಗೆ:

- ಜುಲೈ 12, 1975 ರಲ್ಲಿ ಕಾಂಚೀಪುರಂನ ಕನ್ನಿಕಾಪುರಂನಲ್ಲಿ ಜನಿಸಿದ ಮುತ್ತುಕುಮಾರ್ ನಾಲ್ಕು ವರ್ಷ ಇದ್ದಾಗಲೇ ತಾಯಿಯನ್ನು ಕಳೆದುಕೊಂಡಿದ್ದರು. ತಂದೆ ನಾಗರಾಜನ್ ಪುಸ್ತಕ ಪ್ರೇಮಿಯಾದ ಕಾರಣ ಅವರಂತೆಯೇ ಪುಸ್ತಕ ಪ್ರೀತಿಯನ್ನು ಬೆಳಸಿಕೊಂಡು ಪುಸ್ತಕದೊಂದಿಗೆ ಬೆಳೆದರು. ಮುತ್ತುಕುಮಾರ್ ಡಿಎಂಕೆ ಪಕ್ಷದ ಸಂಸ್ಥಾಪಕ ಸಿ.ಎನ್.ಅಣ್ಣದೊರೈ ಅವರ ದೂರದ ಸಂಬಂಧಿ ಆಗಿದ್ದರು.
- ನಿರ್ದೇಶನಾಗುವ ಆಸೆಯೊಂದಿಗೆ ತಮಿಳು ಸಿನಿಮಾರಂಗಕ್ಕೆ ಪಾದಾರ್ಪಣೆ ಮಾಡಿದ್ದ ಮುತ್ತುಕುಮಾರ್ ಅವರು, ಬಾಲು ಮಹೇಂದರ್ ಅವರೊಂದಿಗೆ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿದರು. ತದ ನಂತರ ಕೆಲ ಚಿತ್ರಗಳಿಗೆ ಸಂಭಾಷಣೆಕಾರರಾಗಿ ಕೆಲಸ ಮಾಡಿ, ವೀರ ನಡೈ ಚಿತ್ರಕ್ಕೆ ಸಾಹಿತ್ಯ ಬರೆಯುವ ಮೂಲಕ ಸಾಹಿತಿಯಾದರು.
- ಇವರ ತಂಗ ಮೀಂಗಲ್ ಸಿನಿಮಾದ ಆನಂದ ಯಾಜೈ ಮತ್ತು ಸೈವಂ ಚಿತ್ರದ ಅಜಾಗೆ ಅಜಾಗು ಹಾಡಿನ ಉತ್ತಮ ಸಾಹಿತ್ಯಕ್ಕೆ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ.
- ಮುತ್ತುಕುಮಾರ್ ಅವರು ಈವರೆಗೂ 1000ಕ್ಕೂ ಹೆಚ್ಚು ಚಿತ್ರಗಳ ಹಾಡಿಗೆ ಸಾಹಿತಿ ಬರೆದಿದ್ದಾರೆ. ಸಿನಿಮಾ ಸಾಹಿತ್ಯ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆಗಾಗಿ ಅನೇಕ ಪ್ರಶಸ್ತಿಗಳು ಸಂದಿವೆ. 2005 ರಲ್ಲಿ ಉತ್ತಮ ಸಾಹಿತ್ಯಕ್ಕಾಗಿ ತಮಿಳು

www.karunaduexams.com

ನಾಡು ರಾಜ್ಯ ಸಿನಿಮಾ ಪ್ರಶಸ್ತಿ, 2006 ರಲ್ಲಿ ಉತ್ತಮ ಸಾಹಿತ್ಯಕ್ಕೆ ಫಿಲ್ಮ್‌ಫೇರ್ ಪ್ರಶಸ್ತಿ, ಸಿಮಾ ಪ್ರಶಸ್ತಿ, ವಿಜಯ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

**ಮಲಯಾಳಂ ನ ಖ್ಯಾತ ಚಿತ್ರಕಥೆಗಾರ ಟಿ.ಎ.ರಸಕ್ ನಿಧನ**

ಮಲಯಾಳಂ ಸಿನಿಮಾ ರಂಗದ ಖ್ಯಾತ ಚಿತ್ರಕಥೆಗಾರ ಟಿ.ಎ.ರಸಕ್ ಕೇರಳದ ಕೊಚ್ಚಿಯಲ್ಲಿ ನಿಧನರಾದರು. ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ 58 ವರ್ಷ ವಯಸ್ಸಾಗಿತ್ತು.

**ರಸಕ್ ಬಗ್ಗೆ:**

- ರಸಕ್ ಅವರು 1958ರಲ್ಲಿ ಕೇರಳದ ಮಲ್ಲಪುರಂ ಜಿಲ್ಲೆಯ ಕೊಂಡೊಟ್ಟಿಯಲ್ಲಿ ಜನಿಸಿದರು.
- ಮಲಯಾಳಂನ ಖ್ಯಾತ ನಿರ್ದೇಶಕ ಕಮಲ್ ಅವರು 1991 ರಲ್ಲಿ ನಿರ್ದೇಶಿಸಿದ ವಿಷ್ಣುಲೋಕಂ ಚಿತ್ರದ ಮೂಲಕ ಪಾದಾರ್ಪಣೆ ಮಾಡಿದರು.
- 1996 ರಲ್ಲಿ ತೆರಕಂಡ "ಕನಕ್ಕಿನವು(Kanakkinavu)" ಚಿತ್ರದ ಅತ್ಯುತ್ತಮ ಕಥೆ ಮತ್ತು ಚಿತ್ರಕಥೆಗಾಗಿ ಕೇರಳ ರಾಜ್ಯ ಸಿನಿಮಾ ಪ್ರಶಸ್ತಿಯನ್ನು ಪಡೆದಿದ್ದರು.
- ಪುನಃ 2002 ರಲ್ಲಿ ಐರತಿಲ್ ಒರುವನ್ (Ayirathil Oruvan) ಮತ್ತು 2004 ರಲ್ಲಿ ಪೆರುಮಝುಕಲ್ಲಂ (Perumazhakkalam) ಚಿತ್ರಗಳ ಅತ್ಯುತ್ತಮ ಕಥೆಗಾಗಿ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದರು.
- ಬಸ್ ಕಂಡಕ್ಟರ್, ವೆಷಂ ನದೊಡಿ, ಗಝುಲ್, ಥಾಲೊಲಂ, ಸ್ನೇಹಂ ಸಫಲಯಂ ಚಿತ್ರಗಳು ರಸಕ್ ಚಿತ್ರಕಥೆ ಬರೆದಿದ್ದ ಕೆಲವು ಪ್ರಮುಖ ಚಿತ್ರಗಳು.

**ಮಣಿಪುರದ ನೂತನ ರಾಜ್ಯಪಾಲರಾಗಿ ನೆಮ್ಮಾ ಹೆಪ್ತುಲ್ಲಾ**

- ಕೇಂದ್ರ ಮಾಜಿ ಸಚಿವೆ ನೆಮ್ಮಾ ಹೆಪ್ತುಲ್ಲಾ ಸೇರಿದಂತೆ ನಾಲ್ವರು ನೂತನ ರಾಜ್ಯಪಾಲರನ್ನು ನೇಮಕಮಾಡಲಾಗಿದೆ.
- **ನೆಮ್ಮಾ ಹೆಪ್ತುಲ್ಲಾ**: ಮಣಿಪುರದ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ.
- **ವಿ.ಪಿ ಸಿಂಗ್ ಬದ್ನೋರ್**: ಬಿಜೆಪಿ ಮುಖಂಡ ಮತ್ತು ರಾಜ್ಯಸಭಾ ಮಾಜಿ ಸದಸ್ಯ ವಿ.ಪಿ.ಸಿಂಗ್ ಬದ್ನೋರ್ ಪಂಜಾಬ್ ನ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ.
- **ಬನ್ವರಿಲಾಲ್ ಪುರೋಹಿತ್**: ಬಿಜೆಪಿ ನಾಯಕ ಮತ್ತು ನಾಗ್ಪುರದ ಮಾಜಿ ಸಂಸದ ಪುರೋಹಿತ್ ಅವರನ್ನು ಅಸ್ಸಾಂ ರಾಜ್ಯಪಾಲರಾಗಿ ನೇಮಕಮಾಡಲಾಗಿದೆ.
- **ಜಗದೀಶ್ ಮುಖಿ**: ದೆಹಲಿಯ ಬಿಜೆಪಿ ಮುಖಂಡ ಜಗದೀಶ್ ಮುಖಿ ರವರು ಅಂಡಮಾನ್ ಮತ್ತು ನಿಕೋಬರ್ ನ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಆಗಿದ್ದಾರೆ.

www.karunaduexams.com

## ಖ್ಯಾತ ಒಡಿಯಾ ನಟ ಮತ್ತು ನಿರ್ದೇಶಕ ಗೋವಿಂದ್ ತೇಜ್ ನಿಧನ

ಒಡಿಯಾ ಸಿನಿಮಾ ಕ್ಷೇತ್ರದ ಜನಪ್ರಿಯ ನಟ ಮತ್ತು ನಿರ್ದೇಶಕ ಗೋವಿಂದ್ ತೇಜ್ ಅವರು ಭುಬನೇಶ್ವರ್, ಒಡಿಶಾದಲ್ಲಿ ಕೊನೆಯುಸಿರೆಳೆದರು. 88 ವರ್ಷ ವಯಸ್ಸಿನ ತೇಜ್ ಅನಾರೋಗ್ಯದಿಂದ ಬಳಲುತ್ತಿದ್ದರು. 50 ವರ್ಷಗಳ ದೀರ್ಘಕಾಲದ ವೃತ್ತಿಜೀವನದಲ್ಲಿ ನಟ, ನಿರ್ದೇಶಕ ಅಥವಾ ನಿರ್ಮಾಪಕನಾಗಿ ಒಡಿಯಾ ಸಿನಿಮಾ ಕ್ಷೇತ್ರಕ್ಕೆ ಘಣನೀಯ ಸೇವೆ ನೀಡಿದ್ದರು.

**ಗೋವಿಂದ್ ತೇಜ್**:

- ಗೋಬಿಂದ್ ತೇಜ್ 1954 ರಲ್ಲಿ ತೆರೆಕಂಡ 'ಕೇದಾರ್ ಗೌರಿ' ಚಿತ್ರದ ಮೂಲಕ ನಟನಾಗಿ ಪಾದಾರ್ಪಣೆ ಮಾಡಿದರು. ನಂತರ 1979 ರಲ್ಲಿ 'ರಾಮಾಯಣ' ಸಿನಿಮಾ ಮೂಲಕ ನಿರ್ದೇಶಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು.
- ಮನ ಆಕಾಶ, ಕೃಷ್ಣ ಸುಧಾಮ, ಧರಿತ್ರಿ, ಗೌರಿ, ಮನ ಆಕಾಶ, ಸ್ಕೂಲ್ ಮಾಸ್ಟರ್, ಬಂಧು ಮೊಹಂತಿ ಸೇರಿದಂತೆ ಅನೇಕ ಚಿತ್ರಗಳನ್ನು ತೇಜ್ ನಿರ್ದೇಶಿಸಿದ್ದರು.

**ಪ್ರಶಸ್ತಿಗಳು:**

- ಸ್ಕೂಲ್ ಮಾಸ್ಟರ್, ಕಬೇರಿ ಚಿತ್ರಗಳ ಅತ್ಯುತ್ತಮ ನಿರ್ದೇಶನಕ್ಕಾಗಿ ಒಡಿಯಾ ರಾಜ್ಯ ಸಿನಿಮಾ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.
- "ಬಂದು ಮೊಹಂತಿ" ಚಿತ್ರದಲ್ಲಿನ ಅವಿಸ್ಮರಣೀಯ ನಟನೆಗಾಗಿ 1977 ರಲ್ಲಿ ಒಡಿಯಾ ರಾಜ್ಯ ಸಿನಿಮಾ ಅತ್ಯುತ್ತಮ ನಟ ಪ್ರಶಸ್ತಿಗೆ ಭಾಜನರಾಗಿದ್ದರು.
- ಒಡಿಯಾ ಸಿನಿಮಾ ಕ್ಷೇತ್ರದ ಅಭಿವೃದ್ಧಿಗೆ ತೇಜ್ ನೀಡಿದ್ದ ಕೊಡುಗೆಯನ್ನು ಗಮನಿಸಿ ಒಡಿಶಾ ಸಿನಿಮಾ ರಂಗದ ಅತ್ಯುನ್ನತ ಪ್ರಶಸ್ತಿಯಾದ "ಜಯದೇವ" ಪ್ರಶಸ್ತಿಯನ್ನು 1986 ರಲ್ಲಿ ನೀಡಲಾಗಿತ್ತು.

## ಭಾರತೀಯ ರಿಸರ್ವ್ ಬ್ಯಾಂಕ್ ನ 24ನೇ ಗವರ್ನರ್ ಆಗಿ ಉರ್ಜಿತ್ ಪಟೇಲ್ ನೇಮಕ

ಭಾರತೀಯ ರಿಸರ್ವ್ ಬ್ಯಾಂಕ್ ನ ನೂತನ ಗರ್ವನರ್ ಆಗಿ ಉರ್ಜಿತ್ ಪಟೇಲ್ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ಪಟೇಲ್ ಭಾರತೀಯ ರಿಸರ್ವ್ ಬ್ಯಾಂಕ್ ನ 24ನೇ ಗವರ್ನರ್. ರಘುರಾಮ್ ರಾಜನ್ ಅವರ ಉತ್ತರಾಧಿಕಾರಿಯಾಗಿರುವ ಪಟೇಲ್ ಮೂರು ವರ್ಷಗಳ ಕಾಲ ಗವರ್ನರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಪಟೇಲ್ ಪ್ರಸ್ತುತ ಭಾರತೀಯ ರಿಸರ್ವ್ ಬ್ಯಾಂಕ್ ನಲ್ಲಿ ಡೆಪ್ಯೂಟಿ ಗವರ್ನರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿ ನೇಮಕಗೊಂಡ 8ನೇ ಡೆಪ್ಯೂಟಿ ಗವರ್ನರ್.

**ಹಿನ್ನಲೆ**:

ಸಂಸದೀಯ ಕಾರ್ಯದರ್ಶಿಯ ನೇತೃತ್ವದ ಎಫ್ಎಸ್ಆರ್ಎಎಸ್ಸಿ (Sector Regulatory Appointments Search Committee)ಸಮಿತಿಯ ಶಿಫಾರಸ್ಸಿನ ಮೇರೆಗೆ ಸಂಪುಟ ನೇಮಕಾರಿ ಸಮಿತಿ ಉರ್ಜಿತ್ ಪಟೇಲ್ ಅವರ ಹೆಸರನ್ನು ಅಂತಿಮಗೊಳಿಸಿದೆ.

**ಉರ್ಜಿತ್ ಪಟೇಲ್ ಬಗ್ಗೆ**:

www.karunaduexams.com

- ಅಕ್ಟೋಬರ್ 28, 2963 ರಲ್ಲಿ ಜನನ. ಲಂಡನ್ ಸ್ಕೂಲ್ ಆಫ್ ಇಕಾನಮಿಕ್ಸ್ ನಲ್ಲಿ ನಂತರ ಆಕ್ಸ್'ಫರ್ಡ್ ವಿವಿಯಲ್ಲಿ 1986 ರಲ್ಲಿ ಎಂ.ಫಿಲ್ ಪದವಿ.
- 1990 ರಲ್ಲಿ ಯಾಲೆ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದಲ್ಲಿ ಪಿ.ಎಚ್'ಡಿ.
- 1990-1995 ಅವಧಿಯಲ್ಲಿ ಇಂಟರ್'ನೇಶನಲ್ ಮಾನಿಟರಿ ಫಂಡ್'ನಲ್ಲಿ ಸೇವೆ. 1998-2001 ಹಣಕಾಸು ಸಚಿವಾಲಯದಲ್ಲಿ ಸಲಹೆಗಾರರಾಗಿ ಸೇವೆ.
- ಮೊದಲ ಬಾರಿಗೆ 2013ರಲ್ಲಿ ರಿಸರ್ವ್ ಬ್ಯಾಂಕ್ ಡೆಪ್ಯೂಟಿ ಗವರ್ನರ್ ಆಗಿ ನೇಮಕ. 2016ರಲ್ಲಿ ರಿಸರ್ವ್ ಬ್ಯಾಂಕ್ ಡೆಪ್ಯೂಟಿ ಗವರ್ನರ್ ಆಗಿ ಪುನರ್'ನೇಮಕ.
- ಭಾರತೀಯ ರಿಸರ್ವ್ ಬ್ಯಾಂಕ್ ರಚಿಸಿದ್ದ ಹಣಕಾಸು ಪರಾಮರ್ಶೆ ನೀತಿ ಸಮಿತಿಗೆ ಉರ್ಜಿತ್ ಪಟೇಲ್ ನೇತೃತ್ವವಹಿಸಿದ್ದರು. ಬಡ್ಡಿದರ ನಿಗದಿ ಪಡಿಸಲು ಹಣಕಾಸು ಪರಾಮರ್ಶೆ ಸಮಿತಿಯನ್ನು ರಚಿಸುವಂತೆ ಈ ಸಮಿತಿ ಶಿಫಾರಸ್ಸು ಮಾಡಿತ್ತು. ಇದಲ್ಲದೇ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿವಿಧ ಉನ್ನತ ಮಟ್ಟದ ಸಮಿತಿಗಳ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ.

**<u>ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯ ರಾಯಭಾರಿಯಾಗಿ ಸಾಕ್ಷಿ ಮಲಿಕ್</u>**

ಕುಸ್ತಿ ಪಟು ಸಾಕ್ಷಿ ಮಲಿಕ್ ಅವರನ್ನು ಬೇಟಿ ಬಚಾವೊ ಬೇಟಿ ಪಡಾವೊ (Save Daughter Educate Daughter) ಯೋಜನೆಯ ಹರಿಯಾಣದ ರಾಯಭಾರಿಯನ್ನಾಗಿ ನೇಮಕಮಾಡಲಾಗಿದೆ. ಬಹದ್ದೂರ್‌ಗಢದಲ್ಲಿ ನಡೆದ ಸಮಾ ರಂಭದಲ್ಲಿ ಮುಖ್ಯ ಮಂತ್ರಿ ಕಟ್ಟರ್ ಅವರು ಸಾಕ್ಷಿ ಅವರಿಗೆ ಸ್ಮರಣಿಕೆ ಮತ್ತು 2.5 ಕೋಟಿ ರೂ.ಗಳ ವಿತರಣೆ ವೇಳೆ ಸಾಕ್ಷಿ ಅವರನ್ನು ರಾಯಭಾರಿಯನ್ನಾಗಿ ನೇಮಕ ಮಾಡಲಾಯಿತು. ರಿಯೋ ಒಲಂಪಿಕ್ಸ್ ಮಹಿಳೆಯರ 58 ಕೆ.ಜಿ ಕುಸ್ತಿ ವಿಭಾಗದಲ್ಲಿ ಸಾಕ್ಷಿ ಮಲಿಕ್ ಕಂಚಿನ ಪದಕವನ್ನು ಗೆದ್ದಿದ್ದರು. ಆ ಮೂಲಕ ಒಲಂಪಿಕ್ಸ್ ಕುಸ್ತಿಯಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳೆ ಎಂಬ ದಾಖಲೆ ಬರೆದಿದ್ದಾರೆ.

**ಬೇಟಿ ಬಚಾವೊ ಬೇಟಿ ಪಡಾವೊ ಬಗ್ಗೆ:**

- ಬೇಟಿ ಬಚಾವೊ ಬೇಟಿ ಪಡಾವೊ ಅಭಿಯಾನವನ್ನು ದೇಶದಲ್ಲಿ ಮಕ್ಕಳ ಲಿಂಗಾನುಪಾತ ಇಳಿಮುಖ ಪ್ರವೃತ್ತಿಯ ಕುರಿತು ಜಾಗೃತಿ ಮೂಡಿಸಲು ಆರಂಭಿಸಲಾಗಿದೆ.
- ಮಹಿಳೆಯರ ಕಲ್ಯಾಣಕ್ಕಾಗಿ ಮೀಸಲಿರುವ ಯೋಜನೆಗಳನ್ನು ಬಗ್ಗೆ ಅರಿವು ಮೂಡಿಸುವುದು.
- ಲಿಂಗ ಪಕ್ಷಪಾತ ಮಾಡಿ ಲಿಂಗ ಆಯ್ಕೆಮಾಡುವುದನ್ನು ಕಠಿಣ ಕಾನೂನು ಕ್ರಮ ಜಾರಿಗೆ ತರುವ ಮೂಲಕ ನಿಷೇಧಿಸುವುದು ಈ ಅಭಿಯಾನದ ಒತ್ತಾಸೆಯಾಗಿದೆ.
- ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಈ ಅಭಿಯಾನದ ನೋಡಲ್ ಏಜೆನ್ಸಿಯಾಗಿದ್ದು, ಅಭಿಯಾನವನ್ನು ಅನುಷ್ಠಾನ ಮಾಡುವ ಹೊಣೆ ಹೊಂದಿದೆ.

www.karunaduexams.com

**ಖ್ಯಾತ ಚಿತ್ರಕಾರ, ಲೇಖಕ ಮತ್ತು ಕಲಾ ಚರಿತ್ರೆಕಾರ ದೀನನಾಥ ಪಥಿ ನಿಧನ**

ಒಡಿಶಾದ ಪ್ರಸಿದ್ಧ ಚಿತ್ರಕಾರ, ಲೇಖಕ ಮತ್ತು ಕಲಾ ಚರಿತ್ರೆಕಾರ ದೀನನಾಥ ಪಥಿ ಅವರು ಹೃದಯಸ್ತಂಭನದಿಂದ ನಿಧನರಾದರು. ವಿಶಿಷ್ಟ ಪ್ರತಿಭೆಯಿಂದ ಪ್ರಸಿದ್ಧರಾಗಿದ್ದ ಪಥಿ, ನವದೆಹಲಿ ಮತ್ತು ಭುಬನೇಶ್ವರ ಲಲಿತಾ ಅಕಾಡೆಮಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.

**ದೀನನಾಥ ಪಥಿ ಬಗ್ಗೆ:**

- ಪಥಿ ಅವರು ಭುವನೇಶ್ವರದ ಬಿ.ಕೆ. ಕಾಲೇಜ್ ಆಫ್ ಆರ್ಟ್ ಆಯಂಡ್ ಕ್ರಾಫ್ಟ್ಸ್ ನ ಸಂಸ್ಥಾಪಕ ಪ್ರಾಂಶುಪಾಲರಾಗಿದ್ದರು. ಕಲೆ, ಕವನ ಹಾಗೂ ಬೋಧನೆಗಳಿಂದ ಒಡಿಶಾದ ಕಲೆಯನ್ನು ವಿಶ್ವಾದ್ಯಂತ ಪಸರಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು.
- ಒಡಿಶಾದಲ್ಲಿ ಕಲಾ ಚಳುವಳಿಯನ್ನು ಆರಂಭಿಸಿದ ಮೊದಲಿಗ ಎಂಬ ಖ್ಯಾತಿ ಪಥಿ ಅವರದು.
- ಸಾಹಿತಿಯಾಗಿ ಒಡಿಯಾ, ಇಂಗ್ಲೀಷ್ ಮತ್ತು ಜರ್ಮನ್ ಭಾಷೆಯಲ್ಲಿ ಸುಮಾರು 50ಕ್ಕೂ ಹೆಚ್ಚು ಪುಸ್ತಕಗಳನ್ನು ಅವರು ಬರೆದಿದ್ದರು
- ಚಿತ್ರಕಲೆಗಾಗಿ 'ಭಾರತದ ರಾಷ್ಟ್ರಪತಿಯ ರಜತ ಫಲಕ'ದ ಗೌರವಕ್ಕೆ ಪಾತ್ರರಾಗಿದ್ದರು. ಭಾರತೀಯ ಕಲಾ ಚರಿತ್ರೆಯ ಸಂಶೋಧನೆಗೆ ನೀಡಿದ ಕೊಡುಗೆಗಾಗಿ ಅವರು, ಸ್ವಿಟ್ಜರ್ಲ್ಯಾಂಡ್ನ ರೈಟ್ಬರ್ಗ್ ಸೊಸೈಟಿಯ ಪ್ರತಿಷ್ಠಿತ ರೈಟ್ ಬರ್ಗ್ ಪ್ರಶಸ್ತಿಗೆ 2014ರಲ್ಲಿ ನಾಮಕರಣಗೊಂಡಿದ್ದರು. ಅವರ ಆತ್ಮಕತೆ "ಡ್ರಾಯಿಂಗ್ ಮಾಸ್ಟರ್ ಆಫ್ ದಿಗಪಹಂದಿ" ಗಾಗಿ ಒಡಿಶಾ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದರು.

**ಕೇಂದ್ರ ಮೀಸಲು ಪೊಲೀಸ್ ಪಡೆ (CRPF)ನ ರಾಯಭಾರಿಯಾಗಿ ಪಿ.ವಿ.ಸಿಂಧು ನೇಮಕ**

ಒಲಂಪಿಕ್ ಬೆಳ್ಳಿ ಪದಕ ವಿಜೇತೆ ಪಿ.ವಿ,ಸಿಂಧು ಅವರನ್ನು ಕೇಂದ್ರ ಮೀಸಲು ಪೊಲೀಸ್ ಪಡೆಯ ರಾಯಭಾರಿಯನ್ನಾಗಿ ನೇಮಕ ಮಾಡಲು ನಿರ್ಧರಿಸಲಾಗಿದೆ. ಅಲ್ಲದೇ, ಇದರ ಗೌರವ ಕಮಾಂಡಂಟ್ ಆಗಿಯೂ ಪಿ.ವಿ.ಸಿಂಧು ನೇಮಕಗೊಳ್ಳಲಿದ್ದಾರೆ. ಕೇಂದ್ರ ಮೀಸಲು ಪೊಲೀಸ್ ಪಡೆಯ ಡೈರೆಕ್ಟರ್ ಜನರಲ್ ಕೆ.ದುರ್ಗ ಪ್ರಸಾದ್ ಅವರು ನೇಮಕಾತಿಯನ್ನು ಖಚಿತಪಡಿಸಿದ್ದು, ಸಿಂಧು ಇದಕ್ಕೆ ಸಮ್ಮತಿಸಿದ್ದಾರೆ. ಸದ್ಯ ನೇಮಕಾತಿ ಕುರಿತ ಪ್ರಸ್ತಾವನೆಯನ್ನು ಗೃಹ ಸಚಿವಾಲಯದ ಅನುಮತಿಗೆ ಸಲ್ಲಿಸಲಾಗಿದೆ.

**ಕೇಂದ್ರ ಮೀಸಲು ಪೊಲೀಸ್ ಪಡೆ:**

- ಕೇಂದ್ರ ಮೀಸಲು ಪೊಲೀಸ್ ಪಡೆ ಭಾರತದ ಅತಿದೊಡ್ಡ ಪ್ಯಾರಮಿಲಿಟರಿ ಪಡೆಯಾಗಿದೆ. ಕೇಂದ್ರ ಗೃಹ ಸಚಿವಾಲಯದಡಿ ಇದು ಕಾರ್ಯನಿರ್ವಹಿಸುತ್ತಿದೆ.
- ರಾಜ್ಯ ಮತ್ತು ಕೇಂದ್ರಾಡಳಿ ಪ್ರದೇಶಗಳಲ್ಲಿ ಪೊಲೀಸ್ ಕಾರ್ಯಾಚರಣೆ ಮೂಲಕ ಕಾನೂನು ಸುವ್ಯವಸ್ಥೆ ಕಾಪಾಡುವುದು ಇದರ ಪ್ರಮುಖ ಕಾರ್ಯವಾಗಿದೆ.
- 1939 ರಲ್ಲಿ ಇದನ್ನು ಸ್ಥಾಪಿಸಲಾಗಿದ್ದು, ಕೇಂದ್ರ ಮೀಸಲು ಪೊಲೀಸ್ ಪಡೆ ಕಾಯಿದೆ-1949 ರ ಅನ್ವಯ ಶಾಸನಬದ್ಧಗೊಳಿಸಲಾಗಿದೆ.

www.karunaduexams.com

- ಪ್ರಸ್ತುತ ಕೇಂದ್ರ ಮೀಸಲು ಪೊಲೀಸ್ ಪಡೆ ವಿಶ್ವದ ಅತಿ ದೊಡ್ಡ ಪ್ಯಾರಮಿಲಿಟರಿ ಪಡೆಯಾಗಿದ್ದು, 228 ಬೆಟಾಲಿಯನ್ ಹಾಗೂ 3 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ಒಳಗೊಂಡಿದೆ.

**ಸಾಕ್ಷಿ ಮಲಿಕ್ ಬೇಟಿ ಬಚಾವೊ ಫಾರ್ ಹರ್ಯಾಣದ ರಾಯಭಾರಿ**

- ಕುಸ್ತಿಪಟು ಸಾಕ್ಷಿ ಮಲಿಕ್ ಬೇಟಿ ಬಚಾವೊ ಫಾರ್ ಹರ್ಯಾಣದ ರಾಯಭಾರಿ, ಬೇಟಿ Padao (ಮಗಳು ಉಳಿಸಲು ಮಗಳು ಶಿಕ್ಷಣ) ಹರ್ಯಾಣದ ಪ್ರಚಾರ ಹೆಸರಿಸಲಾಯಿತು. ಸಾಕ್ಷಿ ಮಲಿಕ್ 58 ಕೆಜಿ ವಿಭಾಗದಲ್ಲಿ 2016 ರಿಯೊ ಒಲಿಂಪಿಕ್ಸ್ನಲ್ಲಿ ಕುಸ್ತಿಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. ಅವರು ಕುಸ್ತಿ ಒಲಿಂಪಿಕ್ಸ್ ಪದಕ ಗೆದ್ದ ಭಾರತದ ಮೊದಲ ಮಹಿಳಾ ಎಂಬ ಇತಿಹಾಸವನ್ನು ನಿರ್ಮಿಸಿತು. ಈ ನಿಟ್ಟಿನಲ್ಲಿ ಪ್ರಕಟಣೆ 2.5 ಕೋಟಿ ರೂಪಾಯಿ ಮತ್ತು ಪ್ರಶಸ್ತಿ ಪ್ರಮಾಣಪತ್ರ ಜೊತೆ ಮಲಿಕ್ ಪ್ರದಾನ ನಂತರ ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ Khattar ಮಾಡಲ್ಪಟ್ಟಿತು. ಬೇಟಿ ಬಚಾವೊ ಬಗ್ಗೆ, ಬೇಟಿ Padhao (BBBP) ಪ್ರಚಾರ BBBP ಪ್ರಚಾರ ದೇಶದಲ್ಲಿ ಮಕ್ಕಳ ಲಿಂಗ ಅನುಪಾತ ಇಳಿಮುಖ ಪ್ರವೃತ್ತಿ ಕುರಿತು ಜಾಗೃತಿಯನ್ನು ಹರಡಲು ಗುರಿ. ಇದು ಅರಿವು ಮೂಡಿಸಲು ಮತ್ತು ಮಹಿಳೆಯರಿಗೆ ಅರ್ಥ ಕಲ್ಯಾಣ ಸೇವೆಗಳ ಸಾಮರ್ಥ್ಯವನ್ನು ಸುಧಾರಿಸಲು ಗುರಿ. ಇದರ ಮುಖ್ಯ ಉದ್ದೇಶ ಉಲ್ಲಂಘಿಸಿದವರನ್ನು ಕಠಿಣ ಶಿಕ್ಷೆ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ಲಿಂಗ ಪಕ್ಷಪಾತ ಲೈಂಗಿಕ ಆಯ್ದ ಎಲಿಮಿನೇಷನ್ ತಡೆಯುವುದಾಗಿದೆ. ಮಹಿಳೆಯರ ಸಚಿವಾಲಯ ಮತ್ತು ಮಕ್ಕಳ ಅಭಿವೃದ್ಧಿ (WCD), ಯೋಜನೆಯ ಅನುಷ್ಠಾನಕ್ಕೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸುತ್ತದೆ.

www.karunaduexams.com

# ವ್ಯವಹಾರ

**ಬಂಡವಾಳ ಹೂಡಿಕೆ ಆಕರ್ಷಣೆಯಲ್ಲಿ ನಂ.1 ಸ್ಥಾನ ಪಡೆದ ಕರ್ನಾಟಕ**

ಬಂಡವಾಳ ಹೂಡಿಕೆ ಆಕರ್ಷಣೆಯಲ್ಲಿ ಕರ್ನಾಟಕ ಈಗ ದೇಶದಲ್ಲಿ ನಂ.1 ಸ್ಥಾನವನ್ನು ಪಡೆದುಕೊಂಡಿದೆ. ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ 2016ನೇ ಸಾಲಿನ "ಉದ್ಯಮ ಸುಧಾರಣಾ ಕ್ರಿಯಾ ಯೋಜನೆ' ಸೂಚ್ಯಂಕದ ಪ್ರಕಾರ, 2016ರ ಜನವರಿಯಿಂದ-ಜೂನ್ ವರೆಗಿನ ಅವಧಿಯಲ್ಲಿ ಕರ್ನಾಟಕ 67,757 ಕೋಟಿ ರೂ. ಬಂಡವಾಳ ಆಕರ್ಷಿಸುವ ಮೂಲಕ ಗುಜರಾತ್ ಅನ್ನು ಹಿಂದಿಕ್ಕಿದೆ.

- ಈ ಅವಧಿಯಲ್ಲಿ ಗುಜರಾತ್ ಸರ್ಕಾರ 21,309 ಕೋಟಿ ರೂ. ಬಂಡವಾಳ ಆಕರ್ಷಣೆ ಮಾಡಿದೆ. ಇನ್ನೂ ಒಂದು ಅಚ್ಚರಿಯ ಸಂಗತಿ ಎಂದರೆ 2015ರ ಇಡೀ ಅವಧಿಯಲ್ಲಿ ಗುಜರಾತ್ 64,733 ಕೋಟಿ ರೂ. ಬಂಡವಾಳ ಆಕರ್ಷಿಸಿದ್ದರೆ, ಅದನ್ನು ಈ ವರ್ಷ ಕರ್ನಾಟಕ ಕೇವಲ ಅರ್ಧ ತಿಂಗಳಲ್ಲಿ ಇದನ್ನು ಮೀರಿಸಿದೆ. ಈ ಮೂಲಕ ದೇಶದಲ್ಲೇ ಬಂಡವಾಳ ಆಕರ್ಷಣೆಯ ಅಗ್ರಸ್ಥಾನಿಯಾಗಿದೆ.
- 2015ರಲ್ಲಿ ಅತಿ ಹೆಚ್ಚು ಹೂಡಿಕೆ ಆಕರ್ಷಿಸಿದ ರಾಜ್ಯಗಳ ಪೈಕಿ ಕರ್ನಾಟಕ ನಾಲ್ಕನೇ ಸ್ಥಾನ(31,668 ಕೋಟಿ ರೂ.) ಗಳಿಸಿತ್ತು. ಮಹಾರಾಷ್ಟ್ರ ಎರಡನೇ(33,277 ಕೋಟಿ ರೂ.) ಹಾಗೂ ಒಡಿಶಾ ಐದನೇ(24,524 ಕೋಟಿ ರೂ.) ಸ್ಥಾನ ಗಳಿಸಿದ್ದವು.
- ಉಳಿದಂತೆ ಅತ್ಯಧಿಕ ಬಂಡವಾಳ ಆಕರ್ಷಿಸಿದ ಪಟ್ಟಿಯಲ್ಲಿ ಮಹಾರಾಷ್ಟ್ರ (15,688 ಕೋಟಿ ರೂ.), ತೆಲಂಗಾಣ (13,600 ಕೋಟಿ ರೂ.), ಛತ್ತೀಸ್ಗಢ (8,514 ಕೋಟಿ ರೂ.) ಇವೆ.

**ಸಶಸ್ತ್ರ ಪಡೆಗಳಿಗೆ ವಿಶೇಷ ಅಧಿಕಾರ ಕಾಯ್ದೆ ಎಂದರೆ ಏನು?**

- ಸಶಸ್ತ್ರಪಡೆ ವಿಶೇಷಾಧಿಕಾರ ಕಾಯ್ದೆ (ಅಥವಾ Armed Forces Special Powers Act) ಭಾರತ ಸಂವಿಧಾನ ಸೇನಾ ಪಡೆಗಳಿಗೆ ನೀಡಿರುವ ವಿಶೇಷ ಅಧಿಕಾರ. ಈ ಕಾಯ್ದೆ ಸೆಪ್ಟೆಂಬರ್ 11, 1958ರಲ್ಲಿ ಅಸ್ಸಾಂನ ನಾಗ ಹಿಲ್ಸ್ ಪ್ರದೇಶದಲ್ಲಿ ಮಾತ್ರ ಜಾರಿಗೆ ತರಲಾಗಿತ್ತು. ತದನಂತರ ಒಂದರ ನಂತರ ಒಂದರಂತೆ ಈಶಾನ್ಯ ರಾಜ್ಯಗಳಾದ ಅರುಣಾಚಲ ಪ್ರದೇಶ ಅಸ್ಸಾಂ, ಮೇಘಾಲಯ, ಮಣಿಪುರ, ಮೀಝೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರಾದಲ್ಲಿ ಕಾಯ್ದೆಯನ್ನು ಜಾರಿಗೆ ತರಲಾಯಿತು.
- ಆದರೆ 1983 ರಲ್ಲಿ ಕಾಯಿದೆ ತಿದ್ದುಪಡಿ ತರುವ ಮೂಲಕ ಪಂಜಾಬ್ ಮತ್ತು ಛತ್ತೀಸ್ ಘಡಕ್ಕೆ ವಿಸ್ತರಿಸಲಾಯಿತು. ಆದರೆ 1997 ರಲ್ಲಿ ಇದನ್ನು ಹಿಂಪಡೆಯಲಾಯಿತು.
- ತದನಂತರ 1990 ರಲ್ಲಿ ಅಂಗೀಕಾರವಾದ ನಿಯಾಮವಳಿಯಂತೆ ಜಮ್ಮು ಮತ್ತು ಕಾಶ್ಮೀರದಲ್ಲಿ ಈ ಕಾಯಿದೆ ಜಾರಿಗೆ ಬಂದಿತು, ಸದ್ಯ ಕಾಶ್ಮೀರದಲ್ಲಿ ಇಂದಿಗೂ ಜಾರಿಯಲ್ಲಿದೆ.

**ವಿಶೇಷ ಅಧಿಕಾರವೇನು?**

- ವಾರಂಟ್ ಇಲ್ಲದೇ ಯಾರನ್ನು ಬೇಕಾದರೂ ದಸ್ತಗಿರಿ ಮಾಡುವ, ಬಂಧನ ಮಾಡುವ, ಅಗತ್ಯ ಬಿದ್ದರೆ ಗೋಲಿಬಾರ್ ನಡೆಸುವ ಅಧಿಕಾರವನ್ನು ಸೇನೆಗೆ ಕಾನೂನು ನೀಡುತ್ತದೆ.

www.karunaduexams.com

**ಫೋರ್ಬ್ಸ್ ನಿಯತಕಾಲಿಕೆಯ ನೂರು ಶ್ರೀಮಂತ ತಂತ್ರಜ್ಞಾನ ಉದ್ಯಮಿಗಳ ಪಟ್ಟಿಯಲ್ಲಿ ಪ್ರೇಮ್ ಜಿ, ಶಿವ ನಾದರ್**

ಫೋರ್ಬ್ಸ್ ನಿಯತಕಾಲಿಕೆ ಇತ್ತೀಚೆಗೆ ಬಿಡುಗಡೆ ಮಾಡಿದ ನೂರು ಶ್ರೀಮಂತ ತಂತ್ರಜ್ಞಾನ ಉದ್ಯಮಿಗಳ ಪಟ್ಟಿಯಲ್ಲಿ ಇಬ್ಬರು ಭಾರತೀಯರು ಸ್ಥಾನ ಪಡೆದಿದ್ದಾರೆ. ವಿಪ್ರೊ ಅಧ್ಯಕ್ಷ ಅಜೀಂ ಪ್ರೇಮ್ ಜಿ ಹಾಗೂ ಎಚ್‌ಸಿಎಲ್ ಸಮೂಹ ಸಂಸ್ಥೆಗಳ ಸಹ ಸಂಸ್ಥಾಪಕ ಶಿವ ನಾದಾರ್ ಈ ಪಟ್ಟಿಯಲ್ಲಿ ಸೇರ್ಪಡೆಗೊಂಡಿದ್ದಾರೆ. ಈ ಇಬ್ಬರು ಭಾರತೀಯರು ಮೊದಲ 20 ಕ್ರಮಾಂಕದಲ್ಲಿ ಸ್ಥಾನ ಗಿಟ್ಟಿಸಿರುವುದಾಗಿ ವಿಶೇಷ.

.

- ಫೋರ್ಬ್ಸ್ '2016ರ ವಿಶ್ವದ ನೂರು ಶ್ರೀಮಂತ ತಂತ್ರಜ್ಞಾನ ಶತಕೋಟ್ಯಧೀಶ ಉದ್ಯಮಿಗಳು' ಪಟ್ಟಿಯಲ್ಲಿ ಮೈಕ್ರೊಸಾಫ್ಟ್ ಸಂಸ್ಥಾಪಕ ಬಿಲ್ ಗೇಟ್ಸ್ ಪ್ರಥಮ ಸ್ಥಾನವನ್ನು ಅಲಂಕರಿಸಿದ್ದಾರೆ. ಅಮೆಜಾನ್ ಸಂಸ್ಥಾಪಕ ಜೆಫ್ ಬೆಜೊಸ್ ಎರಡನೇ ಸ್ಥಾನದಲ್ಲಿ ಹಾಗೂ ಫೇಸ್ ಬುಕ್ ಸಂಸ್ಥಾಪಕ, ಸಿಇಒ ಮಾರ್ಕ್ ಝುಕರ್ಬರ್ಗ್ ಮೂರನೇ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದಾರೆ.
- ಫೋರ್ಬ್ಸ್ ಪಟ್ಟಿಯಲ್ಲಿ ಪ್ರೇಮ್ ಜಿ 13ನೇ ಸ್ಥಾನದಲ್ಲಿದ್ದು, ಅವರ ಸಂಪತ್ತಿನ ಮೊತ್ತ 16 ಬಿಲಿಯನ್ ಅಮೆರಿಕನ್ ಡಾಲರ್ ಆಗಿದೆ. ನದರ್ 17ನೇ ಸ್ಥಾನದಲ್ಲಿದ್ದು, ಅವರಲ್ಲಿ 11.6 ಶತಕೋಟಿ ಡಾಲರ್ ನಷ್ಟು ಆಸ್ತಿ ಮೌಲ್ಯವಿದೆ.
- ಕೇವಲ ಐದು ಮಹಿಳಾ ಉದ್ಯಮಿಗಳು ಮಾತ್ರ ಈ ಪಟ್ಟಿಯಲ್ಲಿ ಸ್ಥಾನಗಿಟ್ಟಿಸಲು ಸಫಲರಾಗಿದ್ದಾರೆ. ಭಾರತ ಮೂಲದ ಅಮೆರಿಕ ಸಾಫ್ಟವೇರ್ ಉದ್ಯಮಿಗಳಾದ ಸಿಂಫೋನಿ ಟೆಕ್ನಾಲಜಿ ಗ್ರೂಪ್ ಸಿಇಒ ರೊಮೇಶ್ ವಾಧ್ವಾನಿ, ಹೊರಗುತ್ತಿಗೆ ಸಂಸ್ಥೆ ಸಿಂಟೆಲ್ ಸಂಸ್ಥಾಪಕ ಭರತ್ ದೇಸಾಯಿ ಮತ್ತು ಅವರ ಪತ್ನಿ ನೀರಜ್ ಸೇಠಿ ಕೂಡ ಈ ಪಟ್ಟಿಯಲ್ಲಿದ್ದಾರೆ.
- ಈ ಪಟ್ಟಿಯಲ್ಲಿರುವ 51 ಜನರು ಅಮೆರಿಕದವರೇ ಆಗಿದ್ದಾರೆ. ಮೊದಲ ಹತ್ತು ಸ್ಥಾನಗಳ ಪೈಕಿ ಎಂಟು ಸ್ಥಾನಗಳನ್ನು ಅಮೆರಿಕಾದವರ ಪಾಲಾಗಿದೆ. ಆ ಮೂಲಕ ವಿಶ್ವದಲ್ಲಿ ಅಮೆರಿಕಾ ಅತಿ ಹೆಚ್ಚು ಶ್ರೀಮಂತ ತಂತ್ರಜ್ಞಾನ ಉದ್ಯಮಿಗಳನ್ನು ಹೊಂದಿದ್ದಾರೆ. ಅಮೆರಿಕವನ್ನು ಹೊರತುಪಡಿಸಿದರೆ ಚೀನಾದ 19 ಉದ್ಯಮಿಗಳು ಈ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. ಆ ಪೈಕಿ ಅಲಿಬಾಬಾ ಸಂಸ್ಥಾಪಕ ಜಾಕ್ ಮಾ ಎಂಟನೇ ಕ್ರಮಾಂಕದಲ್ಲಿದ್ದಾರೆ.

**ಎಂ.ಎಸ್.ಸುಬ್ಬುಲಕ್ಷ್ಮಿ ಜನ್ಮಶತಾಬ್ದಿ ಅಂಗವಾಗಿ ವಿಶ್ವಸಂಸ್ಥೆಯಿಂದ ಅಂಚೆ ಚೀಟಿ**

ಖ್ಯಾತ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಜನ್ಮ ಶತಮಾನೋತ್ಸವದ ಗೌರವಾರ್ಥ ವಿಶ್ವಸಂಸ್ಥೆಯು ವಿಶೇಷ ಅಂಚೆ ಚೀಟಿ ಬಿಡುಗಡೆ ಮಾಡಲು ನಿರ್ಧರಿಸಿದೆ. ವಿಶ್ವಸಂಸ್ಥೆಯ ಭಾರತದ ಪ್ರತಿನಿಧಿಯು ಕಚೇರಿಯು ಈ ವಿಷಯವನ್ನು ಖಚಿತಗೊಳಿಸಿದೆ.

- ಭಾರತದ 70ನೇ ಸ್ವಾತಂತ್ರ್ಯೋತ್ಸವ ದಿನವಾದ ಆಗಸ್ಟ್ 15ರಂದು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನಡೆಯುವ ಸಾಮಾನ್ಯ ಅಧಿವೇಶನದಲ್ಲಿ ಅಂಚೆ ಚೀಟಿ ಬಿಡುಗಡೆ ಮಾಡಲಾಗುವುದು.
- 1966ರಲ್ಲಿ ವಿಶ್ವಸಂಸ್ಥೆಯ ಮುಖ್ಯಕಚೇರಿಯಲ್ಲಿ ಸುಬ್ಬುಲಕ್ಷ್ಮಿ ಅವರು ಸಂಗೀತ ಕಾರ್ಯಕ್ರಮ ನೀಡಿದ್ದರು. ಈ ವರ್ಷ ಅದಕ್ಕೆ 50 ವರ್ಷ ತುಂಬುತ್ತದೆ. ಆ ಕಾರಣ ಮತ್ತು ಜನ್ಮಶತಾಬ್ದಿ ಅಂಗವಾಗಿ ವಿಶೇಷ ಅಂಚೆ ಚೀಟಿ ಹೊರತರಲಾಗುತ್ತಿದೆ.
- ಇದೇ ವೇಳೆ ಸುಬ್ಬುಲಕ್ಷ್ಮಿ ಅವರ ಜೀವನ ಮತ್ತು ಸಾಧನೆಯನ್ನು ಬಿಂಬಿಸುವ ಅವರ ಛಾಯಾಚಿತ್ರಗಳ ಪ್ರದರ್ಶನ ನಡೆಯಲಿದೆ.

www.karunaduexams.com

- ಈ ಸಮಾರಂಭದಲ್ಲಿ ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಅವರು ವಿಶ್ವಸಂಸ್ಥೆಯಲ್ಲಿ ಸಂಗೀತ ಕಾರ್ಯಕ್ರಮ ನಡೆಸುವ ಮೂಲಕ ಸುಬ್ಬುಲಕ್ಷ್ಮಿ ಅವರಿಗೆ ಗೌರವ ಸಲ್ಲಿಸಲಿದ್ದಾರೆ. ಸುಬ್ಬುಲಕ್ಷ್ಮಿ ನಂತರ ವಿಶ್ವಸಂಸ್ಥೆಯಲ್ಲಿ ಸಂಗೀತ ನಡೆಸಿಕೊಟ್ಟ ಎರಡನೇ ಭಾರತೀಯ ಇವರಾಗಲಿದ್ದಾರೆ.

**ಸರಕು ಮತ್ತು ಸೇವಾ (GST) ಮಸೂದೆಗೆ ಅನುಮೋದನೆ ನೀಡಿದ ಮೊದಲ ರಾಜ್ಯ "ಅಸ್ಸಾಂ"**

ಈಶಾನ್ಯ ರಾಜ್ಯಗಳ ಅಸ್ಸಾಂ ರಾಜ್ಯ ಸರಕು ಮತ್ತು ಸೇವಾ ಮಸೂದೆ-2014 (ಸಂವಿಧಾನ 122ನೇ ತಿದ್ದುಪಡಿ)ಗೆ ಅನುಮೋದನೆ ಮಾಡಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಸಂಬಂಧ ಅಸ್ಸಾಂ ವಿಧಾನಸಭೆಯಲ್ಲಿ ಅವಿರೋಧವಾಗಿ ಜಿಎಸ್'ಟಿಯನ್ನು ಅನುಮೋದನೆ ಮಾಡಲಾಗಿದೆ.

- ಜಿಎಸ್'ಟಿ ಮಸೂದೆಯನ್ನು ಆಗಸ್ಟ್ 2016 ರಲ್ಲಿ ಸಂಸತ್ತು ಅನುಮೋದನೆಗೊಳಿಸಿ, ಸಂವಿಧಾನದ ಕಲಂ 368 ಪ್ರಕಾರ ಅನುಮೋದನೆಗೆ ರಾಜ್ಯಗಳಿಗೆ ಕಳುಹಿಲಾಗಿತ್ತು. ಸಂವಿಧಾನದ ಕಲಂ 368 ಪ್ರಕಾರ ಶೇ 50% ರಾಜ್ಯಗಳು ಅಂದರೆ 29 ರಲ್ಲಿ 15 ರಾಜ್ಯಗಳು ಅನುಮೋದನೆ ನೀಡಿದರೆ ಮಾತ್ರ ಈ ಮಸೂದೆ ಜಾರಿಗೆ ಬರಲಿದೆ.

**ಸಂವಿಧಾನದ ಕಲಂ 368:**

- ಯಾವುದೇ ಸಂವಿಧಾನ ತಿದ್ದುಪಡಿ ಮಸೂದೆಯು ಒಕ್ಕೂಟ ವ್ಯವಸ್ಥೆಗೆ ಬದಲಾವಣೆ ತರುವಂತದಾಗಿದ್ದರೆ, ವಿಶೇಷ ಬಹುಮತದೊಂದಿಗೆ, ಶೇ50 ರಷ್ಟು ರಾಜ್ಯಗಳು ಅನುಮೋದನೆ ನೀಡಬೇಕಾಗುವುದು ಕಡ್ಡಾಯ.
- ಈ ಕಲಂ ಅನ್ವಯ ಎರಡೂ ಸದನಗಳಲ್ಲಿ ಇದು **ಮೂರನೇ ಎರಡರಷ್ಟು ಬಹುಮತದಿಂದ ಅಂಗೀಕಾರಗೊಳ್ಳಬೇಕು.**
- ಜೊತೆಗೆ, ಸರಳ ಬಹುಮತದ ಮೂಲಕ ಶೇ 50% ರಷ್ಟು ರಾಜ್ಯಗಳು (15/ 29 ರಾಜ್ಯಗಳು) ಅನುಮೋದಿಸಬೇಕು.

**ಜಿಎಸ್'ಟಿ:**

- ಪ್ರಸ್ತುತ ನಮ್ಮ ದೇಶದಲ್ಲಿ ವಿವಿಧ ರೀತಿಯ ತೆರಿಗೆ ವಿಧಾನಗಳಿವೆ. ಕೇಂದ್ರ ಮತ್ತು ಅಬಕಾರಿ ಸುಂಕ , ಸೇವಾ ತೆರಿಗೆ ಮತ್ತು ಕಸ್ಟಮ್ಸ್ ತೆರಿಗೆಗಳನ್ನು ಕೇಂದ್ರ ಸರ್ಕಾರ ಹಾಕುವುದಿದ್ದರೆ, ಮೌಲ್ಯವರ್ಧಿತ ತೆರಿಗೆವ್ಯಾಟ್, ಮನರಂಜನಾ ತೆರಿಗೆ, ಐಷಾರಾಮಿ ತೆರಿಗೆ ಅಥವಾ ಲಾಟರಿ ತೆರಿಗೆಗಳನ್ನು ಆಯಾ ರಾಜ್ಯ ಸರಕಾರಗಳು ವಿಭಿನ್ನವಾಗಿ ನಿಭಾಯಿಸುತ್ತವೆ. ಈ ಎಲ್ಲಾ ತೆರಿಗೆಗಳನ್ನು ಒಂದೇ ತೆರಿಗೆ ವಿಧಾನದಡಿ ತರಲು ಜಿಎಸ್ ಟಿಯನ್ನು ಜಾರಿಗೆ ತರಲಾಗುತ್ತದೆ.
- ಇದರಿಂದ ದೇಶಾದ್ಯಂತ ಯಾವುದೇ ಅಡೆತಡೆಯಿಲ್ಲದೆ ವಹಿವಾಟು ನಡೆಸಬಹುದು. ವಹಿವಾಟು ವೆಚ್ಚ ಕೂಡ ಕಡಿಮೆಯಾಗುತ್ತದೆ. ಭಾರತದ ಆರ್ಥಿಕ ಮಟ್ಟ ಸುಧಾರಣೆಯಾಗುತ್ತಿರುವ ಇಂದಿನ ದಿನಗಳಲ್ಲಿ ಈ ತೆರಿಗೆ ಪದ್ದತಿ ಪ್ರಸ್ತುತವಾಗಿದೆ.ಇದು ಭ್ರಷ್ಟತೆಯನ್ನು ಕಡಿಮೆ ಮಾಡಿ ಹೆಚ್ಚು ಪಾರದರ್ಶಕವಾಗಿ ಆಡಳಿತ ನಡೆಸಲು ಅನುಕೂಲವಾಗುತ್ತದೆ.

www.karunaduexams.com

**ಐದು ಸಹವರ್ತಿ ಬ್ಯಾಂಕ್ಗಳ ವಿಲೀನಕ್ಕೆ SBI ಮಂಡಳಿ ಸಮ್ಮತಿ**

ಐದು ಸಹವರ್ತಿ ಬ್ಯಾಂಕಗಳು ಮತ್ತು ಭಾರತೀಯ ಮಹಿಳಾ ಬ್ಯಾಂಕ್ ವಿಲೀನಗೊಳಿಸಲು ಭಾರತೀಯ ಸ್ಟೇಟ್ ಬ್ಯಾಂಕ್ ನ ನಿರ್ದೇಶಕ ಮಂಡಳಿ ಒಪ್ಪಿಗೆ ಸೂಚಿಸಿದೆ. ಆ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಬಿಕಾನೇರ್ ಮತ್ತು ಜೈಪುರ (ಎಸ್ಬಿಬಿಜೆ), ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್ಬಿಎಂ), ಸ್ಟೇಟ್ ಬ್ಯಾಂಕ್ ಆಫ್ ಟ್ರವಾಂಕೂರ್ (ಎಸ್ಬಿಟಿ) ಮತ್ತು ಭಾರತೀಯ ಮಹಿಳಾ ಬ್ಯಾಂಕ್ ಲಿಮಿಟೆಡ್ಗಳನ್ನು (ಬಿಎಂಬಿಎಲ್) ವಿಲೀನಗೊಳ್ಳಲಿವೆ.

- ಷೇರುಪೇಟೆಯಲ್ಲಿ ವಹಿವಾಟು ನಡೆಸುವ ಬ್ಯಾಂಕ್ಗಳ ಷೇರುಗಳ ವಿನಿಮಯ ಅನುಪಾತವನ್ನೂ ಅನುಮೋದಿಸಲಾಗಿದೆ. ವಿಲೀನಗೊಳಿಸಿಕೊಳ್ಳಲು ಎಸ್ಬಿಐ ನಿರ್ದೇಶಕರ ಕೇಂದ್ರೀಯ ಮಂಡಳಿಯು ಸಮ್ಮತಿ ನೀಡಿದೆ.
- ಷೇರುಪೇಟೆಯಲ್ಲಿ ನೋಂದಾಣಿಯಾಗಾದ ಸ್ಟೇಟ್ ಬ್ಯಾಂಕ್ ಪಾಟಿಯಾಲ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ ಅನ್ನು ವಿಲೀನಗೊಳಿಸಲು ಸಮ್ಮತಿಸಲಾಗಿದೆ.
- ವಿಲೀನ ಪ್ರಕ್ರಿಯೆಯಿಂದ ರೂ 37 ಲಕ್ಷ ಕೋಟಿ ರೂಪಾಯಿ ಮೊತ್ತದ ಜಾಗತಿಕ ಗಾತ್ರದ ಬೃಹತ್ ಬ್ಯಾಂಕ್ ಆಗಿ ರೂಪುಗೊಳ್ಳಲಿದೆ. ಆ ಮೂಲಕ ಜಾಗತಿಕ ಮಟ್ಟದ 50 ಬೃಹತ್ ಆರ್ಥಿಕ ಸಂಸ್ಥೆಗಳ ಗುಂಪಿಗೆ ಭಾರತೀಯ ಸ್ಟೇಟ್ ಬ್ಯಾಂಕ್ ಸೇರ್ಪಡೆಗೊಳ್ಳಲಿದೆ.
- ವಿಲೀನದ ನಂತರ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆಗಳ ಸಂಖ್ಯೆ 22,500 ಹಾಗೂ ಎಟಿಎಂಗಳ ಸಂಖ್ಯೆ 58,000 ಕ್ಕೆ ಏರಿಕೆಯಾಗಲಿದೆ.
- ಪ್ರಸ್ತುತ ಭಾರತೀಯ ಸ್ಟೇಟ್ ಬ್ಯಾಂಕ್ 36 ದೇಶಗಳಲ್ಲಿ 191 ವಿದೇಶಿ ಶಾಖೆಗಳು ಸೇರಿ ಸುಮಾರು 16,500 ಶಾಖೆಗಳನ್ನು ಹೊಂದಿದೆ. ಐದು ಸಹವರ್ತಿ ಬ್ಯಾಂಕಗಳು ಸುಮಾರು 6000 ಶಾಖೆಗಳನ್ನು ಹೊಂದಿವೆ.

**ನಮಾಮಿ ಗಂಗೆಯಡಿ ಉತ್ತರಪ್ರದೇಶದ ಐದು ಹಳ್ಳಿಗಳನ್ನು ದತ್ತು ಪಡೆದ "ಐಐಟಿ ಖಾನ್ಪುರ್"**

ಖಾನ್ಪುರ್ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ನಮಾಮಿ ಗಂಗೆ ಯೋಜನೆಯಡಿ ಉತ್ತರ ಪ್ರದೇಶದ ಐದು ಹಳ್ಳಿಗಳನ್ನು ದತ್ತುಪಡೆದುಕೊಂಡಿದೆ. ಉತ್ತರ ಪ್ರದೇಶದ ರಮೆಲ್ ನಗರ್, ಪ್ರತಪುರ್, ಹರಿ ಹಿಂದ್ಪುರ್, ಕೊರ ಕತಾರಿಯ ಮತ್ತು ಕತ್ರಿ ಲದ್ವ ಖೇರ ಗ್ರಾಮಗಳನ್ನು ದತ್ತು ಪಡೆಯಲಾಗಿದೆ.

- ಈ ಕಾರ್ಯಕ್ರಮದಡಿ ಐಐಟಿ ಖಾನ್ಪುರ್ ತನ್ನ ತಂತ್ರಜ್ಞಾನ ಬಳಸಿ ಗಂಗಾನದಿಗೆ ಚರಂಡಿ ನೀರು ಸೇರ್ಪಡೆಯಾಗುವುದನ್ನು ತಡೆಯಲಿದೆ. ಈ ಕಾರ್ಯವನ್ನು ಐಐಟಿ ಖಾನ್ಪುರ್ದ ಸಿವಿಲ್ ಎಂಜನಿಯರಿಂಗ್ ವಿಭಾಗವು ಕೈಗೊಳ್ಳಲಿದೆ.
- ನದಿ ನೀರಿಗೆ ಚರಂಡಿ ನೀರು ಸೇರ್ಪಡೆಗೊಳ್ಳದಂತೆ ಹಾಗೂ ನೀರಿನ ಗುಣಮಟ್ಟ ಮತ್ತು ಸ್ವಚ್ಚತೆಗೆ ಒತ್ತು ನೀಡಲಾಗುವುದು.
- ಹಳ್ಳಿಗಳನ್ನು ದತ್ತು ಪಡೆದುಕೊಂಡು ನೈರ್ಮಲ್ಯ ಮಾದರಿ ಗ್ರಾಮಗಳನ್ನಾಗಿ ರೂಪಿಸುವಂತೆ ಕೇಂದ್ರ ಸರ್ಕಾರ 13 ಶೈಕ್ಷಣಿಕ ಸಂಸ್ಥೆಗಳಿಗೆ ನಿರ್ದೇಶಿಸಿತ್ತು. ಈ ಸಂಸ್ಥೆಗಳಲ್ಲಿ ಐಐಟಿ ಖಾನ್ಪುರ ಸಹ ಒಂದಾಗಿದೆ.

www.karunaduexams.com

**ನಮಾಮಿ ಗಂಗೆ ಯೋಜನೆ:**

ಗಂಗಾ ನದಿಯನ್ನು ಶುದ್ಧೀಕರಿಸುವ ಸಲುವಾಗಿ ಕೇಂದ್ರ ಸರ್ಕಾರ ನವಾಮಿ ಗಂಗೆ ಯೋಜನೆಯನ್ನು ಜಾರಿಗೊಳಿಸಿದೆ. ನದಿ ಶುದ್ಧೀಕರಣಕ್ಕಾಗಿ ಕೊಳಚೆ ನೀರು ಸಂಸ್ಕರಣಾ ಘಟಕ ಸ್ಥಾಪನೆ ಹಾಗೂ ಅನಿಯಂತ್ರಿತ ನೀರಿನ ಹರಿವು ನಿಯಂತ್ರಣ ಸೇರಿದಂತೆ 300 ಯೋಜನೆಗಳು 'ನಮಾಮಿ ಗಂಗೆ'ಯಲ್ಲಿ ಸೇರಿವೆ. ಯೋಜನೆಯ ಮೊದಲ ಭಾಗವಾಗಿ ಗಂಗಾ ನದಿ ಹರಿಯುವ ಐದು ರಾಜ್ಯಗಳ 104 ಸ್ಥಳಗಳಲ್ಲಿ ಏಕಕಾಲದಲ್ಲಿ ಸ್ಮಶಾನ ಹಾಗೂ ಚಿತಾಗಾರ ನಿರ್ಮಾಣ, ದುರಸ್ತಿ, ಸುಂದರ ನದಿ ತೀರ ನಿರ್ಮಾಣ ಹಾಗೂ ಕೊಳಚೆ ನೀರು ಸಂಸ್ಕರಣ ಘಟಕಗಳ ನಿರ್ಮಾಣ, ದುರಸ್ತಿ ಸೇರಿದಂತೆ ಇತರ ಅಭಿವೃದ್ಧಿ ಕೆಲಸ ಗಳನ್ನು ಆರಂಭಿಸಲಾಗುತ್ತದೆ.

**ಬ್ರಿಕ್ಸ್ (BRICS) ಮಹಿಳಾ ಸಂಸದರ ಸಭೆಗೆ ಚಾಲನೆ**

ಬ್ರಿಕ್ಸ್ ರಾಷ್ಟ್ರಗಳ ಮಹಿಳಾ ಸಂಸದರ ಸಭೆ ರಾಜಸ್ತಾನದ ಜೈಪುರದಲ್ಲಿ ಆರಂಭಗೊಂಡಿತು. ಬ್ರಿಕ್ಸ್ ರಾಷ್ಟ್ರಗಳೆಂದರೆ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ. ಎರಡು ದಿನದ ಈ ಸಭೆಯನ್ನು ಲೋಕ ಸಭಾ ಸ್ಪೀಕರ್ ಸುಮಿತ್ರಾ ಮಹಾಜನ್ ಉದ್ಘಾಟಿಸಿದರು.

- ಸಭೆಯಲ್ಲಿ ಬ್ರಿಕ್ಸ್ ರಾಷ್ಟ್ರಗಳ 43 ಮಹಿಳಾ ಸಂಸದರು ಭಾಗವಹಿಸಲಿದ್ದಾರೆ.
- ಬ್ರೆಜಿಲ್ ನ ಐದು ಮಹಿಳಾ ಸಂಸದರು, ರಷ್ಯಾದ ಮೂರು, ಭಾರತದಿಂದ ಇಪ್ಪತ್ತೆಂಟು, ಚೀನಾದ ಇಬ್ಬರು ಹಾಗೂ ದಕ್ಷಿಣ ಆಫ್ರಿಕಾದಿಂದ ನಾಲ್ಕು ಮಹಿಳಾ ಸಂಸದರು ಪಾಲ್ಗೊಳ್ಳಲಿದ್ದಾರೆ.
- ಮೊದಲ ಅಧಿವೇಶನದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವುದು ಮತ್ತು ಅದಕ್ಕೆ ನಾಗರೀಕರನ್ನು ಒಳಪಡಿಸುವಲ್ಲಿ ಮಹಿಳಾ ಸಂಸದರ ಪಾತ್ರದ ಬಗ್ಗೆ ಚರ್ಚಿಸಲಾಗುವುದು.
- ಎರಡನೇ ದಿನದ ಅಧಿವೇಶನದಲ್ಲಿ ಹವಾಮಾನ ಬದಲಾವಣೆ ನಿಗ್ರಹಿಸುವುದು-ಜಾಗತಿಕ ಸಹಕಾರ ಅಗತ್ಯದ ಬಗ್ಗೆ ಚರ್ಚಿಸಲಾಗುವುದು.

**ಭಾರತೀಯ ಅಂಚೆ ಪಾವತಿ ಬ್ಯಾಂಕ್ ಲಿಮೆಟೆಡ್ ಗೆ (IPPBL)ಅಧಿಕೃತ ಒಪ್ಪಿಗೆ**

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮೈಲುಗಲ್ಲು ಸ್ಥಾಪಿಸಲು ಭಾರತೀಯ ಅಂಚೆ ಸಜ್ಜಾಗಿದ್ದು, ಇದೀಗ ಭಾರತೀಯ ಅಂಚೆ ಪಾವತಿ ಬ್ಯಾಂಕ್ ಲಿಮೆಟೆಡ್ (Indian Post Payments Bank Limited) ಸ್ಥಾಪಿಸಲು ಅಧಿಕೃತವಾಗಿ ಅನುಮೋದನೆ ದೊರೆತಿದೆ. ಕಾರ್ಪೋರೇಟ್ ವ್ಯವಹಾರದ ಸಚಿವಾಲಯಗಳ ಕಂಪನಿ ನೋಂದಾಣಲಯ ಐಪಿಪಿಬಿಎಲ್ ಸ್ಥಾಪಿಸಲು ಪ್ರಮಾಣ ಪತ್ರ ನೀಡಿದೆ. ಕಂಪನಿ ಕಾಯಿದೆ 2013 ರಡಿ ಇದಕ್ಕೆ ಅನುಮೋದನೆ ನೀಡಲಾಗಿದೆ. ಐಪಿಪಿಬಿಎಲ್ ಭಾರತೀಯ ಅಂಚೆ ಇಲಾಖೆಯ ಮೊದಲ ಸರ್ಕಾರಿ ಸ್ವಾಮದ್ಯ ಸಂಸ್ಥೆಯಾಗಿದೆ (PSU). ಇದರ ಜೊತೆ ಭಾರತೀಯ ಅಂಚೆ ಪಾವತಿ ಬ್ಯಾಂಕ್ ಲಿಮೆಟೆಡ್ ಮಂಡಳಿ ಸಹ ರಚನೆಯಾಗಲಿದೆ.

- ಭಾರತೀಯ ಅಂಚೆ ಪಾವತಿ ಬ್ಯಾಂಕ್ ಲಿಮೆಟೆಡ್ ಸ್ಥಾಪನೆಯಿಂದ ಅಂಚೆ ಬ್ಯಾಂಕಿಂಗ್ ಹಾದಿ ಸುಗಮವಾಗಲಿದ್ದು, ಬ್ಯಾಂಕಿಂಗ್ ವೃತ್ತಿಪರರ ನೇಮಕಾತಿ ಆರಂಭಗೊಳ್ಳಲಿದ್ದು, 2017ರಲ್ಲಿ ಬ್ಯಾಂಕಿಂಗ್ ಸೇವೆ ದೊರೆಯಲಿದೆ.
- ಸೆಪ್ಟೆಂಬರ್ 2017 ರ ಅಂತ್ಯಕ್ಕೆ ದೇಶದಾದ್ಯಂತ ಅಂಚೆ ಬ್ಯಾಂಕಿಂಗ್ ಶಾಖೆಗಳನ್ನು ತೆರೆಯಲು ಅಂಚೆ ಇಲಾಖೆ ನಿರ್ಧರಿಸಿದೆ.

www.karunaduexams.com

**ಅಂಚೆ ಪೇಮೆಂಟ್ ಬ್ಯಾಂಕ್ ಬಗ್ಗೆ:**

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯ ಕೇಂದ್ರ ಸಚಿವ ಸಂಪುಟ, ಭಾರತ ಸರ್ಕಾರದ ಶೇ.100 ಈಕ್ವಿಟಿಯೊಂದಿಗೆ ಅಂಚೆ ಇಲಾಖೆಯ ಅಡಿಯಲ್ಲಿ ಸಾರ್ವಜನಿಕ ನಿಯಮಿತ ಕಂಪನಿಯಾಗಿ ಭಾರತೀಯ ಅಂಚೆ ಪಾವತಿ ಬ್ಯಾಂಕ್ (ಐ.ಪಿ.ಪಿ.ಬಿ) ಸ್ಥಾಪನೆಗೆ ತನ್ನ ಅನುಮೋದನೆ ನೀಡಿದೆ.
- ಈ ಯೋಜನೆಗೆ ತಗಲುವ ಒಟ್ಟು ವೆಚ್ಚ 800 ಕೋಟಿ ರೂಪಾಯಿಗಳು. ಎಲ್ಲ ನಾಗರಿಕರೂ, ಅದರಲ್ಲೂ ಶೇ.40ರಷ್ಟು ದೇಶದ ಜನಸಂಖ್ಯೆ ಸಾಂಪ್ರದಾಯಿಕ ಬ್ಯಾಂಕಿಂಗ್ ನಿಂದ ಹೊರಗಿದ್ದು, ಈ ಯೋಜನೆಯಿಂದ ಅವರಿಗೆ ಲಾಭವಾಗಲಿದೆ. ಈ ಯೋಜನೆಯನ್ನು ಹಂತಹಂತವಾಗಿ ದೇಶದಾದ್ಯಂತ ಆರಂಭಿಸಲಾಗುವುದು.
- 2015 ರಲ್ಲಿ ಭಾರತೀಯ ಅಂಚೆ ಪೇಮೆಂಟ್ ಬ್ಯಾಂಕ್ ಸ್ಥಾಪಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದನೆ ನೀಡಿತ್ತು.

**ಸ್ಥಿರ ಬ್ರಾಡ್ ಬ್ಯಾಂಡ್ ಸಂಪರ್ಕ: ಏಷ್ಯಾ-ಫೆಸಿಫಿಕ್ ದೇಶಗಳ ಪೈಕಿ ಭಾರತಕ್ಕೆ 39ನೇ ಸ್ಥಾನ**

ಸ್ಥಿರ ಬ್ರಾಡ್ ಬ್ಯಾಂಡ್ (Fixed Broadband) ಸಂಪರ್ಕ ಹೊಂದಿರುವ ಏಷ್ಯಾ-ಫೆಸಿಫಿಕ್ ನ 53 ರಾಷ್ಟ್ರಗಳ ಪೈಕಿ ಭಾರತ ಅತಿ ಕಡಿಮೆ ಅಂದರೆ 39ನೇ ಸ್ಥಾನವನ್ನು ಪಡೆದುಕೊಂಡಿದೆ. ಏಷ್ಯಾ-ಫೆಸಿಫಿಕ್ ನ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಆಯೋಗ (United Nations Economic and Social Commission for Asia and the Pacific (ESCAP)) ಇತ್ತೀಚೆಗೆ ಹೊರ ತಂದಿರುವ "State of ICT in Asia and the Pacific 2016: Uncovering the Widening Broadband Divide" ವರದಿಯಲ್ಲಿ ಈ ವಿಷಯ ಬಹಿರಂಗಗೊಂಡಿದೆ.

ವರದಿಯ ಪ್ರಮುಖಾಂಶಗಳು:

- ಸ್ಥಿರ ಬ್ರಾಡ್ ಬ್ಯಾಂಡ್ ಅಳವಡಿಸಿಕೊಂಡಿರುವ ವಿಷಯದಲ್ಲಿ ಭಾರತ ತನ್ನ ನೆರ ಹೊರೆಯ ರಾಷ್ಟ್ರಗಳಾದ ಶ್ರೀಲಂಕಾ, ಭೂತಾನ್ ಮತ್ತು ಬಾಂಗ್ಲದೇಶಕ್ಕಿಂತಲೂ ಹಿಂದೆ ಬಿದ್ದಿದೆ.
- ಹಾಂಗ್ ಕಾಂಗ್, ನ್ಯೂಜಿಲ್ಯಾಂಡ್, ಜಪಾನ್, ಮಾಕೊ, ಆಸ್ಟ್ರೇಲಿಯಾ ಮತ್ತು ಸಿಂಗಾಪುರ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿವೆ.
- 2015 ರಲ್ಲಿ ಭಾರತದಲ್ಲಿ ಕೇವಲ 1.35 ರಷ್ಟು ಜನಸಂಖ್ಯೆ ಮಾತ್ರ ಸ್ಥಿರ ಬ್ರಾಡ್ ಬ್ಯಾಂಡ್ ಸಂಪರ್ಕವನ್ನು ಪಡೆದುಕೊಂಡಿದ್ದಾರೆ.
- ಪ್ರತಿ 100 ಜನರಿಗೆ ಸ್ಥಿರ ಬ್ರಾಡ್ ಬ್ಯಾಂಡ್ ಹೊಂದಿರುವ ವಿಷಯದಲ್ಲಿ ಏಷ್ಯಾ-ಫೆಸಿಫಿಕ್ ವಲಯವು ಲ್ಯಾಟಿನ್ ಅಮೆರಿಕಾ ಮತ್ತು ಕೆರೆಬಿಯನ್ ರಾಷ್ಟ್ರಗಳಿಗಿಂತಲೂ ಹಿಂದೆ ಬಿದ್ದಿದೆ. ಯುರೋಪ್ ಮತ್ತು ಉತ್ತರ ಅಮೆರಿಕಾಗಿಂತಲೂ ತೀರಾ ಹಿಂದುಳಿದಿದೆ.
- ಏಷ್ಯಾ-ಫೆಸಿಫಿಕ್ ವಲಯದಲ್ಲಿ ಬ್ರಾಡ್ ಬ್ಯಾಂಡ್ ಸಂಪರ್ಕ ವಿಶ್ವದ ಸರಾಸರಿ 11.5/100 ಗಿಂತಲೂ ಕಡಿಮೆ ಇದೆ. ಆದರೆ 2005 ರಿಂದ ಈಚೆಗೆ ಸ್ಥಿರ ಬ್ರಾಡ್ ಬ್ಯಾಂಡ್ ಸಂಪರ್ಕದಲ್ಲಿ ಗಣನೀಯವಾಗಿ ಏರಿಕೆಯಾಗಿದೆ.

www.karunaduexams.com

**ಹೈದ್ರಾಬಾದ್ ನಲ್ಲಿ ದಕ್ಷಿಣ ಭಾರತದ ಮೊದಲ ಮಕ್ಕಳ ನ್ಯಾಯಾಲಯ ಕಾರ್ಯರಂಭ**

ಹೈದ್ರಾಬಾದ್ ನಂಪಳ್ಳಿ ಕ್ರಿಮಿನಲ್ ಕೋರ್ಟ್ ಸಂಕೀರ್ಣದಲ್ಲಿ ದಕ್ಷಿಣ ಭಾರತದ ಮೊದಲ ಮಕ್ಕಳ ನ್ಯಾಯಾಲಯವನ್ನು ಉದ್ಘಾಟನೆ ಮಾಡಲಾಯಿತು. ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಉದ್ದೇಶದಿಂದ ಮಕ್ಕಳ ಕೋರ್ಟನ್ನು ಆರಂಭಿಸಲಾಗಿದೆ. ಆ ಮೂಲಕ ಮಕ್ಕಳ ನ್ಯಾಯಾಲಯ ಹೊಂದಿರುವ ಮೂರನೇ ರಾಜ್ಯವೆಂಬ ಕೀರ್ತಿಗೆ ತೆಲಂಗಣ ಪಾತ್ರವಾಗಿದೆ. ಪ್ರಸ್ತುತ ದೆಹಲಿ ಮತ್ತು ಗೋವಾದಲ್ಲಿ ಮಕ್ಕಳ ನ್ಯಾಯಾಲವಿದೆ ಹಾಗೂ ಇದು ದೇಶದ 6 ನೇ ಮಕ್ಕಳ ನ್ಯಾಯಾಲವಾಗಿದೆ.

- ಮಕ್ಕಳ ನ್ಯಾಯಾಲಯವು ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳನ್ನಷ್ಟೇ ವಿಚಾರಣೆ ನಡೆಸಲಿದೆ.
- ಪೊಸ್ಕೊ ಕಾಯಿದೆಯಡಿ ಕಡ್ಡಾಯವಾಗಿ ಇರಬೇಕಾದ ಮಕ್ಕಳಸ್ನೇಹಿ ಕೊಠಡಿಗಳ ವ್ಯವಸ್ಥೆ ಮತ್ತು ವಿಡಿಯೋ ಕ್ಯಾಮೆರ ಮೂಲಕ ವಿಚಾರಣೆ ವ್ಯವಸ್ಥೆಯನ್ನು ಈ ಕೋರ್ಟ್ ಹೊಂದಿದೆ.
- ಮಕ್ಕಳ ಸ್ನೇಹಿಯಾಗಿ ಈ ಕೋರ್ಟನ್ನು ಅಭಿವೃದ್ಧಿಪಡಿಸಲಾಗಿದ್ದು, ಮಕ್ಕಳಿಗೊಸ್ಕರ ಆಟದ ಸಾಮಾಗ್ರಿಗಳು ಸೇರಿದಂತೆ ಬಣ್ಣ ಬಣ್ಣದ ಪೀಠೋಪಕರಣಗಳನ್ನು ಹೊಂದಿದೆ.

**ಮಹಿಳಾ ಸ್ವಸಹಾಯ ಸಂಘಗಳಿಗೆ ಶೇ. 7 ಬಡ್ಡಿದರದಲ್ಲಿ ಸಾಲ: RBI**

ಭಾರತೀಯ ರಿಸರ್ವ್ ಬ್ಯಾಂಕ್ ದೇಶದಲ್ಲಿರುವ ಮಹಿಳಾ ಸ್ವಸಹಾಯ ಸಂಘಗಳಿಗೆ (Self Help Group) ವಾರ್ಷಿಕ ಶೇ. 7ರ ಬಡ್ಡಿದರದಲ್ಲಿ ರೂ 3ಲಕ್ಷಗಳ ವರೆಗೆ ಸಾಲ ನೀಡುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಿದೆ. ಈ ಸಾಲದ ಯೋಜನೆಯನ್ನು 2015-16ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ-ಅಜೀವಿಕಾ (NRLM) ಅಡಿ ನೀಡಲಾಗುವುದು.

- ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಅನುಮೋದನೆ ಪಡೆದ ನಂತರ ಈ ಸಾಲದ ಯೋಜನೆಯನ್ನು ಜಾರಿಗೆ ತರಲಾಗಿದೆ.
- 2016-17ರ ಪರಿಷ್ಕೃತ ಮಾರ್ಗಸೂಚಿಯಂತೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ ಅಡಿಯಲ್ಲಿ ಎಲ್ಲಾ ಮಹಿಳಾ ಸ್ವ ಸಹಾಯ ಸಂಘಗಳು ಶೇ. 7ರ ಬಡ್ಡಿದರದಲ್ಲಿ ರೂ. 3 ಲಕ್ಷದವರೆಗೆ ಸಾಲ ಪಡೆಯಬಹುದಾಗಿದೆ.
- ಸ್ವರ್ಣಜಯಂತಿ ಗ್ರಾಮ ಸ್ವರಾಜ್ ಯೋಜನೆ ಅಡಿ ಸಬ್ಸಿಡಿ ಪಡೆಯುತ್ತಿರುವ ಸ್ವ ಸಹಾಯ ಗುಂಪುಗಳು ಈ ಸಾಲ ಸೌಲಭ್ಯ ಪಡೆಯಲು ಅರ್ಹವಲ್ಲ.
- ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡುವ ಗುಂಪುಗಳಿಗೆ ಉತ್ತೇಜನ ನಿಡುವ ಉದ್ದೇಶದಿಂದ ಸರ್ಕಾರ ಹೆಚ್ಚುವರಿಯಾಗಿ ಶೇ. 3ರಷ್ಟು ಅನುದಾನ ನೀಡಲಾಗುವುದು.

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ**

- ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ-ಅಜೀವಿಕಾವನ್ನು ಜೂನ್ 2011ರಲ್ಲಿ ಜಾರಿಗೆ ತಂದಿತು. ನವೆಂಬರ್ 2015ರಲ್ಲಿ ಈ ಯೋಜನೆಯನ್ನು ದೀನ್ ದಯಾಳ್ ಅಂತ್ಯೋದಯ ಯೋಜನೆಯೆಂದು ಮರುನಾಮಕರಣ ಮಾಡಿ ಅನುಷ್ಠಾನ ಮಾಡಲಾಗುತ್ತಿದೆ.
- ಈ ಯೋಜನೆಯನ್ನು ವಿಶ್ವ ಬ್ಯಾಂಕ್ ಆರ್ಥಿಕ ಸಹಾಯದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.
- ಗ್ರಾಮೀಣ ಬಡಜನರ ಕೌಟುಂಬಿಕ ಆದಾಯವನ್ನು ಹೆಚ್ಚಿಸುವುದು ಈ ಯೋಜನೆಯ ಪ್ರಮುಖ ಗುರಿಯಾಗಿದೆ.

www.karunaduexams.com

- ಇದು ವಿಶ್ವದ ಅತಿ ದೊಡ್ಡ ಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕರಣ ಯೋಜನೆಯಾಗಿದ್ದು, ಸುಮಾರು 70 ಮಿಲಿಯನ್ ಗ್ರಾಮೀಣ ಕುಟುಂಬಗಳನ್ನು ತಲುಪುವ ಗುರಿ ಹೊಂದಿದೆ.

**ವಿಮಾನ ನಿಲ್ದಾಣ ನಿರ್ಮಾಣ: ಕೇಂದ್ರ ಸರ್ಕಾರರೊಂದಿಗೆ ಸಹಿ ಹಾಕಿದ ಮೊದಲ ರಾಜ್ಯ ಮಹಾರಾಷ್ಟ್ರ**

ಪ್ರಾದೇಶಿಕ ಸಂಪರ್ಕ ಯೋಜನೆಯಡಿ ಹತ್ತು ವಿಮಾನ ನಿಲ್ದಾಣಗಳನ್ನು ನಿರ್ಮಿಸುವ ಸಲುವಾಗಿ ಮಹಾರಾಷ್ಟ್ರ ಸರ್ಕಾರ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ ಒಡಂಬಡಕಿಗೆ ಸಹ ಹಾಕಿದೆ. ಆ ಮೂಲಕದ ಪ್ರಾದೇಶಿಕ ಸಂಪರ್ಕ ಯೋಜನೆಯಡಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಹಿ ಹಾಕಿದ ಮೊದಲ ರಾಜ್ಯ ಮಹಾರಾಷ್ಟ್ರ ಎನಿಸಿದೆ. ಕೇಂದ್ರ ನಾಗರಿಕ ವಿಮಾನಯಾನ ಸಚಿವ ಅಶೋಕ್ ಗಜಪತಿ ರಾಜು ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಢ್ನವೀಸ್ ಒಪ್ಪಂದಕ್ಕೆ ಸಹಿಹಾಕಿದರು.

- ಶಿರಡಿ, ಗೊಂಡಿಯ, ಅಮ್ರುವತಿ, ಜಲಗಾನ್, ನಾಸಿಕ್, ಸೋಲಾಪುರ್, ನಂದೇಡ್, ಕೊಲ್ಹಪುರ, ರತ್ನಗಿರಿ ಮತ್ತು ಸಿಂಧೂದುರ್ಗ್ ನಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲಾಗುವುದು.
- ಕೈಗೆಟುಕುವ ವಾಯುಯಾನ ಸೇವೆಯನ್ನು ನೀಡುವ ಮೂಲಕ ಪ್ರಾದೇಶಿಕ ವಾಯುಯಾನ ವ್ಯವಸ್ಥೆಯನ್ನು ಮತ್ತಷ್ಟು ಉತ್ತಮಪಡಿಸುವ ಗುರಿಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
- ಒಪ್ಪಂದಡಿ ಕೇಂದ್ರ ಸರ್ಕಾರ ಅನುದಾನ ಒದಗಿಸಲಿದೆ. ಅಲ್ಲದೇ ಈ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳಿಗೆ ಸಹಾಯ ಮಾಡಲಿದೆ.
- ಇದಕ್ಕಾಗಿ ರಾಜ್ಯ ಸರ್ಕಾರ ಅಗತ್ಯವಿರುವ ಭೂಮಿಯನ್ನು ಉಚಿತವಾಗಿ ನೀಡಲಿದ್ದು, ವಾಯು ಇಂಧನ ಮೇಲೆ ವಿಧಿಸಲಾಗಿರುವ ಶೇ 10%ಸ್ಥಳೀಯ ತೆರಿಗೆಯನ್ನು ಶೇ 1% ಇಳಿಸಲಿದ್ದು, 10 ವರ್ಷಗಳ ಕಾಲ ಜಾರಿಯಲ್ಲಿರಲಿದೆ. ಇದರ ಜೊತೆಗೆ ನೀರು, ವಿದ್ಯುತ್ ಮತ್ತು ಇತರೆ ಅಗತ್ಯ ಸೌಕರ್ಯಗಳನ್ನು ರಿಯಾಯತಿ ದರದಲ್ಲಿ ನೀಡಲಿದೆ.

**ಪ್ರಾದೇಶಿಕ ಸಂಪರ್ಕ ಯೋಜನೆ ಬಗ್ಗೆ:**

- ಪ್ರಾದೇಶಿಕ ಸಂಪರ್ಕ ಯೋಜನೆಯನ್ನು ರಾಷ್ಟ್ರೀಯ ವಿಮಾನಯಾನ ನಾಗರಿಕ ವಿಮಾನಯಾನ ನೀತಿ (NCAP)-2015 ರಲ್ಲಿ ಉಲ್ಲೇಖಿಸಲಾಗಿದೆ.
- ಸಾರ್ವಜನಿಕರಿಗೆ ವಿಮಾನಯಾನವನ್ನು ಕೈಗೆಟಕುವಂತೆ ಮಾಡುವುದು, ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವುದು, ಉದ್ಯೋಗವಕಾಶವನ್ನು ಸೃಜಿಸುವುದು ಮತ್ತು ಪ್ರಾದೇಶಿಕ ಸಮತೋಲನ ಬೆಳವಣಿಗೆಯನ್ನು ಉತ್ತೇಜಿಸುವುದು ಈ ಯೋಜನೆಯ ಮಹತ್ವದ ಉದ್ದೇಶಗಳಾಗಿವೆ. ಸೇವೆಯಿಂದ ವಂಚಿತವಾಗಿರುವ ಮತ್ತು ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆ ಸೇವೆ ನೀಡುತ್ತಿರುವ ವಿಮಾನನಿಲ್ದಾಣಗಳನ್ನು ಪುನರ್ಜೀವನಗೊಳಿಸಿ ನಾಗರಿಕ ವಿಮಾನಯಾನ ವಲಯವನ್ನು ಪ್ರೋತ್ಸಾಹಿಸುವುದು ಈ ಯೋಜನೆಯ ಗುರಿಯಾಗಿದೆ.
- ಭಾರತೀಯ ವಿಮಾನನಿಲ್ದಾಣ ಪ್ರಾಧಿಕಾರ ಈ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿದೆ.

www.karunaduexams.com

- ಈ ಯೋಜನೆಯಡಿ ವಿಮಾನ ನಿಲ್ದಾಣ ನವೀಕರಣಕ್ಕೆ ತಗಲುವ ವೆಚ್ಚದಲ್ಲಿ ಶೇ ೮೦% ಅನ್ನು ಕೇಂದ್ರ ಸರ್ಕಾರ ಭರಿಸಲಿದೆ. ಉಳಿದ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಬೇಕು. ಈಶಾನ್ಯ ರಾಜ್ಯಗಳಲ್ಲಿ ಕೇಂದ್ರ ಸರ್ಕಾರ ಶೇ ೯೦% ರಷ್ಟು ಭರಿಸಲಿದ್ದು, ರಾಜ್ಯ ಸರ್ಕಾರ ಶೇ 10% ಮಾತ್ರ ಭರಿಸಲಿವೆ.

**22ನೇ ದೆಹಲಿ ಪುಸ್ತಕ ಮೇಳ (Delhi Book Fair )ಆರಂಭ**

ಇಪ್ಪತ್ತೆರಡನೇ ದೆಹಲಿ ಪುಸ್ತಕ ಮೇಳ ದೆಹಲಿಯ ಪ್ರಗತಿ ಮೈದಾನದಲ್ಲಿ ಆರಂಭಗೊಂಡಿತು. ಒಂಬತ್ತು ದಿನಗಳ ಕಾಲ ನಡೆಯಲಿರುವ ಈ ಮೇಳ ಸೆಪ್ಟೆಂಬರ್ 4 ರಂದು ಮುಕ್ತಾಯವಾಗಲಿದೆ. ಪ್ರಸ್ತಕ ಸಾಲಿನ ಪುಸ್ತಕ ಮೇಳದಲ್ಲಿ ಸರ್ವ ಶಿಕ್ಷಣ ಅಭಿಯಾನದಡಿ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಒತ್ತು ನೀಡಲಾಗಿದ್ದು, ಆ ಮೂಲಕ ಯುವ ಜನತೆಯಲ್ಲಿ ಓದುವ ಅಭ್ಯಾಸವನ್ನು ಪ್ರೋತ್ಸಾಹಿಸುವುದಾಗಿದೆ.

- ಇಂಡಿಯನ್ ಟ್ರೇಡ್ ಪ್ರಮೋಶನ್ ಆರ್ಗನೈಸೇಶನ್ (ITPO) ಈ ಪುಸ್ತಕ ಮೇಳವನ್ನು ಫೆಡರೇಷನ್ ಆಫ್ ಇಂಡಿಯನ್ ಪಬ್ಲೀಷರ್ಸ್ ಜೊತೆಗೂಡಿ ಆಯೋಜಿಸುತ್ತಿದೆ.
- ಕೇಂದ್ರ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ಹಮ್ಮಿಕೊಂಡಿರುವ ರಾಷ್ಟ್ರಮಟ್ಟದ ಅಭಿಯಾನಗಳನ್ನು ಈ ಮೇಳದಲ್ಲಿ ಪ್ರದರ್ಶಿಸಲಾಗುವುದು. ಕೇಂದ್ರ ಸರ್ಕಾರದ ಮಹತ್ವದ ಕಾರ್ಯಕ್ರಮಗಳಾದ ಸ್ವಚ್ಚ ಭಾರತ ಅಭಿಯಾನ, ಡಿಜಿಟಲ್ ಇಂಡಿಯಾ, ಸ್ಟಾರ್ಟ್ ಆಫ್ ಇಂಡಿಯಾ ಈ ಬಾರಿಯ ಪ್ರಮುಖ ಆಕರ್ಷಣೆಗಳಾಗಿವೆ.
- ಇವಲ್ಲದೇ ವಿವಿಧ ಬಗೆಯ ಕತೆ, ಕಾದಂಬರಿ, ಅಕಾಡೆಮಿ ಪುಸ್ತಕಗಳನ್ನು ಮೇಳದಲ್ಲಿ ಪ್ರದರ್ಶಿಸಲಾಗುವುದು.
- ಭಾರತದ ಮತ್ತು ವಿದೇಶದ ಪುಸ್ತಕ ಪ್ರಕಟಣಗಾರರು, ಪುಸ್ತಕ ವ್ಯಾಪಾರಿಗಳು, ವಿತರಕರು, ವಿದ್ಯಾ ಸಂಸ್ಥೆಗಳು ಮತ್ತು ನಿಯತಕಾಲಿಕೆ ಪ್ರಕಟಣಗಾರರು ಈ ಮೇಳದಲ್ಲಿ ಭಾಗವಹಿಸಲಿದ್ದಾರೆ.

**ಯೂನಿಯನ್ ಕ್ಯಾಬಿನೆಟ್ ಸರೊಗಸಿ (ನಿಯಂತ್ರಣ) ಮಸೂದೆ ಪರಿಚಯ, 2016 ಒಪ್ಪಿಗೆ**

ಯೂನಿಯನ್ ಕ್ಯಾಬಿನೆಟ್ ಸರೊಗಸಿ (ನಿಯಂತ್ರಣ) ಮಸೂದೆ 2016 ಪರಿಚಯ ದೇಶದಲ್ಲಿ ವಾಣಿಜ್ಯ ಸರೊಗಸಿ ನಿಷೇಧಿಸುವುದರ ತನ್ನ ಅನುಮೋದನೆ ನೀಡಿದೆ. ಬಿಲ್, ಸರೊಗಸಿ ಪರಿಣಾಮಕಾರಿ ನಿಯಂತ್ರಣ ಖಚಿತಪಡಿಸಿಕೊಳ್ಳಲು ವಾಣಿಜ್ಯ ಸರೊಗಸಿ ನಿಷೇಧಿಸುವ ಮತ್ತು ನಿರ್ಗತಿಕರಿಗೆ ಫಲವತ್ತತೆಯನ್ನು ದಂಪತಿಗಳು ನೈತಿಕ ಸರೊಗಸಿ ಅನುಮತಿಸುತ್ತದೆ. ಬಿಲ್ ಪ್ರಮುಖ ಅಂಶಗಳು ದೇಶದಲ್ಲಿ ನೈತಿಕ ಸರೊಗಸಿ ಆಚರಣೆಗಳಿಗೆ ನಿಯಂತ್ರಣಕ್ಕೆ ಮಾರಾಟ ಮತ್ತು ಮಾನವ ಭ್ರೂಣವನ್ನು ಮತ್ತು ಗ್ಯಾಮೀಟ್ಗಳ ಖರೀದಿ ಸೇರಿದಂತೆ ವಾಣಿಜ್ಯ ಸರೊಗಸಿ ನಿಷೇಧಿಸುತ್ತದೆ. ಕೇಂದ್ರ ಮಟ್ಟದಲ್ಲಿ ಸ್ಥಾಪನೆ ರಾಷ್ಟ್ರೀಯ ಸರೊಗಸಿ ಮಂಡಳಿ (NSB) ಮತ್ತು ರಾಜ್ಯ ಸರೊಗಸಿ ಮಂಡಳಿಗಳು (ಎಸ್ಎಸ್ಬಿ) ಮತ್ತು ಸೂಕ್ತ ಅಧಿಕಾರಿಗಳು ಸ್ಟೇಟ್ಸ್ / ಕೇಂದ್ರಾಡಳಿತ ಪ್ರದೇಶಗಳ ಕರೆ. ದೇಶದ ಎಲ್ಲಾ ಫಲವತ್ತತೆಯನ್ನು ಭಾರತೀಯ ವೈವಾಹಿಕ ನೈತಿಕ ಸರೊಗಸಿ ಅನುಮತಿಸುತ್ತದೆ. ಸರೊಗಸಿ ಹೊರಗೆ ಜನನ ಬಾಡಿಗೆ ತಾಯಿ ಹಕ್ಕುಗಳನ್ನು ಮತ್ತು ಮಕ್ಕಳ ರಕ್ಷಿಸುತ್ತದೆ. ಕಾನೂನು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ಅನ್ವಯಿಸುತ್ತದೆ. ಎಲ್ಲಾ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ (ಕಲೆ) ಕ್ಲಿನಿಕ್ಗಳ ನೋಂದಣಿ ನಡೆಯಲಿದೆ.

www.karunaduexams.com

# ರಾಜ್ಯ ಸರ್ಕಾರದ-ಯೋಜನೆಗಳು

**ನವಜಾತ ಶಿಶು, ಬಾಣಂತಿಯರ ಸಾವು ತಡೆಯುವ ಯೋಜನೆ ರಾಜ್ಯದಲ್ಲಿ ಜಾರಿಗೆ**

ನವಜಾತ ಶಿಶು ಹಾಗೂ ಬಾಣಂತಿಯರ ಸಾವನ್ನು ತಪ್ಪಿಸುವ ಸಲುವಾಗಿ ರಾಜ್ಯ ಸರ್ಕಾರ ವಿನೂತನ ಯೋಜನೆಯೊಂದನ್ನು ಜಾರಿಗೊಳಿಸಿದೆ. ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಸಿಂಗಾಪುರ ಅಂತಾರಾಷ್ಟ್ರೀಯ ಫೌಂಡೇಷನ್ ಸಹಭಾಗಿತ್ವದಡಿ ಈ ಯೋಜನೆಗೆ ಚಾಲನೆ ನೀಡಲಾಯಿತು.

- ಈ ಯೋಜನೆಯಡಿ ಮುಂದಿನ ಮೂರು ವರ್ಷ ಸಿಂಗಾಪುರ್ ಜನರಲ್ ಆಸ್ಪತ್ರೆಪ್ರಸೂತಿ ತಜ್ಞರು, ಶಿಶು ತಜ್ಞರು ಹಾಗೂ ಹಿರಿಯ ಶುಶ್ರೂಷಕಿ ಯರನ್ನು ಒಳಗೊಂಡ ತಜ್ಞರ ತಂಡ ರಾಜ್ಯದಲ್ಲಿನ ವಿವಿಧ ಆಸ್ಪತ್ರೆಗಳ ಆಯ್ದ 200 ಮಂದಿ ಆರೋಗ್ಯ ಇಲಾಖೆ ಸಿಬ್ಬಂದಿಗೆ ತರಬೇತಿ ನೀಡಲಿದ್ದಾರೆ.
- ತರಬೇತಿ ಪಡೆದ ಸಿಬ್ಬಂದಿ ರಾಜ್ಯದ ಇತರ ಆರೋಗ್ಯ ವೃಂದದ ಸಿಬ್ಬಂದಿಗೆ ತರಬೇತಿ ನೀಡಲಿದ್ದು, ಆ ಮೂಲಕ ನವಜಾತ ಶಿಶು ಮತ್ತು ಗರ್ಭಿಣಿಯರ ಸಮರ್ಪಕ ಆರೈಕೆಗೆ ತರಬೇತಿ ಪಡೆದ ಸಿಬ್ಬಂದಿಯನ್ನು ವಿವಿಧ ಆಸ್ಪತ್ರೆಗಳಲ್ಲಿ ನಿಯೋಜಿಸಲಾಗುವುದು, ಇವರು ತಾಯಿ ಮತ್ತು ಮಗುವಿನ ಆರೈಕೆಗೆ ತರಬೇತಿ ನೀಡಲಿದ್ದಾರೆ.
- ಸಿಂಗಾಪುರದ ಆರೋಗ್ಯ ಸೇವೆಯ ಪ್ರಸೂತಿ ತಜ್ಞರು, ನವಜಾತ ಶಿಶುತಜ್ಞರು, ಹಿರಿಯ ಶುಶ್ರೂಷಕರು ದಾದಿಗಳನ್ನೊಳಗೊಂಡ ತಂಡ ಕರ್ನಾಟಕದ ವಿವಿಧ 2ನೆ ಮತ್ತು 3ನೆ ಹಂತದ ಆಸ್ಪತ್ರೆಗಳ ಸುಮಾರು 200 ಆರೋಗ್ಯ ಸಿಬ್ಬಂದಿ ತರಬೇತಿ ನೀಡಲಿದ್ದಾರೆ. ಈ ತಜ್ಞರ ತಂಡ ಶಿಶು ಮತ್ತು ತಾಯಿ ಮರಣಕ್ಕೆ ಕಾರಣವಾ ಗಿರುವ ಅಂಶಗಳನ್ನು ನಿವಾರಿಸಲು ಬೇಕಾಗಿರುವ ಜ್ಞಾನಾಭಿವೃದ್ಧಿ, ಕೌಶಲ್ಯಗಳನ್ನು ಕಲಿಕೆಯ ಮುಖಾಂತರ ತರಬೇತುದಾರರ ಕಾರ್ಯಾಗಾರದಲ್ಲಿ (ಟಿಒಟಿ) ಮೂಲಕ ಅಣಿಗೊಳಿಸುತ್ತಾರೆ.
- ಪ್ರತೀ ತಂಡದಿಂದ ಆಯ್ಕೆಯಾದ 40 ಯಶಸ್ವಿ ತರಬೇತುದಾರರು, ರಾಜ್ಯದ 200 ಆರೋಗ್ಯ ಸಿಬ್ಬಂದಿ ವರ್ಗದವರು ತರುವಾಯ ತಮ್ಮ ಆಸ್ಪತ್ರೆಗಳನ್ನು ಇದೇ ರೀತಿ ಕೆಲ ಹಂತದ ತರಬೇತಿ ನೀಡಿ ಜ್ಞಾನ, ಕೌಶಲ್ಯ ಕಲಿಕೆಗೆ ಒತ್ತು ನೀಡಲಿದ್ದಾರೆ. ಆ ಮೂಲಕ ಶಿಶು ಮತ್ತು ಬಾಣಂತಿಯರ ಮರಣ ತಡೆಯುವ ಉದ್ದೇಶವನ್ನು ಯೋಜನೆ ಹೊಂದಿದೆ.
- ಪ್ರಸ್ತುತ ರಾಜ್ಯದಲ್ಲಿ ಶಿಶು ಮರಣ ಪ್ರಮಾಣ 31 (1000 ಜನನಕ್ಕೆ) ಇದೆ. ತಾಯಂದಿರ ಮರಣ ಪ್ರಮಾಣ 131 (100000) ಇದೆ.

**ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ 10% ಮೀಸಲಾತಿ ವಜಾ ಮಾಡಿದ ಗುಜರಾತ್ ಹೈಕೋರ್ಟ್**

ಗುಜರಾತಿನ ಪಟೇಲ್ ಸಮುದಾಯ ಸೇರಿದಂತೆ ಇತರೆ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10% ರಷ್ಟು ಮೀಸಲಾತಿ ಕಲ್ಪಿಸಿದ್ದ ಗುಜರಾತ್ ಸರ್ಕಾರದ ಆದೇಶವನ್ನು ಗುಜರಾತ್ ಹೈಕೋರ್ಟ್ ವಜಾಮಾಡಿದೆ. ಆ ಮೂಲಕ ಉದ್ಯೋಗ ಹಾಗೂ ಶಿಕ್ಷಣಕ್ಕಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೀಸಲಾತಿಯಡಿ ಶೇ. 10 ರಷ್ಟು ಕೋಟಾ ಕಲ್ಪಿಸಿ ಗುಜರಾತ್ ರಾಜ್ಯ ಸರಕಾರ ಮೇ 1ರಂದು ಹೊರಡಿಸಿದ್ದ ಸುಗ್ರೀವಾಜ್ಞೆ ಅಸಿಂಧೂ ಎಂದು ಕೋರ್ಟ್ ತೀರ್ಪು ನೀಡಿದೆ.

- ರಾಜ್ಯದ ಒಟ್ಟು ಮೀಸಲಾತಿ ಸುಪ್ರೀಂಕೋರ್ಟ್ ನಿಗದಿಪಡಿಸಿರುವ ಶೇ 50% ಮೀಸಲಾತಿ ಮಿತಿ ಮೀರಿರುವುದರಿಂದ ಅಸಾಂವಿಧಾನಿಕವಾಗಿದೆ.
- ವೈಜ್ಞಾನಿಕ ಅಂಕಿ ಅಂಶಗಳ ಕುರಿತು ಸೂಕ್ತ ಅಧ್ಯಯನ ನಡೆಸದೆ ಸರಕಾರ ತೀರ್ಮಾನ ಕೈಗೊಂಡಿರುವುದು ಸರಿಯಲ್ಲ ಎಂದು ಕೋರ್ಟ್ ಹೇಳಿದೆ

www.karunaduexams.com

**ಹಿನ್ನಲೆ:**

- ಮೇ 2016 ರಲ್ಲಿ ಗುಜರಾತ್ ಸರ್ಕಾರ ಉದ್ಯೋಗ ಹಾಗೂ ಶಿಕ್ಷಣಕ್ಕಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೀಸಲಾತಿಯಡಿ ಶೇ. 10 ರಷ್ಟು ಕೋಟಾ ಕಲ್ಪಿಸಿ, 2016-17 ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ಬರುವುದಾಗಿ ಹೇಳಿತ್ತು. ಆದರೆ ಸರ್ಕಾರದ ಆದೇಶವನ್ನು ಪ್ರಶ್ನಿಸಿ ವಿರುದ್ಧ ಹೈಕೋರ್ಟ್ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

**ಜಲ ಸಂಪನ್ಮೂಲ ಮಾಹಿತಿ ವ್ಯವಸ್ಥೆ ಆರಂಭಿಸಿದ ತೆಲಂಗಣ**

ರಾಜ್ಯದ ಸಮಗ್ರ ಜಲ ಸಂಪನ್ಮೂಲದ ಮಾಹಿತಿಯನ್ನು ಕಲೆ ಹಾಕುವ ಸಲುವಾಗಿ ತೆಲಂಗಣ ಸರ್ಕಾರ ಮಹತ್ವದ ಜಲ ಸಂಪನ್ಮೂಲ ಮಾಹಿತಿ ವ್ಯವಸ್ಥೆಯನ್ನು (Water Resource Information System) ಆರಂಭಿಸಿದೆ. ಈ ಸಂಬಂಧ ತೆಲಂಗಣ ನೀರಾವರಿ ಇಲಾಖೆ ಮತ್ತು ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಒಡಂಬಡಿಕೆಗೆ ಸಹಿಹಾಕಿವೆ. ಒಡಂಬಡಿಕೆ ಅನ್ವಯ ಇಸ್ರೋದ ರಾಷ್ಟ್ರೀಯ ದೂರಸಂವೇದಿ ಕೇಂದ್ರವೂ ಈ ವ್ಯವಸ್ಥೆಯನ್ನು ಸ್ಥಾಪಿಸಲಿದ್ದು, ಉಪಗ್ರಹದ ಮೂಲಕ ಮಾಹಿತಿಗ ಹಂಚಲಿದೆ.

- ಈ ವ್ಯವಸ್ಥೆಯ ಮೂಲಕ ಕೆರೆ ಮತ್ತು ಜಲಾಶಯಗಳಲ್ಲಿ ಶೇಖರಣೆಯಾಗಿರುವ ನೀರಿನ ಮಟ್ಟವನ್ನು ಮೌಲ್ಯಮಾಪನ ಮಾಡುವ ಮೂಲಕ ಜಲ ಸಂಪನ್ಮೂಲದ ನಿಖರ ಮಾಹಿತಿಯನ್ನು ಒದಗಿಸಲಿದೆ.
- ವ್ಯವಸ್ಥೆಯಡಿ ಆಕಾಶದಿಂದ ರಾಜ್ಯದ ಜಲ ಮೂಲಗಳ ಮೇಲೆ ನಿಗಾ ಇಡಲಾಗುತ್ತದೆ. ಜೊತೆಗೆ, ಇಸ್ರೋ ಎಲ್ಲಾ ಜಲಾಶಯಗಳಲ್ಲಿರುವ ನೀರಿನ ಮಾಹಿತಿಯನ್ನು ಪ್ರತಿ ಹದಿನೈದು ದಿನಕ್ಕೊಮ್ಮೆ ಉಪಗ್ರಹದ ಮೂಲಕ ಚಿತ್ರಿಸಿ ಒದಗಿಸಲಿದೆ.
- ಈ ವ್ಯವಸ್ಥೆಯೂ ರಾಜ್ಯದಲ್ಲಿ ಹೊಸ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಹಾಯವಾಗಲಿದೆ. ಅಲ್ಲದೇ ಇತರೆ ರಾಜ್ಯಗಳು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಅನುಕೂಲವಾಗಲಿದೆ.

**ತೆಲಂಗಣದಲ್ಲಿ "ಮಿಷನ್ ಭಗೀರಥ"ಗೆ ಚಾಲನೆ ನೀಡಿದ ಪ್ರಧಾನಿ ಮೋದಿ**

ಪ್ರತಿಯೊಬ್ಬರಿಗೂ ಶುದ್ದ ಕುಡಿಯುವ ನೀರನ್ನು ಪೂರೈಸುವ ಉದ್ದೇಶ ಹೊಂದಿರುವ ತೆಲಂಗಣ ರಾಜ್ಯದ ಮಹತ್ವಕಾಂಕ್ಷಿ ಯೋಜನೆ "ಮಿಷನ್ ಭಗೀರಥ"ಗೆ ಪ್ರಧಾನಿ ಮೋದಿ ಅವರು ಚಾಲನೆ ನೀಡಿದರು. ತೆಲಂಗಣ ಮುಖ್ಯಮಂತ್ರಿ ಚಂದ್ರಶೇಖರ್ ಅವರ ಕನಸಿನ ಕೂಸು ಎಂದೇ ಬಿಂಬಿತವಾಗಿರುವ ಈ ಯೋಜನೆಗೆ ತೆಲಂಗಣದ ಮೇಡಕ್ ಜಿಲ್ಲೆಯ ಗಜ್ವೆಲ್ ಬಳಿ ಚಾಲನೆ ನೀಡಲಾಯಿತು.

- ಮಿಷನ್ ಭಗೀರಥ ಯೋಜನೆಯು ಜಲ ಸಂಪರ್ಕ ಕಲ್ಪಿಸುವ ಯೋಜನೆಯಾಗಿದ್ದು, ರಾಜ್ಯದ ಪ್ರತಿ ಕುಟುಂಬಕ್ಕೂ ಶುದ್ದ ಕುಡಿಯುವ ನೀರನ್ನು ಪೂರೈಸುವ ಗುರಿಯೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.
- ಯೋಜನೆಯಡಿ ಪ್ರತಿ ವ್ಯಕ್ತಿಗೆ 100 ಲೀಟರ್ ಶುದ್ಧ ಕುಡಿಯುವ ನೀರನ್ನು ಹಾಗೂ ನಗರ ಪ್ರದೇಶದಲ್ಲಿ ಪ್ರತಿ ವ್ಯಕ್ತಿಗೆ 150 ಲೀಟರ್ ಶುದ್ದ ಕುಡಿಯುವ ನೀರನ್ನು ಒದಗಿಸಲಾಗುವುದು.
- ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿರುವ ಸುಮಾರು 25000 ವಾಸಸ್ಥಳಗಳಿಗೆ ಮತ್ತು 67 ನಗರ ಭಾಗದ ವಾಸಸ್ಥಳಗಳಿಗೆ ಶುದ್ದ ಕುಡಿಯುವ ನೀರನ್ನು ಪೂರೈಸಲಾಗುವುದು.



www.karunaduexams.com

- ಇದರ ಜೊತೆಗೆ ಕುಡಿಯುವ ನೀರಿನ ಸಮಸ್ಯೆಗಳಿಗೆ ಸುಸ್ಥಿರ ಮತ್ತು ಶಾಶ್ವತ ಪರಿಹಾರ ಒದಗಿಸುವ ಸಲುವಾಗಿ 45000ಕ್ಕೂ ಹೆಚ್ಚು ಸಂಪ್ರದಾಯಿಕ ನೀರಿನ ಮೂಲಗಳಾದ ಕೆರೆ, ಕುಂಟೆಗಳನ್ನು ಪುನರ್ಜೀವನಗೊಳಿಸಲಾಗುವುದು.

**ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಹೊಸ ಜಲ ನಿಗಮ ಸ್ಥಾಪನೆಗೆ ರಾಜ್ಯ ಸರ್ಕಾರ ಒಪ್ಪಿಗೆ**

ರಾಜ್ಯ ಸರ್ಕಾರದ ಪ್ರಮುಖ ನೀರಾವರಿ ಯೋಜನೆಗಳಾದ ಭದ್ರಾ ಮೇಲ್ದಂಡೆ ಮತ್ತು ಎತ್ತಿನ ಹೊಳೆ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಲು ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಹೊಸ ಜಲ ನಿಗಮ ಸ್ಥಾಪಿಸಲು ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಹೊಸ ನಿಗಮದ ನಿರ್ದೇಶಕ ಮಂಡಳಿಗೆ 15 ಸದಸ್ಯರನ್ನು ನೇಮಿಸಲಾಗುವುದು. ಹೊಸ ನಿಗಮಕ್ಕೆ ವಿಶೇಷಾಧಿಕಾರಿಯಾಗಿ ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಆರ್.ರುದ್ರಯ್ಯ ಅವರನ್ನು ಈಗಾಗಲೇ ನೇಮಿಸಲಾಗಿದ್ದು, ಅವರು ಪೂರ್ವಭಾವಿ ಕೆಲಸ ಆರಂಭಿಸಿದ್ದಾರೆ.

**ಭದ್ರಾ ಮೇಲ್ದಂಡೆ ಯೋಜನೆ**

- ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ 2,25,515 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಜಿಲ್ಲೆಗಳಲ್ಲಿನ 367 ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಲು, ವಾಣಿ ವಿಲಾಸ ಸಾಗರಕ್ಕೆ ಸುಮಾರು 2 ಟಿಎಂಸಿ ಅಡಿ ನೀರು ಪೂರೈಸಲು ಸಾಧ್ಯವಿದೆ. ಈ ಯೋಜನೆಗೆ ರೂ 12,340 ಕೋಟಿ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ರಾಜ್ಯ ಸರ್ಕಾರ ನೀಡಿದೆ.

**ಎತ್ತಿನಹೊಳೆ ಯೋಜನೆ:**

- ರೂ 12,912.36 ಕೋಟಿಯ ಈ ಯೋಜನೆಯ ಮೂಲಕ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು , ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಆಯ್ದ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶ ಹೊಂದಿದೆ.

**ಚಡಚಣ ಏತ ನೀರಾವರಿಗೆ ಒಪ್ಪಿಗೆ**

- ರೂ 413.20 ಕೋಟಿ ಅಂದಾಜು ಮೊತ್ತದ ಚಡಚಣ ಏತ ನೀರಾವರಿ ಯೋಜನೆಯು ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಚಡಚಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ನೀರಾವರಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಜಾರಿಗೊಳಿಸಲಾಗುತ್ತಿದೆ. ಚಡಚಣ ಸುತ್ತಮುತ್ತಲಿನ ಗ್ರಾಮಗಳಾದ ಬರಡೋಲ, ಗೋಡಿಹಾಳ, ಹಾವಿನಹಾಳ, ಹಾಲಹಳ್ಳಿ, ಶಿರಡೋಣ, ರೇವತಗಾಂವ್, ನಿವರಗಿ ಹಾಗೂ ಇತರ ಗ್ರಾಮಗಳು ಬರಪೀಡಿತವಾಗಿದ್ದು, ಕುಡಿಯುವ ನೀರಿನ ಅಭಾವ ತೀವ್ರವಾಗಿದೆ. ಈ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಭೀಮಾ ನದಿಗೆ ಅಡ್ಡಲಾಗಿ ಈಗಾಗಲೇ ನಿರ್ಮಾಣ ಮಾಡಲಾಗುತ್ತಿರುವ ಸಂಖ್ ಬ್ಯಾರೇಜ್ನ ಮೇಲ್ಭಾಗದಲ್ಲಿ ಚಡಚಣ ಏತ ನೀರಾವರಿ ಯೋಜನೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ ಭೀಮಾ ನದಿಯಿಂದ 1.72 ಟಿಎಂಸಿ ಅಡಿ ನೀರನ್ನು ಪಡೆಯಲಾಗುವುದು. 9,215 ಹೆಕ್ಟೇರ್ ಪ್ರದೇಶದಲ್ಲಿ ಕೃಷಿಗೆ, ಜನ, ಜಾನುವಾರುಗಳ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

www.karunaduexams.com

**ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ರಾಜ್ಯ ಸರ್ಕಾರ ಒಪ್ಪಿಗೆ**

ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ರಚಿಸಲು ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಲು ಸಮ್ಮತಿ ಸೂಚಿಸಲಾಗಿದೆ. ಮೊದಲ ಹಂತದಲ್ಲಿ ಪ್ರಾಧಿಕಾರ ಸ್ಥಾಪನೆ ಮಾಡಲು 5 ಕೋಟಿ ರೂ.ಗಳ ಅನುದಾನ ನೀಡಲಾಗುತ್ತದೆ.

**ಹಿನ್ನಲೆ**:

- 'ಕೆಂಪೇಗೌಡರ ಹೆಸರು ಶಾಶ್ವತವಾಗಿ ಉಳಿಯಲು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿ, ಸಂಶೋಧನೆ ಮಾಡಿಸಬೇಕೆಂಬ ಕೂಗು ಬಹುದಿನಗಳಿಂದ ಇತ್ತು. ಈ ಹಿನ್ನಲೆಯಲ್ಲಿ ಪ್ರಾಧಿಕಾರವನ್ನು ರಚಿಸಲು ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ.

**ಪ್ರಾಧಿಕಾರದ ಬಗ್ಗೆ:**

- ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷರಾಗಿದ್ದು, ಪ್ರಾದೇಶಿಕ ಆಯುಕ್ತರು ನೋಡಲ್ ಅಧಿಕಾರಿಯಾಗಿರುತ್ತಾರೆ.
- ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಂದಾಯ ಸಚಿವರು ಹಾಗೂ 25 ಶಾಸಕರು ಸದಸ್ಯರಾಗಿರುವ ಪ್ರಾಧಿಕಾರ ರಚಿಸಬೇಕು ಎಂಬ ಬೇಡಿಕೆ ಇತ್ತು. ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದ ಬಳಿಕ ಸದಸ್ಯರ ಸಂಖ್ಯೆಯನ್ನು 15ಕ್ಕೆ ಮಿತಿಗೊಳಿಸಲು ತೀರ್ಮಾನಿಸಲಾಗಿದೆ.
- ನಾಲ್ಕು ಜಿಲ್ಲೆಗಳ ಜಿಲ್ಲಾಧಿಕಾರಿಗಳು, ತಹಸೀಲ್ದಾರ್‌ಗಳು, ಮತ್ತು ಸ್ಪೆಷಲ್ ಕಮಿಷನರ್‌ಗಳು ಪ್ರಾಧಿಕಾರಕ್ಕೆ ಸದಸ್ಯರಾಗಿರುತ್ತಾರೆ.

**ಇತರೆ ನಿರ್ಣಯಗಳು**:

ನಾಡಪ್ರಭು ಕೆಂಪೇಗೌಡರ ಹೆಸರನ್ನು ಚಿರಾಯುವಾಗಿಸಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತರಲು ನಿರ್ಧರಿಸಿದೆ. ಮಾಗಡಿಯ ಕೆಂಪಾಪುರದಲ್ಲಿ ಕೆಂಪೇಗೌಡರ ಸ್ಮಾರಕ ನಿರ್ಮಾಣ. 50 ಎಕರೆ ಪ್ರದೇಶ ಸಮಗ್ರ ಅಭಿವೃದ್ಧಿ. ಬೆಂಗಳೂರು ವಿಶ್ವವಿದ್ಯಾನಿಲಯದ ಮೂರು ಎಕರೆ ಪ್ರದೇಶದಲ್ಲಿ ಕೆಂಪೇಗೌಡ ಸಂಶೋಧನಾ ಕೇಂದ್ರ ಸ್ಥಾಪನೆ. ಕೆಂಪೇಗೌಡ ಬಡಾವಣೆಯ 11 ಎಕರೆ ಪ್ರದೇಶದಲ್ಲಿ ಕೆಂಪೇಗೌಡ ಸಾಂಸ್ಕೃತಿಕ ಭವನ ನಿರ್ಮಾಣ. ಮುಂದಿನ ಶೈಕ್ಷಣಿಕ ವರ್ಷದಿಂದ ಪಠ್ಯ ಪುಸ್ತಕದಲ್ಲಿ 5 ಪುಟಗಳ ಕೆಂಪೇಗೌಡರ ಜೀವನ ಚರಿತ್ರೆ ಅಳವಡಿಕೆಯಾಗಲಿದೆ.

**ಶೇಖ್ ಮಸ್ತಾನ್ ಸಮಿತಿ**:

- ಕೆಂಪೇಗೌಡರ ಪುಣ್ಯಭೂಮಿಯನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕೆಂಬ ಬಗ್ಗೆ ಬೆಂಗಳೂರು ವಿವಿ ಕೆಂಪೇಗೌಡ ಅಧ್ಯಯನ ಕೇಂದ್ರದ ಮುಖ್ಯಸ್ಥ ಶೇಖ್ ಮಸ್ತಾನ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯ ಶಿಫಾರಸ್ಸನ್ನು ಚರ್ಚಿಸಲಾಗಿ ರಾಜ್ಯ ಸರ್ಕಾರ ಮೇಲಿನ ನಿರ್ಧಾರಗಳನ್ನು ಕೈಗೊಂಡಿದೆ.

**ಬಿಪಿಎಲ್ ಕಾರ್ಡ್ ನಿಯಮಗಳನ್ನು ಸಡಿಲಗೊಳಿಸದ ರಾಜ್ಯ ಸರ್ಕಾರ**

ರಾಜ್ಯದಲ್ಲಿ ಅಕ್ರಮವಾಗಿ ರೇಷನ್ ಕಾರ್ಡ್ ಹೊಂದುವುದನ್ನು ತಡೆಯುವ ಸಲುವಾಗಿ ಮತ್ತು ಅರ್ಹರು ಬಿಪಿಎಲ್ ರೇಷನ್ ಕಾರ್ಡ್ ಸಿಗದೇ ವಂಚಿತರಾಗುವುದನ್ನು ತಪ್ಪಿಸಲು ನಿಯಮಾವಳಿ ಸರಳೀಕರಣ ಮಾಡಲು ಸರ್ಕಾರ ತೀರ್ಮಾನಿಸಿದೆ. ಅದರಂತೆ ಸದ್ಯ ಬಿಪಿಎಲ್ ಕಾರ್ಡ್ ಹೊಂದಲು ಅರ್ಹರಲ್ಲ ಎಂಬ ಬಗ್ಗೆ ಇದ್ದ 14 ಮಾನದಂಡಗಳ ಪೈಕಿ ಅವೈಜ್ಞಾನಿಕ ಅಂಶಗಳನ್ನು ತೆಗೆದು ಕೇವಲ

ನಾಲ್ಕು ಮಾನದಂಡಗಳನ್ನು ಮಾತ್ರ ನಿಗದಿಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

**ಬಿಪಿಎಲ್ ಕಾರ್ಡ್ ಯಾರಿಗಿಲ್ಲ:**

- ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳ ನೌಕರರು, ಆದಾಯ ತೆರಿಗೆ, ಸೇವಾ ತೆರಿಗೆ, ವಾಣಿಜ್ಯ ತೆರಿಗೆ ಪಾವತಿಸುವವರು.
- ಗ್ರಾಮೀಣ ಪ್ರದೇಶದಲ್ಲಿ ಮೂರು ಹೆಕ್ಟೇರ್ ಒಣ ಅಥವಾ ಕೃಷಿ ಭೂಮಿ ಹೊಂದಿರುವವರು. ಮಹಾನಗರ ಪಾಲಿಕೆ, ನಗರ ಪಾಲಿಕೆಗಳಲ್ಲಿ 10 ಚದರ ಮನೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳಲ್ಲಿ 12 ಚದರ ಮನೆ ಹೊಂದಿರುವವರು.
- ಸ್ವಂತಕ್ಕಾಗಿ ನಾಲ್ಕು ಚಕ್ರ ಅಥವಾ ಅದಕ್ಕಿಂತ ಹೆಚ್ಚು ಚಕ್ರಗಳ ವಾಹನ ಹೊಂದಿರುವವರು.
- ಪ್ರತಿ ತಿಂಗಳು 150 ಯೂನಿಟ್ ಹಾಗೂ ಅದರ ಮೇಲ್ಪಟ್ಟು ವಿದ್ಯುತ್ ಬಳಕೆ ಮಾಡುವವರು.

**ರೇಷನ್ ಕಾರ್ಡ್ ಗೆ ಹೊಸ ಹೆಸರು:**

ಪ್ರಸ್ತುತ ಚಾಲ್ತಿಯಲ್ಲಿರುವ ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್ಗಳ ಬದಲಿಗೆ ಆದ್ಯತೆ ಮತ್ತು ಆದ್ಯತೆಯೇತರ ವಲಯ ಎಂಬ ಹೊಸ ವ್ಯವಸ್ಥೆ ಜಾರಿಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಆಹಾರ ಭದ್ರತೆ ಕಾಯ್ದೆ ಹಿನ್ನೆಲೆಯಲ್ಲಿ ಬಿಪಿಎಲ್, ಎಪಿಎಲ್ ನಂತಹ ಮತ್ತಿತರ ವಿಭಾಗಗಳನ್ನು ತೆಗೆದುಹಾಕಿ, ಆದ್ಯತಾ ವಲಯ ಎಂಬ ಒಂದೇ ವ್ಯವಸ್ಥೆ ಅಡಿ ತರಲು ಉದ್ದೇಶಿಸಿದೆ. ಗ್ರಾಹಕರಿಗೆ ಇನ್ನು ಮುಂದೆ ನೀಡಲಾಗುವ ಪಡಿತರ ಚೀಟಿಗಳ ಮೇಲೆಯೇ ಇದನ್ನು ಅಧಿಕೃತವಾಗಿ ಮುದ್ರಣ ಮಾಡಿ ಸರ್ಕಾರ ನೀಡಲಿದೆ.

**<u>ಜೋಗ ಜಲಪಾತವನ್ನು ಸರ್ವಋತು ಜಲಪಾತವನ್ನಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಒಪ್ಪಿಗೆ</u>**

ರಾಜ್ಯದ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತವನ್ನು ಸರ್ವಋತು ಜಲಪಾತವನ್ನಾಗಿಸಿ ವರ್ಷಪೂರ್ತಿ ಪ್ರವಾಸಿಗರ ಮನತಣಿಸಲು ಮಹತ್ವದ ನಿರ್ಣಯವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ.ಜಯಚಂದ್ರ ವಿಷಯವನ್ನು ಖಚಿತಪಡಿಸಿದ್ದಾರೆ.

**ಏನಿದು ಸರ್ವಋತು ಜಲಪಾತ ಯೋಜನೆ:**

ಜೋಗ ಜಲಪಾತ ಪ್ರದೇಶದಲ್ಲಿ ನೀರಿನ ಪುನರ್ ಬಳಕೆ ಮಾಡಿ ಸರ್ವಋತು ಜಲಪಾತ ನಿರ್ಮಿಸುವುದು ಯೋಜನೆಯ ಉದ್ದೇಶ. ಸದ್ಯ ಜೋಗ ಜಲಪಾತ ಮಳೆಗಾಲದಲ್ಲಿ ಮೈದುಂಬಿ ಹರಿಯುವ ಮೂಲಕ ರಮಣೀಯ ದೃಶ್ಯ ಸೃಷ್ಟಿಸಿ ಪ್ರಮುಖ ಪ್ರವಾಸಿ ತಾಣವಾಗಿದೆ.  ಈ ಯೋಜನೆಯ ಪರಿಕಲ್ಪನೆ 9 ವರ್ಷದ ಹಳೆಯದಾಗಿದ್ದು, ರಾಜ್ಯ ಸರ್ಕಾರ ಈಗ ಒಪ್ಪಿಗೆ ಸೂಚಿಸಿದೆ.

**ಯೋಜನೆಯ ಅನುಷ್ಠಾನ**:

ಈ ಯೋಜನೆಯನ್ನು ಅಬುದಾಬಿಯ ಬಿಆರ್ಎಸ್ ವೆಂಚರ್ಸ್ ಸಂಸ್ಥೆಗೆ ವಹಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಅನಿವಾಸಿ ಭಾರತೀಯ ಬಿ.ಆರ್.ಶೆಟ್ಟಿ ಒಡೆತನದ ಸಂಸ್ಥೆಯ 450 ಕೋಟಿ ರೂ.ಗಳನ್ನು ಈ ಯೋಜನೆಗೆ ವಿನಿಯೋಗಿಸಲು ಮುಂದೆ ಬಂದಿದೆ. ಯೋಜನೆ ಅನುಷ್ಠಾನಕ್ಕೆ ಬಂದ ನಂತರ ಜೋಗ ಜಲಪಾತ ಅಭಿವೃದ್ಧಿ ಪ್ರಾಧಿಕಾರವು ಜಲಪಾತ ವೀಕ್ಷಣೆಗೆ ಪ್ರವಾಸಿಗರಿಗೆ ಕನಿಷ್ಠ ದರ ನಿಗದಿಗೊಳಿಸಲಿದೆ. ಕಳೆದ ವರ್ಷ ಸುಮಾರು 8 ಲಕ್ಷ ಪ್ರವಾಸಿಗರು ಜೋಗಕ್ಕೆ ಭೇಟಿ ನೀಡಿದ್ದಾರೆ. ಸರ್ವಋತು ಜಲಪಾತ ಅನುಷ್ಠಾನಗೊಂಡರೆ ಪ್ರವಾಸಿಗರ ಸಂಖ್ಯೆಯು ಹೆಚ್ಚಲಿದೆ.

www.karunaduexams.com

## ಮೂರು ನೀರಾವರಿ ಯೋಜನೆಗಳ ನಿರ್ಮಾಣಕ್ಕೆ ತೆಲಂಗಣ, ಮಹಾರಾಷ್ಟ್ರ ಒಪ್ಪಂದ

ಗೋದಾವರಿ ಮತ್ತು ಅದರ ಉಪನದಿಗಳ ಮೇಲೆ ಮೂರು ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಮಹಾರಾಷ್ಟ್ರ ಮತ್ತು ತೆಲಂಗಣ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದದ ಅನ್ವಯ ಗೋದಾವರಿ ಮತ್ತು ಅದರ ಉಪನದಿಗಳಾದ ಪ್ರಣಹಿತ ಮತ್ತು ಪೆನ್ ಗಂಗಾ ನದಿಗಳ ಮೇಲೆ ಬ್ಯಾರೇಜ್ ನಿರ್ಮಿಸಲಾಗುವುದು. ಮಹಾರಾಷ್ಟ್ರ ಮುಖ್ಯಮಂತ್ರಿ ದೇವೆಂದ್ರ ಫಡ್ನವೀಸ್ ಮತ್ತು ತೆಲಂಗಣ ಮುಖ್ಯಮಂತ್ರಿ ಸಿ.ಚಂದ್ರಶೇಖರ್ ಸಮ್ಮುಖದಲ್ಲಿ ಮುಂಬೈನಲ್ಲಿ ಒಪ್ಪಂದಕ್ಕೆ ಸಹಿಹಾಕಲಾಯಿತು. ಇದರಿಂದ ಉಭಯ ರಾಜ್ಯಗಳು ಗೋದಾವರಿ ಮತ್ತು ಅದರ ಉಪನದಿಗಳ ಮೇಲೆ ತುಮ್ಮಿದಿ ಹಟ್ಟಿ (Tummidi Hatti), ಮೆದಿಗಡ್ಡ (Medigadda) ಮತ್ತು ಚಣಕ-ಕೊರಟ (Chanaka-Korata) ಬ್ಯಾರೇಜ್ ಗಳನ್ನು ನಿರ್ಮಿಸಲಿವೆ.

- **ಮೆದಿಗಡ್ಡ ಬ್ಯಾರೇಜ್**: ಇದರಡಿ ತೆಲಂಗಣ ಸರ್ಕಾರ 100ಮೀ ಎತ್ತರ ಮತ್ತು 16 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಬ್ಯಾರೇಜ್ ಅನ್ನು ನಿರ್ಮಿಸಲಿದೆ. ಈ ಬ್ಯಾರೇಜ್ ನಿಂದ ರಾಜ್ಯದ ಆರು ಜಿಲ್ಲೆಗಳಲ್ಲಿ 18.19 ಲಕ್ಷ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.
- **ತುಮ್ಮಿದಿ ಹಟ್ಟಿ ಬ್ಯಾರೇಜ್:** ಪ್ರಣಹಿತ ನದಿ ಮೇಲೆ ಈ ಬ್ಯಾರೇಜ್ ನಿರ್ಮಿಸಲಾಗುವುದು. ಇದು ಸುಮಾರು 148 ಮೀ ಎತ್ತರವಿರಲಿದ್ದು, 1.8 ಟಿಎಂಸಿ ನೀರನ್ನು ಸಂಗ್ರಹಿಸಲಿದೆ. ಈ ಯೋಜನೆಯಿಂದ ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಅದಿಲಬಾದ್ ಜಿಲ್ಲೆಯ 2 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಸಿಗಲಿದೆ.
- **ಚಣಕ-ಕೊರಟ ಬ್ಯಾರೇಜ್**: 213ಮೀ ಎತ್ತರ ಮತ್ತು 0.85 ಟಿಎಂಸಿ ಸಾಮರ್ಥ್ಯದ ಈ ಬ್ಯಾರೇಜ್ ಅನ್ನು ಪೆನ್ ಗಂಗಾ ನದಿ ಮೇಲೆ ನಿರ್ಮಿಸಲಾಗುವುದು. ಇದರಿಂದ ಮಹಾರಾಷ್ಟ್ರ ಮತ್ತು ತೆಲಂಗಣದ ಅದಿಲಬಾದ್ ಭಾಗಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗುವುದು.

## ಅಪರಾಧಿಗಳ ಡಿಎನ್ಎ ಪ್ರೊಫೈಲಿಂಗ್ ಜಾರಿಗೆ ತಂದ ಮೊದಲ ರಾಜ್ಯ ಆಂಧ್ರಪ್ರದೇಶ

ಅಪರಾಧಿಗಳ ಡಿಎನ್ಎ (Deoxyribonucleac acid) ಮಾಹಿತಿಯನ್ನು ಕಲೆಹಾಕುವ ಡಿಎನ್ಎ ಇಂಡೆಕ್ಸ್ ಸಿಸ್ಟಮ್ ಅನ್ನು ಆಂಧ್ರಪ್ರದೇಶ ಜಾರಿಗೆ ತಂದಿಗೆ. ಆ ಮೂಲಕ ಈ ವಿನೂತನ ವ್ಯವಸ್ಥೆಯನ್ನು ಜಾರಿಗೆ ತಂದ ದೇಶದ ಮೊದಲ ರಾಷ್ಟ್ರವೆನಿಸಿದೆ. ಇದಕ್ಕಾಗಿ ಅಮೆರಿಕಾದ ಇಂಟೆಜೆನ್ ಎಕ್ಸ್ (InetegenX) ಅಭಿವೃದ್ದಿಪಡಿಸಿರುವ RapidHit ಡಿಎನ್ಎ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗಿದೆ.

- ಡಿಎನ್ಎ ಸೂಚ್ಯಂಕ ವ್ಯವಸ್ಥೆಯು ಜೊಲ್ಲು ರಸ, ರಕ್ತದ ಕಲೆ ಮತ್ತು ಕೆನ್ನೆಯ ಸ್ವೇದ ಗ್ರಂಥಿಗಳ ಮಾದರಿ ಮೂಲಕ ಡಿಎನ್ಎ ಮಾಹಿತಿಯನ್ನು ಕಲೆಹಾಕಲಿದೆ.
- ಪ್ರಸ್ತುತ ಬಳಕೆಯಲ್ಲಿರುವ ತಂತ್ರಜ್ಞಾನದಲ್ಲಿ ಡಿಎನ್ಎ ಮಾಹಿತಿ ತಿಳಿಯಲು ಎರಡರಿಂದ ಮೂರು ದಿನಗಳ ಕಾಲಾವಕಾಶ ಬೇಕಿದೆ. ಆದರೆ RapidHit ಡಿಎನ್ಎ ವ್ಯವಸ್ಥೆಯಡಿ ಕೇವಲ 90 ರಿಂದ 120 ನಿಮಿಷಗಳೊಳಗೆ ಮಾಹಿತಿ ಕಲೆಹಾಕಬಹುದಾಗಿದೆ.

www.karunaduexams.com

- ಅಪರಾಧಿಗಳ ಡಿಎನ್‌ಎಯ ಬೃಹತ್ ಡಾಟಾಬೇಸ್ ರಚಿಸಬಹುದಾದ ಕಾರಣ ಅಪರಾಧ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಲಿವೆ ಮತ್ತು ಶಂಕಿತ ಅಪರಾಧಿಗಳು ನಿಜವಾಗಿಯು ಅಪರಾಧಿಗಳೇ ಅಥವಾ ನಿರಪರಾಧಿಗಳೇ ಎಂಬುದನ್ನು ತಿಳಿಯಬಹುದಾಗಿದೆ.
- ಮತ್ತೆ ಮತ್ತೆ ಅಪರಾಧ ಎಸಗುವ ಅಪರಾಧಿಗಳನ್ನು ಈ ಡಿಎನ್‌ಎ ಡಾಟಾಬೇಸ್ ನಿಂದ ಸುಲಭವಾಗಿ ಮತ್ತು ವೇಗವಾಗಿ ಪತ್ತೆಹಚ್ಚಬಹುದಾಗಿದೆ. ಆ ಮೂಲಕ ಅಪರಾಧಕ್ಕೆ ಕಡಿವಾಣ ಹಾಕಲು ಇದು ಮಹತ್ವದ ಪಾತ್ರವಹಿಸಲಿದೆ.
- ಅಷ್ಟೇ ಅಲ್ಲದೇ ಅಪರಾಧ ಪ್ರಕರಣಗಳಲ್ಲಿ ತಲೆಮರಿಸಿಕೊಂಡಿರುವವರನ್ನು ಸ್ಥಳದಲ್ಲೇ ಪತ್ತೆಹಚ್ಚಬಹುದಾಗಿದ್ದು, ಬೇದಿಸಲಾಗದೆ ಉಳಿದಿರುವ ಪ್ರಕರಣಗಳ ಸಂಖ್ಯೆ ಕಡಿಮೆಯಾಗಲಿದೆ.

**ಡಿಎನ್‌ಎ ಎಂದರೇನು**:

- ಡಿಎನ್‌ಎ ಒಂದು ಸುರುಳಿಯಾಕಾರದ ಒಂದು ತುಂಡಾಗಿದ್ದು ಅದರಲ್ಲಿ ಬಹಳ ವಂಶವಾಹಿಗಳನ್ನು, ನಿಯಂತ್ರಕ ಅಂಶಗಳು ಮತ್ತು ನ್ಯುಕ್ಲಿಯೊಸೈಡ್‌ನ ಸರಣಿಗಳನ್ನು ಹೊಂದಿದೆ. ಡಿಎನ್‌ಎ ಅಂಶವು ಪೋಷಕರಿಂದ ನೇರವಾಗಿ ಮಕ್ಕಳಿಗೆ ಬಂದಿರುವ ಕಾರಣ ಪ್ರತಿ ವ್ಯಕ್ತಿಯಲ್ಲಿ ನಿರ್ದಿಷ್ಟವಾದ ಅಂಶಗಳನ್ನು ಒಳಗೊಂಡಿರುತ್ತದೆ.

**ಡಿಎನ್‌ಎ ಪ್ರೋಫೈಲಿಂಗ್ ತಂತ್ರಜ್ಞಾನ**:

- ಡಿಎನ್‌ಎ ಫಿಂಗರ್ ಪ್ರಿಟಿಂಗ್ ಅಥವಾ ಡಿಎನ್‌ಎ ಪ್ರೋಫೈಲಿಂಗ್ ವಿಧಾನದಲ್ಲಿ ವ್ಯಕ್ತಿಯ ಡಿಎನ್‌ಎ ಜೋಡಿಯಲ್ಲಿ ನಿರ್ಧಿಷ್ಟ ಅಂಶಗಳನ್ನು ಪ್ರತ್ಯೇಕಿಸಲಾಗುವುದು. ಪ್ರಸ್ತುತ ಈ ವಿಧಾನವನ್ನು ವಿಶ್ವದಾದ್ಯಂತ ಪೊಲೀಸರು ಅಪರಾಧಿಗಳನ್ನು ಪತ್ತೆಹಚ್ಚಲು ಬಳಸುತಿದ್ದಾರೆ. ಅಪರಾಧ ನಡೆದ ಸ್ಥಳದಲ್ಲಿ ಸಣ್ಣ ಸುಳಿವು ಅಂದರೆ ರಕ್ತದ ಕಲೆ, ಚರ್ಮ, ಕೂದಲು ಸಿಕ್ಕರು ಸಾಕು ಅಪರಾಧಿಗಳನ್ನು ಪತ್ತೆಹಚ್ಚಬಹುದಾಗಿದೆ. ಆದ್ದರಿಂದ ಇದು ಅತ್ಯಂತ ಪರಿಣಾಮಕಾರಿ ಪರೀಕ್ಷೆ ಆಗಿದೆ.

## ಆಂತರಿಕ ಭದ್ರತಾ ಕಾನೂನು ಮಸೂದೆ ರಚಿಸಿದ ದೇಶದ ಮೊದಲ ರಾಜ್ಯ ಮಹಾರಾಷ್ಟ್ರ

ಮಹಾರಾಷ್ಟ್ರ ಸರ್ಕಾರ ಮಹಾರಾಷ್ಟ್ರ ಆಂತರಿಕ ಭದ್ರತಾ ರಕ್ಷಣೆ ಕಾಯಿದೆ (The Maharashtra Protection of Internal Security Act (MPISA), 2016)ಯ ಕರಡುಪ್ರತಿಯನ್ನು ಸಿದ್ದಪಡಿಸಿದ್ದು, ಸ್ವಂತ ಆಂತರಿಕ ಭದ್ರತೆ ಕಾಯಿದೆ ಜಾರಿಗೆತರಲಿರುವ ದೇಶದ ಮೊದಲ ರಾಜ್ಯವೆನಿಸಿದೆ. ಸದ್ಯ ಇದನ್ನು ಸಾರ್ವಜನಿಕರ ಸಲಹೆ ಮತ್ತು ಆಕ್ಷೇಪಣೆಗೆ ಇಡಲಾಗಿದ್ದು, ಆನಂತರ ವಿಧಾನ ಸಭೆ ಅಧಿವೇಶನದಲ್ಲಿ ಮಂಡಿಸಿ ಜಾರಿಗೆ ತರಲಿದೆ.

**ಮಸೂದೆಯಲ್ಲಿನ ಪ್ರಮುಖಾಂಶ**

- ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು, ಭಯೋತ್ಪಾದನೆ ಹತ್ತಿಕ್ಕುವುದು, ಜಾತಿ ಸಂಬಂಧಿತ ಗಲಭೆ ಮತ್ತು ಬಂಡಾಯ ನಿವಾರಣೆಗೆ ಮಸೂದೆಯಲ್ಲಿ ವಿಶೇಷ ಒತ್ತನ್ನು ನೀಡಲಾಗಿದೆ.
- **ಆಂತರಿಕ ಭದ್ರತೆ ವ್ಯಾಖ್ಯಾನ**: ಆಂತರಿಕ ಭದ್ರತೆ ಎಂದರೇನು ಎಂಬ ವ್ಯಾಖ್ಯಾನವನ್ನು ಮಸೂದೆಯಲ್ಲಿ ನೀಡಲಾಗಿದೆ. ಅದರಂತೆ ರಾಜ್ಯದ ಗಡಿ ಪ್ರದೇಶದೊಳಗೆ ಶಾಂತಿ ಸುವ್ಯವಸ್ಥೆಗೆ ಕುತ್ತು ತರಬಹುದಾದ ಯಾವುದೇ ಪ್ರಕರಣಗಳನ್ನು ಇದರಡಿ ವಿವರಸಿಲಾಗಿದೆ.

- **ವಿಶೇಷ ಭದ್ರತಾ ವಲಯ**: ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳ ಸಾಗಾಣಿಕೆ ಮತ್ತು ಅಕ್ರಮ ಹಣ ಸಾಗಾಣಿಕೆ ತಡೆಯುವ ಸಲುವಾಗಿ ವಿಶೇಷ ಭದ್ರತಾ ವಲಯವನ್ನು ಸ್ಥಾಪಿಸಲು ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ವಲಯಗಳು ವಿಶೇಷ ಪೊಲೀಸ್ ಪಡೆಯನ್ನು ಹೊಂದಿರಲಿವೆ.
- **ವಿಶೇಷ ಮೂಲಭೂತಸೌಕರ್ಯ ವಲಯ**: ಅಣು ವಿದ್ಯುತ್ ಘಟಕ, ಅಣೆಕಟ್ಟು, ಪ್ರಮುಖ ಯೋಜನೆಗಳು, ಕರಾವಳಿ ಪ್ರದೇಶಗಳನ್ನು ವಿಶೇಷ ಮೂಲಭೂತಸೌಕರ್ಯ ವಲಯದಡಿ ತರಲಾಗಿದ್ದು, ಹೆಚ್ಚಿನ ಭದ್ರತೆ ಒದಗಿಸಲಾಗುವುದು.
- **ಪೊಲೀಸ್ ಮುಖ್ಯಸ್ಥರಿಗೆ ವಿಶೇಷ ಅಧಿಕಾರ**: ಮಸೂದೆಯಲ್ಲಿ ಪೊಲೀಸ್ ಅಧಿಕಾರಿಗೆ ವಿಶೇಷ ಅಧಿಕಾರವನ್ನು ನೀಡಲಾಗಿದ್ದು, ಯಾವುದೇ ಶಂಕಸ್ಪಾದ ಉಪಕರಣ, ವಿಷಕಾರಿ ರಾಸಾಯನಿಕ, ಜೈವಿಕ ಅಥವಾ ವಿಕಿರಣ ಪದಾರ್ಥಗಳ ಉತ್ಪಾದನೆ ಮತ್ತು ಬಳಕೆ ಮೇಲೆ ಸಂಪೂರ್ಣ ನಿಷೇಧ ಹೇರುವ ಅಧಿಕಾರವನ್ನು ನೀಡಲಾಗಿದೆ.
- **ಶಿಕ್ಷೆ**: ಆಂತರಿಕ ಭದ್ರತೆಗೆ ದಕ್ಕೆ ತರುವಂತಹ ಕೃತ್ಯಗಳಲ್ಲಿ ಭಾಗಿಯಾದವರಿಗೆ ಕಾಯಿದೆಯಡಿ ಮೂರು ವರ್ಷ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ.

**ಮೊದಲ ಹಂತದ ಸೌನಿ (SAUNI) ನೀರಾವರಿ ಯೋಜನೆಗೆ ಪ್ರಧಾನಿ ಮೋದಿ ಚಾಲನೆ**

ಸೌರಾಷ್ಟ್ರ ನರ್ಮದಾ ಅವತರಣ್ ಇರಿಗೇಷನ್ (ಸೌನಿ) ಯೋಜನೆಯ ಮೊದಲ ಹಂತಕ್ಕೆ ಪ್ರಧಾನಿ ಮೋದಿ ಅವರು ಗುಜರಾತ್ ನ ಜಾಮ್ ನಗರದ ಸನೊದರ ಬಳಿ ಚಾಲನೆ ನೀಡಿದರು. ಸೌನಿ ಯೋಜನೆ ಗುಜರಾತ್ನ ಬರಪೀಡಿತ ಪ್ರದೇಶವಾದ ಸೌರಾಷ್ಟ್ರ ಭಾಗದ ನೀರಿನ ಸಮಸ್ಯೆಗಳನ್ನು ಬಗೆಹರಿಸುವ ವಿವಿಧೋದ್ದೇಶ ಯೋಜನೆಯಾಗಿದೆ.

**ಸೌನಿ ನೀರಾವರಿ ಯೋಜನೆ ಬಗ್ಗೆ**:

- ಸರ್ದಾರ ಸರೋವರ ಅಣೆಕಟ್ಟೆನಿಂದ ಹೆಚ್ಚಿನ ನೀರನ್ನು ಸೌರಾಷ್ಟ್ರ ಭಾಗದ 115 ಅಣೆಕಟ್ಟುಗಳಿಗೆ ಹರಿಸಿ ತುಂಬಿಸುವ ಯೋಜನೆಯಾಗಿದೆ.
- ಮೊದಲ ಹಂತದಲ್ಲಿ ರಾಜ್ ಕೋಟ್, ಜಾಮ್ ನಗರ್ ಮತ್ತು ಮೊರ್ಬಿ ಜಿಲ್ಲೆಗಳ 10 ಅಣೆಕಟ್ಟುಗಳನ್ನು ನರ್ಮದಾ ನದಿ ನೀರಿಂದ ತುಂಬಿಸಿ ಆ ಮೂಲಕ ನೀರಾವರಿ ಮತ್ತು ಕುಡಿಯುವ ಯೋಜನೆಗಳಿಗೆ ಬಳಸಲಾಗುವುದು.
- ಈ ಯೋಜನೆಯಡಿ ನೀರನ್ನು ಹರಿಸಲು ತೆರದ ಕಾಲುವೆ ನಿರ್ಮಿಸದೆ ಪೈಪ್ ಮೂಲಕ ಹರಿಸಲಾಗುವುದು. ಇದರಿಂದ ಭೂ ಸ್ವಾಧೀನ ಮಾಡಿಕೊಳ್ಳಬೇಕಗಿಲ್ಲ.
- ಸುಮಾರು 1, 125 ಕಿ.ಮೀ ನೀರಾವರಿ ಪೈಪ್ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ರೈತರ ಜಮೀನುಗಳಿಗೆ ನೀರರಿಸಬಹುದಾಗಿದೆ.

**ಹಿನ್ನಲೆ**:

- ಸೌನಿ ಯೋಜನೆಯನ್ನು 2012ರಲ್ಲಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಘೋಷಿಸಲಾಗಿತ್ತು. ಸೌರಾಷ್ಟ್ರ ಭಾಗವು 11 ಜಿಲ್ಲೆಗಳನ್ನು ಒಳಗೊಂಡಿದ್ದು, ತೀವ್ರ ಮಳೆಯ ಕೊರತೆಯಿಂದ ಜಲಕ್ಷಾಮ ಎದಿರುಸುತ್ತಿರುವ ಭಾಗವಾಗಿದೆ.

www.karunadueyams.com

# ಕೇಂದ್ರ ಸರ್ಕಾರದ-ಯೋಜನೆಗಳು

## 24 ಅಗತ್ಯ ಔಷಧಗಳ ಬೆಲೆ ಮೇಲೆ ಮಿತಿ ಹೇರಿದ ಕೇಂದ್ರ ಸರ್ಕಾರ

ಕ್ಯಾನ್ಸರ್, ಎಚ್‌ಐವಿ, ಬ್ಯಾಕ್ಟೀರಿಯಾ ಸೋಂಕುಗಳು, ಖಿನ್ನತೆ ಮತ್ತು ಹೃದಯ ರೋಗಗಳ ಚಿಕಿತ್ಸೆಗೆ ಬಳಸುವ 24 ಅಗತ್ಯ ಔಷಧಗಳ ಬೆಲೆಗೆ ಕೇಂದ್ರ ಸರ್ಕಾರ ಮಿತಿ ಹೇರಿದೆ. ಈ ಸಂಬಂಧ ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರ ಸುತ್ತೋಲೆಯನ್ನು ಹೊರಡಿಸಿದ್ದು, ಈ 24 ಔಷಧಗಳ ಬೆಲೆ ಶೇ 25 ರಷ್ಟು ಕಡಿಮೆಯಾಗಲಿದೆ. ಇದಲ್ಲದೆ ಔಷಧ ಬೆಲೆ ನಿಯಂತ್ರಣ ಆದೇಶದಡಿಯಲ್ಲಿ 31 ಔಷಧ ಮಿಶ್ರಣಗಳ ರಿಟೈಲ್ ದರದ ಮೇಲು ಮಿತಿ ಹೇರಲಾಗಿದೆ

- ಔಷಧ (ಬೆಲೆ ನಿಯಂತ್ರಣ) ತಿದ್ದುಪಡಿ ಆದೇಶ 2016ರ ಪ್ರಕಾರ ಷೆಡ್ಯೂಲ್-1 ವಿಭಾಗದಲ್ಲಿ ಈ 24 ಔಷಧಗಳು ಬರುತ್ತವೆ.
- ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರವೂ ಅಗತ್ಯ ಔಷಧಗಳ ಬೆಲೆ ಮೇಲೆ ಔಷಧ ಬೆಲೆ ನಿಯಂತ್ರಣ ಆದೇಶ-2013 ರಡಿಯಲ್ಲಿ ಮಿತಿ ಹೇರುತ್ತಿದೆ. ಮೇ 15ರಿಂದ ಇದರ ಅಡಿಯಲ್ಲಿ 680 ಔಷಧ ಮಿಶ್ರಣಗಳನ್ನು ಸೇರಿಸಲಾಗಿದೆ.

**ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರ (National Pharmaceutical Pricing Authority (NPPA)**

- ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರವನ್ನು 1997ರಲ್ಲಿ ಸ್ಥಾಪಿಸಲಾಗಿದೆ. ಔಷಧಗಳ ಬೆಲೆ ನಿಗದಿ, ಪರಿಷ್ಕರಣೆ ಮತ್ತು ಬೆಲೆ ಮೇಲೆ ನಿಗಾ ಈ ಸಂಸ್ಥೆಯ ಕೆಲಸ. ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದಡಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತದೆ.
- ಔಷಧ ನೀತಿ ಮತ್ತು ಬೆಲೆ ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು. ಜೊತೆಗೆ, ಔಷಧ ನೀತಿಯಲ್ಲಿ ಬದಲಾವಣೆಗಳನ್ನು / ಪರಿಷ್ಕರಣೆಗೆ ಕೇಂದ್ರ ಸರ್ಕಾರಕ್ಕೆ ಸಲಹೆ ಸಲ್ಲಿಸುವುದು ಎಪಿಪಿಎ ಯ ಪ್ರಮುಖ ಕೆಲಸ.

## ದೆಹಲಿ-ಅಗರ್ತಲಾ ನಡುವೆ ಸಂಪರ್ಕ ಕಲ್ಪಿಸುವ ತ್ರಿಪುರ ಸುಂದರಿ ಎಕ್ಸಪ್ರೆಸ್ ರೈಲಿಗೆ ಚಾಲನೆ

ದೆಹಲಿ ಮತ್ತು ಅಗರ್ತಲಾ ನಡುವೆ ಸಂಪರ್ಕ ಕಲ್ಪಿಸುವ ಮೊದಲ ಬ್ರಾಡ್ಗೇಜ್ ರೈಲು ಯೋಜನೆಗೆ ಕೇಂದ್ರ ರೈಲ್ವೇ ಖಾತೆ ಸಚಿವ ಸುರೇಶ್ ಪ್ರಭುರವರು ಚಾಲನೆ ನೀಡಿದರು. ತ್ರಿಪುರ ಸುಂದರಿ ಎಕ್ಸಪ್ರೆಸ್ ಎಂತಲೂ ಕರೆಯುವ ಈ ರೈಲು ಚಾಲನೆ ಮೂಲಕ ಈಶಾನ್ಯ ರಾಜ್ಯವಾದ ತ್ರಿಪುರ ದೇಶದ ಇತರೆ ಭಾಗಗಳೊಂದಿಗೆ ರೈಲ್ವೇ ಸಂಪರ್ಕಕ್ಕೆ ಮುಕ್ತವಾಗಲಿದೆ.

- ತ್ರಿಪುರ ಸುಂದರಿ ಎಕ್ಸಪ್ರೆಸ್ ವಾರಕ್ಕೊಮ್ಮೆ ದೆಹಲಿಯ ಆನಂದ ವಿಹಾರ ಮತ್ತು ತ್ರಿಪುರಾದ ಅಗರ್ತಲಾ ನಡುವೆ ಸಂಚರಿಸಲಿದೆ.
- ಈ ರೈಲು 46 ಗಂಟೆ 56 ನಿಮಿಷಗಳ ಕಾಲ ಸಂಚರಿಸಲಿದ್ದು, ಒಟ್ಟು 2461 ಕಿ.ಮೀ ಕ್ರಮಿಸಲಿದೆ. ಒಟ್ಟು 16 ರೈಲ್ವೇ ನಿಲ್ದಾಣಗಳನ್ನು ಹಾದುಹೋಗಲಿದೆ.
- ಪ್ರತಿ ಗುರುವಾರ ಅಗರ್ತಲಾದಿಂದ ನವದೆಹಲಿಗೆ ಸಂಚರಿಸಲಿದ್ದು, ಪ್ರತಿ ಸೋಮವಾರ ದೆಹಲಿಯಿಂದ ಅಗರ್ತಲಾಗೆ ಹಿಂದಿರುಗಲಿದೆ.
- ಈ ಯೋಜನೆಯ ಒಟ್ಟು ಮೊತ್ತ ರೂ 968 ಕೋಟಿ.

www.karunaduexams.com

**ಭಾರತ- ಬಾಂಗ್ಲ ರೈಲ್ವೆ ಯೋಜನೆಗೆ ಶಂಕುಸ್ಥಾಪನೆ:**

- ಭಾರತ ಮತ್ತು ಬಾಂಗ್ಲ ನಡುವೆ ರೈಲ್ವೇ ಸಂಪರ್ಕ ಕಲ್ಪಿಸುವ ಅಗರ್ತಲಾ-ಅಖೌರ (ಬಾಂಗ್ಲ) ಯೋಜನೆಗೆ ಸುರೇಶ್ ಪ್ರಭು ರವರು ಶಂಕುಸ್ಥಾಪನೆ ನೆರವೇರಿಸಿದರು.
- ಈ ರೈಲು ಯೋಜನೆ ಒಪ್ಪಂದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್- ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಅವರ ಭೇಟಿಯ ವೇಳೆ ಅಂತಿಮವಾಗಿತ್ತು. ಅಗರ್ತಲಾ-ಅಖೌರ ನಡುವಿನ ರೈಲು ಯೋಜನೆಯಿಂದ ಉಭಯ ದೇಶಗಳ ಸಂಬಂಧ ಸುಧಾರಿಸುವುದು ಮಾತ್ರವಲ್ಲದೆ, ಕೋಲ್ಕತ್ತದಿಂದ ತ್ರಿಪುರಕ್ಕೆ ಬಾಂಗ್ಲಾದೇಶ ಮಾರ್ಗವಾಗಿ ಸಂಪರ್ಕ ಕಲ್ಪಿಸಿದರೆ ಈಶಾನ್ಯ ರಾಜ್ಯಗಳ ಪ್ರದೇಶಗಳಿಗೆ ದೂರ ಮತ್ತು ಪ್ರಯಾಣದ ಅವಧಿ ಕಡಿಮೆ ಆಗುತ್ತದೆ.
- 2012-13 ನೇ ಸಾಲಿನ ರೈಲ್ವೆ ಬಜೆಟ್ ನಲ್ಲಿ ಭಾರತ- ಬಾಂಗ್ಲಾದೇಶದ ನಡುವಿನ ರೈಲ್ವೆ ಯೋಜನೆಯನ್ನು ಘೋಷಿಸಲಾಗಿತ್ತು.

**ಮೋಟಾರು ವಾಹನ (ತಿದ್ದುಪಡಿ) ಮಸೂದೆ-2016ಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ**

ದೇಶದಲ್ಲಿ ರಸ್ತೆ ಸುರಕ್ಷತೆಯನ್ನು ಹೆಚ್ಚಿಸುವ ಮಹತ್ವದ ಗುರಿ ಹೊಂದಿರುವ ಮೋಟಾರ್ ವಾಹನ (ತಿದ್ದುಪಡಿ) ಮಸೂದೆ-2016ಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಮಸೂದೆಯು ಮೋಟಾರು ವಾಹನ ಕಾಯಿದೆ, 1998 ಕ್ಕೆ ತಿದ್ದುಪಡಿ ತರುವ ಮೂಲಕ ರಸ್ತೆ ಸುರಕ್ಷತೆ ನಿಯಮಗಳ ಉಲ್ಲಂಘನೆಗೆ ದೊಡ್ಡ ಮೊತ್ತದ ದಂಡ ವಿಧಿಸುವ ಅವಕಾಶವನ್ನು ಕಲ್ಪಿಸಲಿದೆ.

**ಮಸೂದೆಯಲ್ಲಿರುವ ಪ್ರಮುಖ ಅಂಶಗಳು:**

- ಮೋಟಾರು ವಾಹನ ಕಾಯಿದೆ-1988 ಒಳಗೊಂಡಿರುವ 223 ಸೆಕ್ಷನ್ಗಳ ಪೈಕಿ 68 ಸೆಕ್ಷನ್ ಗಳಿಗೆ ತಿದ್ದುಪಡಿ ತರುವುದು ಹಾಗೂ ಹೊಸದಾಗಿ 28 ಸೆಕ್ಷನ್ ಗಳನ್ನು ಸೇರಿಸುವ ಅವಕಾಶವನ್ನು ಮಸೂದೆಯಲ್ಲಿ ಕಲ್ಪಿಸಲಾಗಿದೆ.
- ಮೋಟಾರು ವಾಹನ ಕಾಯಿದೆ-1988ರ ಅಧ್ಯಾಯ 10 ಅನ್ನು ತೆಗೆದು ಹಾಕುವುದು ಮತ್ತು ಅಧ್ಯಾಯ 11 ರಲ್ಲಿರುವ ಅವಕಾಶಗಳನ್ನು ಬದಲಿಸುವ ಮೂಲಕ ವಿಮೆ ಕ್ಲೇಮ ಮತ್ತು ಪರಿಹಾರವನ್ನು ಮತ್ತಷ್ಟು ಸರಳೀಕರಣಗೊಳಿಸುವ ಉದ್ದೇಶವನ್ನು ಹೊಂದಿದೆ.
- ಗುದ್ದೋಡು ಪ್ರಕರಣದ ಸಂತ್ರಸ್ತರಿಗೆ 2 ಲಕ್ಷ ರೂ ಪರಿಹಾರ, ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದವರಿಗೆ 10 ಲಕ್ಷ ರೂ ಪರಿಹಾರ ನೀಡಬೇಕು ಎಂಬ ಅಂಶಗಳು ಹೊಸ ಕಾಯಿದೆಯಲ್ಲಿವೆ.
- ಅಪ್ರಾಪ್ತರು ವಾಹನ ಚಲಾಯಿಸಿ ಅಪಘಾತ ಮಾಡಿದರೆ ಅದಕ್ಕೆ ಅವರ ಪಾಲಕರೇ ನೇರ ಹೊಣೆ, ವಾಹನದ ನೋಂದಣಿ ರದ್ದು.
- ವಾಹನ ಚಲಾವಣೆಗೆ ಶೈಕ್ಷಣಿಕ ಹಿನ್ನೆಲೆ ಕಡ್ಡಾಯ ಎಂಬ ನಿಯಮ ರದ್ದು.
- ವಾಹನ ಚಲಾವಣೆಗೆ ನೀಡಿದ ಲೈಸನ್ಸ್ ಅವಧಿ ಹೆಚ್ಚಳ.
- ವಾಹನ ತಾತ್ಕಾಲಿಕ ನೋಂದಣಿ ವ್ಯವಸ್ಥೆ ಸಂಪೂರ್ಣ ರದ್ದು.
- ಲೈಸನ್ಸ್ ಇಲ್ಲದೆ ವಾಹನ ಚಲಾಯಿಸಿದರೆ ಮತ್ತು ಅನಧಿಕೃತವಾಗಿ ವಾಹನ ಚಲಾಯಿಸಿದರೆ 5,000 ರೂ ದಂಡ ಮತ್ತು ವಾಹನ ಚಾಲನೆ ಮಾಡದಂತೆ ಶಿಕ್ಷೆ ವಿಧಿಸಿದ್ದರೂ ವಾಹನ ಚಲಾಯಿಸಿದರೆ ಅಂಥ ಸಂದರ್ಭ ಕನಿಷ್ಠ 10,000 ರೂ ದಂಡ.

www.karunaduexams.com

- ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರಿಗೆ 10,000 ರು. ದಂಡ, ವಿಮೆ ಇಲ್ಲದೆ ವಾಹನ ಚಲಾಯಿಸಿದರೆ 2,000 ರು. ದಂಡ, 3 ತಿಂಗಳ ಜೈಲು ಅಥವಾ ಎರಡೂ ಶಿಕ್ಷೆ, ಹೆಲ್ಮೆಟ್ ಇಲ್ಲದೆ ಬೈಕ್ ಸಂಚಾರಕ್ಕೆ 1,000 ರು. ದಂಡ, 3 ತಿಂಗಳು ಲೈಸನ್ಸ್ ಅಮಾನತು ಮುಂತಾದ ಕಠಿಣ ನಿಯಮಗಳನ್ನು ಮಸೂದೆ ಒಳಗೊಂಡಿದೆ.

**ಹಿನ್ನಲೆ:**

- ಭಾರತದಲ್ಲಿ ಪ್ರತಿ ವರ್ಷ ಸುಮಾರು 5 ಲಕ್ಷಕ್ಕೂ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸುವ ಮೂಲಕ 1.5 ಲಕ್ಷ ಜನರು ಸಾವನ್ನಪ್ಪುತ್ತಿದ್ದಾರೆ. ರಸ್ತೆ ಅಪಘಾತಗಳ ತೀವ್ರತೆಯನ್ನು ಮನಗೊಂಡ ಕೇಂದ್ರ ಸರ್ಕಾರ ರಸ್ತೆ ಸುರಕ್ಷತೆಯನ್ನು ಕಾಪಾಡುವ ಸಲುವಾಗಿ ರಸ್ತೆ ಸಾರಿಗೆ ಮತ್ತು ಸುರಕ್ಷತೆ ಮಸೂದೆಯ ಕರಡು ಪ್ರತಿಯನ್ನು ಸಿದ್ದಪಡಿಸಿತ್ತು, ಆದರೆ ಇದಕ್ಕೆ ಅನೇಕ ರಾಜ್ಯಗಳು ವಿರೋಧ ವ್ಯಕ್ತಪಡಿಸಿದವು.
- ರಾಜ್ಯಗಳಿಂದ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ರಾಜ್ಯ ಸಾರಿಗೆ ಸಚಿವರುಗಳನ್ನು ಒಳಗೊಂಡ ಸಮಿತಿಯೊಂದನ್ನು ರಚಿಸುವ ಮೂಲಕ ಸಲಹೆ ನೀಡುವಂತೆ ಸೂಚಿಸಿತ್ತು.
- ಈ ಸಮಿತಿಯ ಅಧ್ಯಕ್ಷತೆಯನ್ನು ರಾಜಸ್ಥಾನ ಸಾರಿಗೆ ಸಚಿವರಾದ ಯೂನಸ್ ಖಾನ್ ವಹಿಸಿದ್ದರು. ಸಮಿತಿಯು ವಿವಿಧ ಅವಧಿಯಲ್ಲಿ ಮೂರು ಬಾರಿ ಸಭೆ ಕೈಗೊಂಡು, ಇದರಲ್ಲಿ ಸುಮಾರು 18 ರಾಜ್ಯಗಳ ಸಾರಿಗೆ ಸಚಿವರು ಭಾಗವಹಿಸಿದ್ದರು.
- ರಸ್ತೆ ಸುರಕ್ಷತೆ ಮತ್ತು ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಬೇಕಾದರೆ ಪ್ರಸ್ತುತ ಇರುವ ಮೋಟಾರು ವಾಹನ ಕಾಯಿದೆ-1988 ಕ್ಕೆ ಶೀಘ್ರವೇ ತಿದ್ದುಪಡಿ ತರಬೇಕೆಂದು ಸಾರಿಗೆ ಸಚಿವರುಗಳನ್ನು ಒಳಗೊಂಡ ಸಮಿತಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

**ಸಂವಿಧಾನ (122ನೇ ತಿದ್ದುಪಡಿ) (ಸರಕು ಮತ್ತು ಸೇವಾ), 2014 ಮಸೂದೆಗೆ ರಾಜ್ಯ ಸಭೆ ಅಂಗೀಕಾರ**

ದೇಶದಾದ್ಯಂತ ಏಕರೂಪದ ಸರಕು ಮತ್ತು ಸೇವಾ ತೆರಿಗೆ (GST) ವಿಧಿಸುವ ಸಂವಿಧಾನಕ್ಕೆ 122ನೇ ತಿದ್ದುಪಡಿ ತರುವ ಮಸೂದೆಗೆ ರಾಜ್ಯಸಭೆ ಸರ್ವಾನುಮತದ ಒಪ್ಪಿಗೆ ನೀಡಿದೆ. ಈ ಮಸೂದೆಗೆ ಒಪ್ಪಿಗೆ ನೀಡುವ ಮೂಲಕ ದೇಶದಲ್ಲಿ ಜಾರಿಯಲ್ಲಿರುವ ಪರೋಕ್ಷ ತೆರಿಗೆಗಳನ್ನು ಸುಧಾರಿಸುವ ಮೂಲಕ ಒಂದು ದೇಶ ಒಂದು ತೆರಿಗೆ ವ್ಯವಸ್ಥೆಗೆ ನಾಂದಿ ಹಾಡಲಿದೆ. ಮೇ 2015 ರಂದು ಲೋಕಸಭೆಯಲ್ಲಿ ಈ ಮಸೂದೆಗೆ ಅಂಗೀಕಾರ ನೀಡಲಾಗಿತ್ತು. ಲೋಕಸಭೆಯು ಸಂವಿಧಾನ ತಿದ್ದುಪಡಿ ಮಸೂದೆಗೆ ಈಗಾಗಲೇ ಒಪ್ಪಿಗೆ ನೀಡಿದೆ. ಆದರೆ ಲೋಕಸಭೆಯಲ್ಲಿ ಅಂಗೀಕಾರವಾದ ಮಸೂದೆಯನ್ನು ಪರಿಷ್ಕರಿಸಿ ರಾಜ್ಯಸಭೆಯಲ್ಲಿ ಅಂಗೀಕಾರ ನೀಡಿರುವುದರಿಂದ ಅದು ಮತ್ತೊಮ್ಮೆ ಲೋಕಸಭೆಯ ಒಪ್ಪಿಗೆ ಪಡೆಯುವುದು ಅಗತ್ಯ

**ಸರಕು ಮತ್ತು ಸೇವಾ ತೆರಿಗೆ ಎಂದರೇನು?**

ದೇಶವ್ಯಾಪ್ತಿ ಪ್ರಸ್ತುತ ಇರುವ ವಿವಿಧ ಪರೋಕ್ಷ ತೆರಿಗೆಯನ್ನು ರದ್ದುಗೊಳಿಸಿ ಒಂದೇ ತೆರಿಗೆಯನ್ನು ವಿಧಿಸುವ ವ್ಯವಸ್ಥೆಯೇ ಸರಕು ಮತ್ತು ಸೇವಾ ತೆರಿಗೆ. ಉದಾಹರಣೆಯೊಂದಿಗೆ ನೋಡುವದಾದರೆ ಯಾವುದಾದರೂ ಒಂದು ವಸ್ತು ದೇಶದ ಒಳಗಡೆ ತಯಾರಾಗಿ ಅದು ಗ್ರಾಹಕನ ಕೈ ಸೇರುವ ವೇಳೆಗೆ ಅನೇಕ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗೆ ಒಳಪಡಬೇಕಾಗುತ್ತದೆ. ರಾಜ್ಯದಿಂದ ರಾಜ್ಯಕ್ಕೂ ಅದು ಭಿನ್ನವಾಗಿರುತ್ತದೆ. ಮೌಲ್ಯವರ್ಧಿತ ತೆರಿಗೆ(ವ್ಯಾಟ್), ಸೇವಾ ತೆರಿಗೆ, ಸೆಸ್ ಈ ಬಗೆಯ ತೆರಿಗೆಯ ಹೆಸರುಗಳನ್ನು ಇದಕ್ಕೆ ಸೇರಿಸಿಕೊಳ್ಳಬಹುದು. ಉತ್ಪಾದಕನ ಕೈಯಿಂದ ಗ್ರಾಹಕನ ಕೈ ಸೇರುವವರೆಗೆ ತೆರಿಗೆಗಳನ್ನು ಹೇರಿಸಿಕೊಳ್ಳುತ್ತಲೇ ಸಾಗುತ್ತದೆ. ಆದರೆ ಜಿಎಸ್ ಟಿ ಜಾರಿಯಾದರೆ ಈ ಎಲ್ಲ ಪರೋಕ್ಷ ತೆರಿಗೆಗಳನ್ನು ತೆಗೆದು ಹಾಕಿ ನೇರ ತೆರಿಗೆ ಮಾತ್ರ ಉಳಿದುಕೊಳ್ಳುತ್ತದೆ. ಅಂದರೆ ರಾಜ್ಯದಿಂದ ರಾಜ್ಯಕ್ಕೆ ಒಂದೇ ವಸ್ತುವಿನ ಬೆಲೆಯಲ್ಲಿ ಭಾರೀ ದರ ವ್ಯತ್ಯಾಸ ಕಾಣ ಸಿಗುವುದಿಲ್ಲ. ಅಲ್ಲದೇ ಉತ್ಪಾದನ ಘಟಕಗಳು ಪಾವತಿ ಮಾಡುವ ತೆರಿಗೆಯಲ್ಲಿ ಬದಲಾವಣೆ ಆಗುವುದಿಲ್ಲ.

www.karunaduexams.com

**ಜಿಎಸ್ ಟಿಯಿಂದ ರದ್ದಾಗಲಿರುವ ತೆರಿಗೆಗಳು ಯಾವುವು?**

- ಕೇಂದ್ರ ಅಬಕಾರಿ ಸುಂಕ, ಸೇವಾ ತೆರಿಗೆ, ಹೆಚ್ಚುವರಿ ಕಸ್ಟಮ್ ಸುಂಕ ರದ್ದಾಗಲಿವೆ.
- ರಾಜ್ಯ ಮಟ್ಟದಲ್ಲಿ ರಾಜ್ಯ ಮೌಲ್ಯ ವರ್ಧಿತ ತೆರಿಗೆ, ಮಾರಾಟ ತೆರಿಗೆ, ಐಷರಾಮಿ ತೆರಿಗೆ, ಮನೋರಂಜನಾ ತೆರಿಗೆ, ಲಾಟರಿ ಮತ್ತು ಜೂಜು ಮೇಲಿನ ತೆರಿಗೆ ಸೇರಿದಂತೆ ಎಲ್ಲಾ ಪರೋಕ್ಷ ತೆರಿಗೆಗಳು ರದ್ದಾಗಲಿವೆ.

**ಮದ್ಯ ಪ್ರತ್ಯೇಕ:** ಮದ್ಯದ ಮೇಲೆ ರಾಜ್ಯ ಸರ್ಕಾರಗಳು ಅಬಕಾರಿ ತೆರಿಗೆ ವಿಧಿಸುತ್ತವೆ. ಮದ್ಯ ಜಿಎಸ್ಟಿ ವ್ಯಾಪ್ತಿಗೆ ಬರುವುದಿಲ್ಲ. ಮದ್ಯಕ್ಕೆ ತೆರಿಗೆ ವಿಧಿಸುವ ಅವಕಾಶ ರಾಜ್ಯ ಸರ್ಕಾರಗಳ ಬಳಿಯೇ ಇರಲಿದೆ.

**ಮಸೂದೆಯಲ್ಲಿರುವ ಪ್ರಮುಖ ಪರಿಷ್ಕೃತ ಅಂಶಗಳು:**

**ಸರಕು ಮತ್ತು ಸೇವಾ ತೆರಿಗೆ (GST) ಏಪ್ರಿಲ್ 1 ರಿಂದ ಜಾರಿಗೊಳಿಸುವ ಗುರಿ: ಕೇಂದ್ರ ಸರ್ಕಾರ**

ಬಹು ನಿರೀಕ್ಷಿತ ಸರಕು ಮತ್ತು ಸೇವಾ ತೆರಿಗೆಯನ್ನು ಏಪ್ರಿಲ್ 1 ರಿಂದ ಜಾರಿಗೊಳಿಸುವ ಮಹತ್ವಕಾಂಕ್ಷೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ರವರು ಜಿಎಸ್‌ಟಿ ಜಾರಿಗೆ ನೀಲನಕ್ಷೆಯನ್ನು ಬಿಡುಗಡೆಗೊಳಿಸುವ ವೇಳೆ ಈ ವಿಷಯವನ್ನು ಖಾತ್ರಿಪಡಿಸಿದ್ದಾರೆ.

ಹೇಗಿರಲಿದೆ ಜಿಎಸ್‌ಟಿ?

- ಭಾರತದ ಒಕ್ಕೂಟ ವ್ಯವಸ್ಥೆಗೆ ಸರಿಹೊಂದುಕೊಳ್ಳುವಂತೆ ಕೇಂದ್ರ ಜಿಎಸ್‌ಟಿ (CGST) ಮತ್ತು ರಾಜ್ಯ ಜಿಎಸ್‌ಟಿ (SGST) ಎಂಬ ಎರಡು ಘಟಕಗಳನ್ನು ಜಿಎಸ್‌ಟಿ ಹೊಂದಿರಲಿದೆ. ಆಗಾಗಿ ಕೇಂದ್ರ ಮತ್ತು ರಾಜ್ಯಗಳು ಎರಡೂ ಏಕಕಾಲದಲ್ಲಿ ಮೌಲ್ಯ ಸರಪಳಿ ಮೇಲೆ ಜಿಎಸ್‌ಟಿ ವಿಧಿಸುವ ಅಧಿಕಾರವನ್ನು ಹೊಂದಿರಲಿವೆ. ಜಿಎಸ್‌ಟಿಯನ್ನು ಪ್ರತಿ ಸರಕು ಮತ್ತು ಸೇವೆಗಳ ಪೂರೈಕೆ ಮೇಲೆ ವಿಧಿಸಲಾಗುತ್ತದೆ.
- ರಾಜ್ಯಗಳು ರಾಜ್ಯದೊಳಗೆ ನಡೆಯುವ ಎಲ್ಲಾ ಅಂತರಿಕ ವ್ಯವಹಾರಗಳ ಮೇಲೆ ರಾಜ್ಯ ಜಿಎಸ್‌ಟಿಯನ್ನು ವಿಧಿಸುವ ಮತ್ತು ಸಂಗ್ರಹಿಸುವ ಹಕ್ಕನ್ನು ಹೊಂದಿರಲಿವೆ. ಅದೇ ರೀತಿ ಕೇಂದ್ರ ಸರ್ಕಾರ ಕೇಂದ್ರ ಜಿಎಸ್‌ಟಿಯನ್ನು ವಿಧಿಸಿ, ಸಂಗ್ರಹಿಸಲಿದೆ.

**ಜಿಎಸ್‌ಟಿಯ ಅನುಕೂಲಗಳೇನು?**

- **ಏಕರೂಪದ ತೆರಿಗೆ ದರ ಮತ್ತು ವ್ಯವಸ್ಥೆ**: ತೆರಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಎಲ್ಲಾ ರೀತಿಯ ಪ್ರತ್ಯಕ್ಷ ಪರೋಕ್ಷ ತೆರಿಗೆಗಳನ್ನು, ಉಪಕರಗಳು ರದ್ದಾಗಿ ಏಕೈಕ ಸರಕು ಮತ್ತು ಸೇವಾ ತೆರಿಗೆ (ಜಿಎಸ್ಟಿ) ಜಾರಿಗೆ ಬರುತ್ತದೆ. ಜತೆಗೆ ತೆರಿಗೆ ಪ್ರಮಾಣವೂ ಗಣನೀಯವಾಗಿ ತಗ್ಗುತ್ತದೆ.
- **ಸುಲಭ ಅನುಸರಣೆ:** ಜಿಎಸ್‌ಟಿ ಒಂದು ದೃಢವಾದ ಮತ್ತು ಸಮಗ್ರ ಐಟಿ ವ್ಯವಸ್ಥೆಯನ್ನು ಹೊಂದಿರಲಿದೆ. ಆದ್ದರಿಂದ ತೆರಿಗೆ ಪಾವತಿದಾರರ ಸೇವೆಗಳಾದ ನೋಂದಣಿ, ಪಾವತಿ, ಇತ್ಯಾದಿ ಸೇವೆಗಳು ಆನ್ಲೈನ್ ನಲ್ಲಿ ಲಭ್ಯವಾಗುತ್ತದೆ. ಆ ಮೂಲಕ ಸರಳ ಮತ್ತು ಪಾರದರ್ಶಕ ವ್ಯವಸ್ಥೆಯನ್ನು ರೂಪಿಸಲಿದೆ.
- **ಸುಧಾರಿತ ಸ್ಪರ್ಧಾತ್ಮಕತೆ:** ವ್ಯಾಪಾರ ವಹಿವಾಟಿಗೆ ತಗುಲುವ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲಿದೆ.

www.karunadu exams.com

- **ಉತ್ಪಾದಕರೂ ಮತ್ತು ರಫ್ತುದಾರರಿಗೆ ಅನುಕೂಲ:** ಉತ್ಪಾದಕ ಸರಕುಗಳ ದರ ಕಡಮೆಯಾಗಲಿದ್ದು, ಗ್ರಾಹಕರಿಗೆ ಅನುಕೂಲ. ಉತ್ಪಾದನಾವೆಚ್ಚ, ಸಾಗಣಾ ವೆಚ್ಚ ತಗ್ಗುವುದರ ಜತೆಗೆ ತೆರಿಗೆ ಪ್ರಮಾಣವೂ ತಗ್ಗುವುದರಿಂದ ಉತ್ಪಾದಕ ವಸ್ತುಗಳು ಕಡಮೆ ಬೆಲೆಗೆ ದಕ್ಕುತ್ತವೆ. ಹೀಗಾಗಿ ಬೇಡಿಕೆಯೂ ಹೆಚ್ಚುತ್ತದೆ.

**ಗ್ರಾಹಕರಿಗೆ ಹೇಗೆ ಅನುಕೂಲ**?

- **ಒಂದೇ ತೆರಿಗೆ ವ್ಯವಸ್ಥೆ**: ಜಿಎಸ್ ಟಿ ಜಾರಿಯಾದರೆ ಈ ಎಲ್ಲ ಪರೋಕ್ಷ ತೆರಿಗೆಗಳನ್ನು ತೆಗೆದು ಹಾಕಿ ನೇರ ತೆರಿಗೆ ಮಾತ್ರ ಉಳಿದುಕೊಳ್ಳುತ್ತದೆ. ಅಂದರೆ ರಾಜ್ಯದಿಂದ ರಾಜ್ಯಕ್ಕೆ ಒಂದೇ ವಸ್ತುವಿನ ಬೆಲೆಯಲ್ಲಿ ಭಾರೀ ದರ ವ್ಯತ್ಯಾಸ ಕಾಣ ಸಿಗುವುದಿಲ್ಲ. ಇದರಿಂದ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ವಸ್ತುಗಳು ಕೈಗೆಟುಕಲಿವೆ

**ಕೇಂದ್ರ ಮತ್ತು ರಾಜ್ಯಗಳಿಗಾಗುವ ಅನುಕೂಲಗಳು:**

- **ಸರಳ ಮತ್ತು ಸುಲಭ ಆಡಳಿತ:** ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಅನೇಕ ಪರೋಕ್ಷ ತೆರಿಗೆಗಳನ್ನು ತೆಗೆದುಹಾಕಿ ಏಕರೂಪದ ತೆರಿಗೆ ಜಾರಿಗೆ ಬರುವ ಮೂಲಕ ಆಡಳಿತ ಸುಲಭವಾಗಲಿದೆ.
- **ತೆರಿಗೆ ಕಳ್ಳತನದ ಮೇಲೆ ನಿಗಾ**: ಜಿಎಸ್ಟಿ ಜಾರಿಯಿಂದ ತೆರಿಗೆಗಳ್ಳತನ ತಗ್ಗಲಿದ್ದು ತೆರಿಗೆ ಆದಾಯ ಹಿಗ್ಗಲಿದೆ. ಕಡಿಮೆ ತೆರಿಗೆಯೂ ಎಲ್ಲರನ್ನು ತೆರಿಗೆ ಪಾವತಿಸಲು ಉತ್ತೇಜಿಸಲಿದೆ. ಕೇಂದ್ರ ಮತ್ತು ರಾಜ್ಯಗಳು ತೆರಿಗೆ ಮೇಲೆ ಪ್ರತ್ಯೇಕ ನಿಗಾ ಇಡಲಿವೆ. ತೆರಿಗೆ ವಿನಾಯ್ತಿ ಸರಕುಗಳ ಪ್ರಮಾಣ ಬೆರಳೆಣಿಕೆಗೆ ಇಳಿಯಲಿದೆ.

## ರಾಷ್ಟ್ರವ್ಯಾಪ್ತಿ ಸ್ತನಪಾನ ಕಾರ್ಯಕ್ರಮ "ಮಾ" ಗೆ ಕೇಂದ್ರ ಸರ್ಕಾರದಿಂದ ಚಾಲನೆ

ಮಾ (MAA Mothers Absolute Affection) ಹೆಸರಿನಡಿ ರಾಷ್ಟ್ರವ್ಯಾಪ್ತಿ ಸ್ತನಪಾನ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಜೆ.ಪಿ.ನಡ್ಡ ಹಾಗೂ ಈ ಕಾರ್ಯಕ್ರಮದ ರಾಯಭಾರಿಯಾಗಿರುವ ಬಾಲಿವುಡ್ ನಟಿ ಮಾಧುರಿ ದೀಕ್ಷಿತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

**"ಮಾ" ಉದ್ದೇಶ:**

- ಮಾ ಕೇಂದ್ರ ಆರೋಗ್ಯ ಸಚಿವಾಲಯದ ಮಹತ್ವದ ಕಾರ್ಯಕ್ರಮವಾಗಿದ್ದು, ದೇಶದಲ್ಲಿ ಸ್ತನಪಾನದ ಬಗ್ಗೆ ಸೂಕ್ತ ಅರಿವು ಮೂಡಿಸುವುದಕ್ಕೆ ಆರಂಭಿಸಲಾಗಿದೆ.
- ಆರೋಗ್ಯ ವ್ಯವಸ್ಥೆಯ ಮೂಲಕ ಸ್ತನಪಾನ ಬೆಂಬಲಿಸುವ ಮತ್ತು ಸಮಾಲೋಚನೆ ಸೇವೆ ನೀಡಿಕೆಯನ್ನು ಉತ್ತೇಜಿಸುವ ಸಲುವಾಗಿ ಆರಂಭಿಸಲಾಗಿದೆ.
- ತಾಯಂದಿರು, ಗಂಡ ಮತ್ತು ಕುಟುಂಬ ಸದಸ್ಯರಲ್ಲಿ ಸ್ತನಪಾನದ ಮಹತ್ವದ ಬಗ್ಗೆ ಅರಿವು ಮೂಡಿಸಿ, ಸ್ತನಪಾನವನ್ನು ಪ್ರೋತ್ಸಾಹಿಸುವುದು.

**ಕಾರ್ಯಕ್ರಮದ ಪ್ರಮುಖ ಅಂಶಗಳು**:

- ಸಮುದಾಯದಲ್ಲಿ ಅರಿವು ಮೂಡಿಸುವುದು, ಆಶಾ ಕಾರ್ಯಕರ್ತೆಯರ ಮೂಲಕ ಸಾಮಾಜಿಕ ಸಂಪರ್ಕ ಬಲಪಡಿಸುವುದು, ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಸ್ತನಪಾನದ ಬಗ್ಗೆ ಕೌಶಲ್ಯ ಮೂಢಿಸುವುದು, ಮೇಲ್ವಿಚಾರಣೆ ಮತ್ತು ಪ್ರಶಸ್ತಿ ನೀಡುವಿಕೆ

www.karunaduexams.com

- ಕೇಂದ್ರ ಸರ್ಕಾರ ಈ ಕಾರ್ಯಕ್ರಮಕ್ಕಾಗಿ 30 ರೂ ಕೋಟಿಯನ್ನು ಮೀಸಲಿಟ್ಟಿದೆ.

**ಸ್ತನಪಾನದ ಮಹತ್ವ:**

- ಜನ್ಮ ನೀಡಿದ ಕೂಡಲೇ, ಅದರಲ್ಲೂ ಮೊದಲ ಒಂದು ಗಂಟೆಯೊಳಗೆ ಹಾಲುಣಿಸುವುದು ಬಹಳ ಅವಶ್ಯಕತೆಯನ್ನು ಹೊಂದಿದೆ. ಮೊದಲ ಕೆಲವು ಗಂಟೆಗಳಲ್ಲೇ ಹಾಲುಣಿಸುವುದರಿಂದ ತಾಯಂದಿರಗೂ ಬಹಳ ಅನುಕೂಲಗಳಿವೆ. ಮಗು ಎದೆಹಾಲನ್ನು ಹೀರುವುದರಿಂದ ಎದೆಹಾಲಿನ ಉತ್ಪತ್ತಿಯನ್ನು ಉತ್ತೇಜಿಸುವುದರ ಜೊತೆ ದೇಹದಲ್ಲಿ ಆಕ್ಸಿಟೋಸಿನ್ ಬಿಡುಗಡೆಗೆ ಸಹಕಾರಿಯಾಗುತ್ತದೆ. ಆಕ್ಸಿಟೋಸಿನ್ ಗರ್ಭಕೋಶವನ್ನು ಕುಗ್ಗಿಸುವುದರ ಜೊತೆಗೆ ಪ್ರಸವದ ನಂತರದ ರಕ್ತಸ್ರಾವವನ್ನು ಕಡಿಮೆಮಾಡುತ್ತದೆ.
- ಕೊಲೊಸ್ಟ್ರಮ್ ಎಂದು ಕರೆಯಲ್ಪಡುವ ಮೊದಲ ಎದೆಹಾಲಿನಲ್ಲಿ ನವಜಾತ ಶಿಶುವನ್ನು ರೋಗಗಳಿಂದ ಕಾಪಾಡಲು ಅಗತ್ಯ ಪೌಷ್ಟಿಕಾಂಶ ಮತ್ತು ರೋಗನಿರೋಧಕ ಶಕ್ತಿ ಇರುತ್ತದೆ.
- ಮೊದಲ ಆರು ತಿಂಗಳು ಕಡ್ಡಾಯವಾಗಿ ಹಾಲುಣಿಸುವುದನ್ನು ಪ್ರೋತ್ಸಾಹಿಸುವುದು ಏಕೆಂದರೆ ತಾಯಿಹಾಲು ಅತ್ಯಂತ ಶುದ್ಧವಾಗಿರುತ್ತದೆ ಮತ್ತು ಮಗುವಿನ ಬದುಕಿನ ಮೊದಲ ಕೆಲವು ತಿಂಗಳವರಗೆ ಅತ್ಯಗತ್ಯವಾಗಿ ಬೇಕಾಗಿರುವ ಪೌಷ್ಟಿಕಾಂಶ ಇದರಲ್ಲಿರುತ್ತದೆ. ಇದರ ಜೊತೆಗೆ ತಾಯಿಯಲ್ಲಿರುವ ಪ್ರತಿಕಾಯಗಳು ಮಗುವಿನಲ್ಲಿ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತವೆ. ಸ್ತನಪಾನದಿಂದ ಡಯೋರಿಯಾ ಮತ್ತು ನ್ಯೂಮೋನಿಯಾ ಕಾಯಿಲೆಯನ್ನು ತಡೆಯಬಹುದಾಗಿದೆ. ಈ ಎರಡು ಕಾಯಿಲೆಗಳು ಭಾರತದಲ್ಲಿ ಮಕ್ಕಳು ಹೆಚ್ಚು ಮರಣ ಹೊಂದಲು ಕಾರಣವಾಗಿವೆ.
- 2015ರ ವರ್ಲ್ಡ್ ಬ್ರೆಸ್ಟ್ ಫೀಡಿಂಗ್ ಟ್ರೆಂಡ್ಸ್ ಇನಿಶಿಯೇಟಿವ್(WBTI) ನಡೆಸಿದ ಮೌಲ್ಯಮಾಪನದಲ್ಲಿ ಭಾರತ ಸ್ತನಪಾನ ವಿಚಾರದಲ್ಲಿ 150ಕ್ಕೆ 78 ಅಂಕ ಗಳಿಸಿದೆ.
- .ಆಗಸ್ಟ್ 1 ರಿಂದ 7 ರವರೆಗೆ ಪ್ರತಿ ವರ್ಷ ವಿಶ್ವ ಸ್ತನಪಾನ ಸಪ್ತಾಹ ಎಂದು ಆಚರಿಸಲಾಗುತ್ತಿದೆ.
- 2016 ರಲ್ಲಿ 14ನೇ ಪ್ರವಾಸಿ ಭಾರತೀಯ ದಿವಸ್ ನವದೆಹಲಿಯಲ್ಲಿ ನಡೆದಿತ್ತು.

**ಲೆಫ್ಟಿನೆಂಟ್ ಗವರ್ನರ್ ದೆಹಲಿಯ ಮುಖ್ಯಸ್ಥರು: ದೆಹಲಿ ಹೈಕೋರ್ಟ್ ತೀರ್ಪು**

ದೆಹಲಿ ಈಗಲೂ ಕೇಂದ್ರಾಡಳಿತ ಪ್ರದೇಶವಾಗಿದ್ದು, ಲೆಫ್ಟಿನೆಂಟ್ ಗವರ್ನರ್ ದೆಹಲಿಯ ಮುಖ್ಯಸ್ಥರೇ ವಿನಾ ಮುಖ್ಯಮಂತ್ರಿಯಲ್ಲ ಎಂದು ದೆಹಲಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ನ್ಯಾಯಮೂರ್ತಿ ಜಿ. ರೋಹಿಣಿ ಮತ್ತು ಜಯಂತ್ ನಾಥ್ ಒಳಗೊಂಡ ಹೈಕೋರ್ಟ್ ಪೀಠ ಈ ತೀರ್ಪು ನೀಡಿದ್ದು, ಅರವಿಂದ್ ಕೇಜ್ರಿವಾಲ್ ನೇತೃತ್ವದ ಸರ್ಕಾರ ಮತ್ತು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ನಡುವಿನ ಸಂಘರ್ಷಕ್ಕೆ ತೆರೆ ಬಿದ್ದಿದೆ.

**ತೀರ್ಪಿನಲ್ಲಿರುವ ಅಂಶಗಳು**:

- ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ದೆಹಲಿಯನ್ನು ನ್ಯಾಷನಲ್ ಕ್ಯಾಪಿಟಲ್ ಟೆರಿಟೊರಿ (NCT) ಎಂದು ಘೋಷಿಸಿದ್ದರೂ ಸಹ ದೆಹಲಿ ಈಗಲೂ ಕೇಂದ್ರಾಡಳಿತ ಪ್ರದೇಶವೆಂದು ಕೋರ್ಟ್ ಹೇಳಿದೆ.
- ದೆಹಲಿಯಲ್ಲಿ ಯಾವುದೇ ಕಾನೂನು ಜಾರಿಗೆ ತರುವ ಮುನ್ನ ಲೆಫ್ಟಿನೆಂಟ್ ಗವರ್ನರ್ ಗಮನಕ್ಕೆ ತರಬೇಕು ಹಾಗೂ ಗವರ್ನರ್ ತೀರ್ಮಾನವೇ ಅಂತಿಮ ತೀರ್ಮಾನ.

- ದೆಹಲಿ ಅಂಡ್ ಡಿಸ್ಟ್ರಿಕ್ ಕ್ರಿಕೆಟ್ ಅಸೋಸಿಯೇಷನ್ (DDCA) ಮತ್ತು CNG ಹಗರಣಗಳ ತನಿಖೆಗೆ ದೆಹಲಿ ಸರ್ಕಾರ ಆದೇಶಿಸಿರುವುದು ಕಾನೂನು ಬಾಹಿರ. ಏಕೆಂದರೆ ಲೆಫ್ಟಿನೆಂಟ್ ಗವರ್ನರ್ ಪೂರ್ವಾನುಮತಿ ಇಲ್ಲದೇ ತನಿಖೆಗೆ ಆದೇಶಿಸಲಾಗಿದೆ. ಇದೇ ವೇಳೆ ರಾಜ್ಯಪಾಲರ ಅನುಮೋದನೆ ಇಲ್ಲದೇ ಕೇಜ್ರಿವಾಲ್ ಸರಕಾರ ಕೈಗೊಂಡ ಅನೇಕ ಮಹತ್ವದ ಕ್ರಮಗಳನ್ನೂ ಹೈಕೋರ್ಟ್ ರದ್ದುಗೊಳಿಸಿದೆ.
- ದೆಹಲಿ ಹೈಕೋರ್ಟ್ ತನ್ನ ತೀರ್ಪನ್ನು ಸಂವಿಧಾನದ ಪರಿಚ್ಛೇದ 239 ಮತ್ತು 239ಎಎ ಆಧಾರಿಸಿ ಪ್ರಕಟಿಸಿದೆ.

**ಪರಿಚ್ಛೇದ 239:**

- ಸಂವಿಧಾನದ ಪರಿಚ್ಛೇದ 239ರ ಪ್ರಕಾರ ಕೇಂದ್ರಾಡಳಿತ ಪ್ರದೇಶಗಳು ನೇರವಾಗಿ ರಾಷ್ಟ್ರಪತಿ ಆಡಳಿತದಲ್ಲಿ ಇರಲಿವೆ. ರಾಷ್ಟ್ರಪತಿಯವರು ತಮ್ಮ ಅಧಿಕಾರವನ್ನು ತಾನು ನೇಮಕಮಾಡಿದ ಅಡ್ಮಿನಿಸ್ಟ್ರೇಟರ್/ಲೆಫ್ಟಿನೆಂಟ್ ಗವರ್ನರ್ ಮೂಲಕ ಚಲಾಯಿಸುತ್ತಾರೆ. ಈ ಪರಿಚ್ಛೇದ ರಾಷ್ಟ್ರಪತಿರವರಿಗೆ ಅಡ್ಮಿನಿಸ್ಟ್ರೇಟರ್/ಲೆಫ್ಟಿನೆಂಟ್ ಗವರ್ನರ್ ನೇಮಕ ಮಾಡುವ ಅಧಿಕಾರ ನೀಡಿದೆ.

**ಪರಿಚ್ಛೇದ 239ಎಎ:**

- ಈ ಪರಿಚ್ಛೇದವು ಕೇಂದ್ರಾಡಳಿತ ಪ್ರದೇಶವಾದ ದೆಹಲಿಯನ್ನು ನ್ಯಾಷನಲ್ ಕ್ಯಾಪಿಟಲ್ ಟೆರಿಟೊರಿ ಆಫ್ ದೆಹಲಿ ಎಂಬ ವಿಶೇಷ ಸ್ಥಾನಮಾನವನ್ನು ನೀಡಿದೆ. ದೆಹಲಿಯಲ್ಲಿ ವಿಧಾನಸಭೆ ರಚನೆಗೆ ಇದು ಅವಕಾಶ ನೀಡಿದ್ದು, ವಿಧಾನಸಭೆಯ ಸ್ಥಾನಗಳಿಗೆ ನೇರವಾಗಿ ಜನರಿಂದ ಚುನಾಯಿಸುವ ಅವಕಾಶ ಕಲ್ಪಿಸಿದೆ.

**<u>ಕಾರ್ಮಿಕ ಪರಿಹಾರ (ತಿದ್ದುಪಡಿ) ಮಸೂದೆ-2016ಗೆ ಲೋಕಸಭೆ ಅನುಮೋದನೆ</u>**

ಕಾರ್ಮಿಕರಿಗೆ ಪರಿಹಾರ ಒದಗಿಸುವ ವೇಳೆ ಉದ್ಭವಿಸುವ ಕಾನೂನು ವಿವಾದಗಳನ್ನು ಕಡಿಮೆಗೊಳಿಸುವ 'ಕಾರ್ಮಿಕರ ಪರಿಹಾರ (ತಿದ್ದುಪಡಿ) ಮಸೂದೆ-2016ಗೆ ಲೋಕಸಭೆಯಲ್ಲಿ ಲೋಕಸಭೆಯಲ್ಲಿ ಸರ್ವಾನುಮತದಿಂದ ಅಂಗೀಕಾರ ನೀಡಲಾಗಿದೆ. ಈ ಮಸೂದೆಯು ಕಾರ್ಮಿಕ ಪರಿಹಾರ ಕಾಯಿದೆ-1923ಗೆ ತಿದ್ದುಪಡಿ ತರುವ ಸಲುವಾಗಿ ಮಂಡಿಸಲಾಗಿದೆ. ಈ ಕಾನೂನು ಔದ್ಯೋಗಿಕ ರೋಗಗಳು ಸೇರಿದಂತೆ ಕೈಗಾರಿಕಾ ಅಪಘಾತಗಳ ಮೂಲಕ ಗಾಯವಾದಾಗ ನೌಕರರು ಮತ್ತು ಅವರ ಅವಲಂಬಿತರಿಗೆ ಪರಿಹಾರದ ಪಾವತಿಯ ಒದಗಿಸುತ್ತದೆ.

- ಕಾಯಿದೆಯಡಿ ಸಂಸ್ಥೆಯೂ ತನ್ನ ಕಾರ್ಮಿಕರಿಗೆ ಕಾರ್ಮಿಕ ಪರಿಹಾರದ ಬಗ್ಗೆ ಮಾಹಿತಿ ನೀಡುವುದು ಕಡ್ಡಾಯ. ಮಾಹಿತಿಯನ್ನು ಹಿಂದಿ, ಇಂಗ್ಲೀಷ್ ಅಥವಾ ಸ್ಥಳೀಯ ಭಾಷೆಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವ ವೇಳೆ ನೀಡಬೇಕು.
- ಕಾರ್ಮಿಕ ಪರಿಹಾರದ ಬಗ್ಗೆ ಮಾಹಿತಿ ನೀಡದೆ ನಿರ್ಲಕ್ಷ್ಯವಹಿಸಿದರೆ ರೂ 50000 ದಿಂದ ರೂ 1 ಲಕ್ಷದವರೆಗೆ ದಂಡ ವಿಧಿಸಬಹುದಾಗಿದೆ.
- ಕಾರ್ಮಿಕ ಪರಿಹಾರ ಸಂಬಂಧಿಸಿದ ವಿವಾದವು ಈ ಮಸೂದೆಯಿಂದ ಕಾರ್ಮಿಕರ ಪರಿಹಾರಕ್ಕಾಗಿ ಕಾನೂನು ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ (ಹತ್ತು ಸಾವಿರ ರೂಪಾಯಿಗಳ) ಒಳಗಿದ್ದರೆ ಆಯಾ ರಾಜ್ಯಗಳ ವ್ಯಾಪ್ತಿಯಲ್ಲಿ ಆಯುಕ್ತರ ಮಟ್ಟದಲ್ಲಿ ಕಾನೂನು ಆಯೋಗಗಳನ್ನು ರಚಿಸಬಹುದಾಗಿದೆ. ಕೇಂದ್ರ ಸರ್ಕಾರ ತನಗೆ ಬೇಕೆನಿಸಿದಾಗ ಈ ಮೊತ್ತವನ್ನು ಹೆಚ್ಚಿಸಬಹುದು.

www.karunaduexams.com

- ಮೂಲ ಕಾಯಿದೆಯಲ್ಲಿ, ಸಂಸ್ಥೆಯು ಆಯುಕ್ತರ ಆದೇಶವನ್ನು ಹೈಕೋರ್ಟ್ನಲ್ಲಿ ಪ್ರಶ್ನಿಸಿದರೆ ನೌಕರನಿಗೆ ನೀಡಬೇಕಾದ ಪಾವತಿಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಬಹುದಾಗಿತ್ತು. ಆದರೆ ಈ ಅವಕಾಶವನ್ನು ಈಗ ಕೈಬಿಡಲಾಗಿದೆ.

**<u>ಸಾಮಾಜಿಕ ಪಿಡುಗಿನ ವಿರುದ್ಧ "ಕ್ವಿಟ್ ಇಂಡಿಯಾ 2 ಸ್ವರಾಜ್ಯ ನಿಂದ ಸುರಾಜ್ಯ" ಚಳುವಳಿಗೆ ಮಹಾರಾಷ್ಟ್ರದಲ್ಲಿ ಚಾಲನೆ</u>**

ಸಾಮಾಜಿಕ ಪಿಡುಗಗಳನ್ನು ತೊಲಗಿಸುವ ಸಲುವಾಗಿ "ಕ್ವಿಟ್ ಇಂಡಿಯಾ 2 ಸ್ವರಾಜ್ಯ ನಿಂದ ಸುರಾಜ್ಯ" ಚಳುವಳಿಗೆ ಮಹಾರಾಷ್ಟ್ರದಲ್ಲಿ ಚಾಲನೆ ನೀಡಲಾಯಿತು. ಮುಂಬೈನ ಐತಿಹಾಸಿಕ ಆಗಸ್ಟ್ ಕ್ರಾಂತಿ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಕ್ವಿಟ್ ಇಂಡಿಯಾ ಚಳುವಳಿಯ ಅಮೃತ ಮಹೋತ್ಸವ ಆಚರಣೆ ವೇಳೆ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮತ್ತು ಕೇಂದ್ರ ಸಚಿವ ವೆಂಕಯ್ಯನಾಡು ಚಾಲನೆ ನೀಡಿದರು.

- ಸ್ವತಂತ್ರ ಪೂರ್ವ ರಾಜಕೀಯ ವ್ಯವಸ್ಥೆಯನ್ನು ಸಮಕಾಲೀನ ರಾಜಕೀಯ ವ್ಯವಸ್ಥೆಗೆ ಹೋಲಿಕೆ ಮಾಡಿ, ಸಮಾಜದಲ್ಲಿರುವ ವಿವಿಧ ಸಾಮಾಜಿಕ ಪಿಡುಗುಗಳನ್ನು ತೊಳೆದು ಹಾಕುವುದು ಮತ್ತು ಸ್ವರಾಜ್ಯ ಅನ್ನು ಸುರಾಜ್ಯ ಆಗಿ ಪರಿವರ್ತಿಸುವ ಸಲುವಾಗಿ ಚಳುವಳಿಯನ್ನು ಹಮ್ಮಿಕೊಳ್ಳಲಾಗಿದೆ.
- ಸಾಮಾಜಿಕ ಅನಿಷ್ಟಗಳಾದ ರೈತರ ಆತ್ಮಹತ್ಯೆ, ಅನಕ್ಷರತೆ, ನೀರು ಪೋಲು, ಅಪೌಷ್ಟಿಕತೆ, ಯುವ ಜನತೆಗೆ ಅಂಟಿಕೊಂಡಿರುವ ಮಾದಕ ವಸ್ತುಗಳ ಚಟ ಮತ್ತು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಿ, ಎಲ್ಲಾ ರಂಗದಲ್ಲೂ ಸಮಗ್ರ ಅಭಿವೃದ್ಧಿ ಹೊಂದುವ ಒತ್ತಾಸೆಯನ್ನು ಚಳುವಳಿ ಹೊಂದಿದೆ.
- ಇದೇ ವೇಳೆ ದೇಶದ ಸ್ವತಂತ್ರಕ್ಕಾಗಿ ಮಡಿದ ಮತ್ತು ಅಭಿವೃದ್ಧಿಗಾಗಿ ದುಡಿದ ನಾಯಕರುಗಳನ್ನು ಸಮಾರಂಭದಲ್ಲಿ ಸ್ಮರಿಸಲಾಯಿತು.

**<u>ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷರಾಗಿ ಕೆ.ಎಂ.ಹನುಮಂತರಾಯಪ್ಪ ಅಧಿಕಾರ ಸ್ವೀಕಾರ</u>**

ಕೇಂದ್ರ ರೇಷ್ಮೆ ಮಂಡಳಿಯ ಅಧ್ಯಕ್ಷರಾಗಿ ಕೆ.ಎಂ.ಹನುಮಂತರಾಯಪ್ಪ ಅಧಿಕಾರ ಸ್ವೀಕರಿಸಿದರು. ಹನುಮಂತರಾಯಪ್ಪ ಅವರು ರೇಷ್ಮೆ ಮಂಡಳಿಯ 25ನೇ ಅಧ್ಯಕ್ಷರಾಗಿದ್ದಾರೆ. ಇವರು ಮೂರು ವರ್ಷಗಳ ಕಾಲ ಅಧ್ಯಕ್ಷ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ.

**ಕೆ.ಎಂ.ಹನುಮಂತರಾಯಪ್ಪ ಬಗ್ಗೆ:**

- ಕೆ.ಎಂ.ಹನುಮಂತರಾಯಪ್ಪ ಅವರು ವೃತ್ತಿಯಲ್ಲಿ ರೇಷ್ಮೆ ಬೆಳೆಗಾರ ಹಾಗೂ ನೇಕಾರ. ರೇಷ್ಮೆ ನಗರ ಎಂದೇ ಖ್ಯಾತಿ ಹೊಂದಿರುವ ಕರ್ನಾಟಕದ ದೊಡ್ಡಬಳ್ಳಾಪುರ ಮೂಲದವರು.
- ಬಿಜೆಪಿ ಪಕ್ಷದ ಹಿರಿಯ ನಾಯಕರು ಆಗಿರುವ ಇವರು, ಕರ್ನಾಟಕ ನೇಕಾರ ಹೋರಾಟ ಸಮಿಯ ಅಧ್ಯಕ್ಷರು ಸಹ ಆಗಿದ್ದಾರೆ.
- ಈ ಮುಂಚೆ ಇವರು 2000 ರಿಂದ 2002 ಅವಧಿಯಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಸದಸ್ಯರಾಗಿದ್ದರು. 2010 ರಿಂದ 2013 ರವರೆಗೆ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದರು. ಕರ್ನಾಟಕ ಸರ್ಕಾರದಿಂದ ಇವರು ಉತ್ತಮ ಕೃಷಿಕಾರ ಪ್ರಶಸ್ತಿಯನ್ನು ಇವರು ಪಡೆದಿದ್ದಾರೆ.

www.karunaduexams.com

**ಕೇಂದ್ರ ರೇಷ್ಮೆ ಮಂಡಳಿ ಬಗ್ಗೆ:**

- ಕೇಂದ್ರ ರೇಷ್ಮೆ ಮಂಡಳಿ ಶಾಸನಬದ್ಧ ಸಂಸ್ಥೆಯಾಗಿದ್ದು, ಕೇಂದ್ರ ರೇಷ್ಮೆ ಮಂಡಳಿ ಕಾಯಿದೆ-1948 ರಡಿ ಸ್ಥಾಪಿಸಲಾಗಿದೆ.
- ಕೇಂದ್ರ ಜವಳಿ ಸಚಿವಾಲಯದಡಿ ಇದು ಕಾರ್ಯನಿರ್ವಹಿಸುತ್ತಿದೆ.
- ದೇಶದಲ್ಲಿ ರೇಷ್ಮೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ರಚಿಸಲಾದ ರಾಷ್ಟ್ರಮಟ್ಟದ ಸಂಸ್ಥೆಯಾಗಿದೆ.

**ಇ-ಕಾಮರ್ಸ್ ನಿಯಮ ಪರಾಮರ್ಶಿಸಲು ಅಮಿತಾಭ್ ಕಾಂತ್ ಸಮಿತಿ ರಚಿಸಿದ ಕೇಂದ್ರ ಸರ್ಕಾರ**

ಇ-ಕಾಮರ್ಸ್ (ಆನ್ ಲೈನ್ ವಹಿವಾಟು) ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಿರುವುದು ಸೇರಿದಂತೆ ಇತರೆ ಎಲ್ಲ ವಿವಾದಾತ್ಮಕ ವಿಷಯಗಳನ್ನು ಪರಾಮರ್ಶಿಸಲು ಕೇಂದ್ರ ಸರ್ಕಾರವು ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಿದೆ. ನೀತಿ ಆಯೋಗದ ಸಿಇಒ ಅಮಿತಾಭ್ ಕಾಂತ್ ಸಮಿತಿಯ ಅಧ್ಯಕ್ಷರಾಗಿರಲಿದ್ದಾರೆ. ವಾಣಿಜ್ಯ, ಕೈಗಾರಿಕೆ, ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಸಚಿವಾಲಯಗಳ ಅಧಿಕಾರಿಗಳು ಸಮಿತಿಯಲ್ಲಿ ಇರಲಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ನಾಲ್ಕು ರಾಜ್ಯಗಳ ಪ್ರತಿನಿಧಿಗಳೂ ಸಮಿತಿಯ ಸದಸ್ಯರಾಗಿರಲಿದ್ದಾರೆ.

ಸಮಿತಿಯ ರಚನೆಯ ಉದ್ದೇಶ:

- ಇ-ವಾಣಿಜ್ಯ ಕ್ಷೇತ್ರದ ವಿವಿಧ ಸಮಸ್ಯೆಗಳ ಪರಿಶೀಲನೆ.ಮತ್ತು ನೀತಿಯನ್ನು ಮತ್ತಷ್ಟು ಉದಾರೀಕರಣಗೊಳಿಸಲು ಶಿಫಾರಸುಗಳನ್ನು ಮಾಡುವುದು.
- ದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ ಇ-ವಾಣಿಜ್ಯ ಉದ್ಯಮದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಲಾಭ-ನಷ್ಟಗಳ ಪರಾಮರ್ಶಿಸುವುದು.

ಆನ್ ಲೈನ್ ಮೂಲಕ ಔಷಧಗಳ ಮಾರಾಟ ಸೇರಿದಂತೆ ಹಲವು ರಾಜ್ಯಗಳಲ್ಲಿ ತೆರಿಗೆ ಸಂಬಂಧಿತ ಸಮಸ್ಯೆಗಳನ್ನು ಇ-ಕಾಮರ್ಸ್ ಸಂಸ್ಥೆಗಳು ಎದುರಿಸುತ್ತಿವೆ. ಆಹಾರ ಸಂಸ್ಕರಣೆ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ(ಎಫ್ಡಿಐ) ಮಿತಿಯನ್ನು ಕೇಂದ್ರ ಸರ್ಕಾರವು ಇತ್ತೀಚೆಗೆ ಶೇ 100ಕ್ಕೆ ಹೆಚ್ಚಿಸಿರುವುದರಿಂದ ಈ ಸಮಿತಿ ರಚನೆಗೆ ಮಹತ್ವ ಪ್ರಾಪ್ತವಾಗಿದೆ.

**ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ-2016ಗೆ ಸಂಸತ್ತು ಅನುಮೋದನೆ**

ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ-2016 ಸಂಸತ್ತಿನಲ್ಲಿ ಅನುಮೋದನೆಗೊಂಡಿದೆ. ಈ ಮಸೂದೆಯಿಂದ ಈಶಾನ್ಯ ರಾಜ್ಯಗಳಲ್ಲಿ ಪಶುಸಂಗೋಪನೆ ಕ್ಷೇತ್ರದಲ್ಲಿ ಉತ್ತಮ ಬೆಳವಣಿಗೆ ಕಾಣಲು ಅನುಕೂಲವಾಗಲಿದೆ. ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ ಕಾಯಿದೆ-1992ಗೆ ತಿದ್ದುಪಡಿಯನ್ನು ತರುವ ಮೂಲಕ, ನಾಗಲ್ಯಾಂಡ್ ರಾಜ್ಯವನ್ನು ಇಂಫಾಲ ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಗೆ ಸೇರಿಸುವ ಸಲುವಾಗಿ ಈ ಮಸೂದೆಯನ್ನು ಮಂಡಿಸಲಾಗಿದೆ.

- ಈ ತಿದ್ದುಪಡಿಯಿಂದ ನಾಗಲ್ಯಾಂಡ್ ರಾಜ್ಯವು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇಂಫಾಲ ಕೃಷಿ ವಿಶ್ವವಿದ್ಯಾಲಯದಡಿ ಅನುಕೂಲ ಪಡೆಯಲು ಸಹಾಯವಾಗಲಿದೆ.
- ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ ಕಾಯಿದೆ-1992ರ ಅನ್ವಯ ಈಶಾನ್ಯ ವಲಯದಲ್ಲಿ ಕೃಷಿ ಮತ್ತು ಕೃಷಿಯೇತರ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳಲು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಅವಕಾಶ ಕಲ್ಪಿಸಿಲಾಗಿದೆ.
- ಕಾಯಿದೆ ಅನ್ವಯ ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ ಈಶಾನ್ಯ ರಾಜ್ಯಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಬೋಧನೆ ಮತ್ತು ಸಂಶೋಧನೆ ಕೈಗೊಳ್ಳುವ ಜವಬ್ಧಾರಿಯನ್ನು ಹೊಂದಿದೆ.

www.karunaduexams.com

- ಈ ಹಿಂದೆ ಕಾಯಿದೆಯಡಿ ಈಶಾನ್ಯ ವಲಯ ಎಂದರೆ ಮಣಿಪುರ, ಮೇಘಾಲಯ, ಅರುಣಾಚಲ ಪ್ರದೇಶ, ಮಿಜೋರಾಂ, ಸಿಕ್ಕಿಂ ಮತ್ತು ತ್ರಿಪುರ ರಾಜ್ಯಗಳನ್ನು ಒಳಗೊಂಡ ಪ್ರದೇಶವೆಂದು ವ್ಯಾಖ್ಯಾನಿಸಲಾಗಿತ್ತು.

**ರೈಲ್ವೆ ಬಜೆಟ್ ಅನ್ನು ಕೇಂದ್ರ ಬಜೆಟ್ ನೊಂದಿಗೆ ವಿಲೀನಗೊಳಿಸಲು ಕೇಂದ್ರ ನಿರ್ಧಾರ**

ಮುಂದಿನ ವರ್ಷದಿಂದ ಪ್ರತ್ಯೇಕ ರೈಲ್ವೆ ಬಜೆಟ್ ಮಂಡಿಸಿದೆ ಕೇಂದ್ರ ಬಜೆಟ್ ನೊಂದಿಗೆ ವಿಲೀನಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಪ್ರತ್ಯೇಕ ರೈಲ್ವೆ ಬಜೆಟ್ ಮಂಡನೆ ಮಾಡುವುದು ಸೂಕ್ತವಲ್ಲವೆಂದು ಮತ್ತು ಕೇಂದ್ರ ಬಜೆಟ್ ನಲ್ಲಿ ಸೇರ್ಪಡೆಗೊಳಿಸಲು ಸಚಿವ ಸುರೇಶ್‌ಪ್ರಭು ಪ್ರಧಾನಿಯವರಿಗೆ ಮನವಿ ಮಾಡಿದ್ದರು. ರೈಲ್ವೆ ಬಜೆಟ್ ಅನ್ನು ಕೈಬಿಡುವ ಸಲುವಾಗಿ ಅಧ್ಯಯನ ನಡೆಸಿ ವರದಿ ನೀಡುವಂತೆ 5 ಮಂದಿ ಉನ್ನತಾಧಿಕಾರಿಗಳ ಸಮಿತಿ ರಚನೆ ಮಾಡಲಾಗಿತ್ತು.

ಹಿನ್ನಲೆ:

- ಭಾರತದಲ್ಲಿ ರೈಲ್ವೆ ಬಜೆಟ್ ಅನ್ನು 1924 ರಿಂದ ಪ್ರತ್ಯೇಕವಾಗಿ ಮಂಡಿಸಲಾಗುತ್ತಿದೆ. ಬ್ರಿಟಿಷ್ ರೈಲ್ವೆ ಎಕನಾಮಿಸ್ಟ್ ಅಕ್-ವರ್ಥ್ ನೇತೃತ್ವದ 10 ಜನ ಸದಸ್ಯರನ್ನೊಳಗೊಂಡ ಸಮಿತಿ ರೈಲ್ವೆ ಬಜೆಟ್ ಅನ್ನು ಪ್ರತ್ಯೇಕ ಮಂಡಿಸುವಂತೆ ಬ್ರಿಟಿಷ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಅದರಂತೆ 1924ರಲ್ಲಿ ಮೊಟ್ಟ ಮೊದಲ ಬಾರಿಗೆ ರೈಲ್ವೆ ಬಜೆಟ್ ಮಂಡನೆಗೆ ಅಂದಿನ ಬ್ರಿಟಿಷ್ ಸರ್ಕಾರ ಸಮ್ಮತಿ ನೀಡಿತ್ತು.
- ಭಾರತ ಸ್ವಾತಂತ್ರಗೊಂಡ ನಂತರವೂ ರೈಲ್ವೆ ಬಜೆಟ್ ಅನ್ನು ಸಾಮಾನ್ಯ ಬಜೆಟ್ ನಂತರವೇ ಮಂಡನೆ ಮಾಡುಲಾಗುತ್ತದೆ. ಇದು ಕಳೆದ 70 ವರ್ಷಗಳಿಂದಲೂ ಸಂಪ್ರದಾಯದಂತೆ ನಡೆದುಕೊಂಡು ಬಂದಿತ್ತು.
- ಜಾನ್ ಮಥಾಯ್ ಅವರು ರೈಲ್ವೆ ಬಜೆಟ್ ಮಂಡಿಸಿದ ಮೊದಲಿಗರು.

**10 ನಗರಗಳಲ್ಲಿ ಮೊದಲ ಹಂತದ ಸ್ಮಾರ್ಟ್ ಗಂಗಾ ನಗರ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಚಾಲನೆ**

ಮೊದಲ ಹಂತದ ಸ್ಮಾರ್ಟ್ ಗಂಗಾ ನಗರ ಕಾರ್ಯಕ್ರಮವನ್ನು ಗಂಗಾ ನದಿಯ ದಡದ ಮೇಲಿರುವ 10 ನಗರಗಳಲ್ಲಿ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಕೇಂದ್ರ ನಗರಾಭಿವೃದ್ಧಿ ಸಚಿವ ವೆಂಕಯ್ಯನಾಯ್ಡು ಮತ್ತು ಕೇಂದ್ರ ಜಲ ಸಂಪನ್ಮೂಲ ಸಚಿವೆ ಉಮಾ ಭಾರತಿ ಮೊದಲ ಹಂತದ ಕಾರ್ಯಕ್ರಮವನ್ನು ಜಂಟಿಯಾಗಿ ಉದ್ಘಾಟಿಸಿದರು.

**10 ನಗರಗಳು**:

- ಹರಿದ್ವಾರ, ರಿಷಿಕೇಶ್, ಮಥುರಾ, ವಾರಾಣಾಸಿ, ಕಾನ್ಪುರ, ಅಲಹಬಾದ್, ಲಕ್ನೋ, ಪಾಟ್ನಾ, ಸಾಹೀಬ್ ಗಂಜ್ ಮತ್ತು ಬಾರಕ್ ಪುರ.
- ಈ ಕಾರ್ಯಕ್ರಮದಡಿ ನಗರಗಳಲ್ಲಿ ಕೊಳಚೆ ನೀರು ಶುದ್ದೀಕರಣ ಘಟಕ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಸರ್ಕಾರಿ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುವುದು.
- ಇದಕ್ಕೆ ತಗಲುವ ವೆಚ್ಚದ ಶೇ 40% ಕೇಂದ್ರ ಸರ್ಕಾರ ಭರಿಸಲಿದ್ದು, ಉಳಿದ ಮೊತ್ತವನ್ನು ಒಪ್ಪಂದ ಮಾಡಿಕೊಂಡ ಖಾಸಗಿ ಸಂಸ್ಥೆ ಭರಿಸಲಿದೆ.

www.karunaduexams.com

## ಪೋಸ್ಕೋ (POSCO) ಇ-ಬಾಕ್ಸ್ ಗೆ ಕೇಂದ್ರ ಸರ್ಕಾರದಿಂದ ಚಾಲನೆ

ಲೈಂಗಿಕ ಶೋಷಣೆಯಿಂದ ಮಕ್ಕಳನ್ನು ರಕ್ಷಿಸುವ ಸಲುವಾಗಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಇ-ಬಾಕ್ಸ್ ವ್ಯವಸ್ಥೆಗೆ ನವದೆಹಲಿಯಲ್ಲಿ ಚಾಲನೆ ನೀಡಿದೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮೇನಕಾ ಗಾಂಧಿ ಅವರು ಈ ವ್ಯವಸ್ಥೆಗೆ ಚಾಲನೆ ನೀಡಿದರು.

**ಇ-ಬಾಕ್ಸ್ ಬಗ್ಗೆ:**

- ಇ-ಬಾಕ್ಸ್ ಒಂದು ಆನ್ ಲೈನ್ ದೂರು ನಿರ್ವಹಣೆ ವ್ಯವಸ್ಥೆಯಾಗಿದ್ದು, ಮಕ್ಕಳ ಮೇಲಾಗುವ ಲೈಂಗಿಕ ಶೋಷಣೆಯ ದೂರನ್ನು ಸರಳವಾಗಿ ಮತ್ತು ನೇರವಾಗಿ ದಾಖಲಿಸಬಹುದಾಗಿದೆ. ಆ ಮೂಲಕ ಆರೋಪಿ ವಿರುದ್ದ ಪೊಸ್ಕೊ (Protection of Children from Sexual Offenses) ಕಾಯಿದೆ ಅಡಿ ಕ್ರಮ ಜರುಗಿಸಬಹುದು.
- ಮಕ್ಕಳ ಮೇಲಾಗುವ ಲೈಂಗಿಕ ಶೋಷಣೆಯ ದೂರನ್ನು ನೇರವಾಗಿ ಆಲ್ ಲೈನ್ನಲ್ಲಿ ದಾಖಲಿಸಲು ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗದ ಪ್ರಮುಖ ಕಾರ್ಯಕ್ರಮವಾಗಿದೆ.
- ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗದ ವೆಬ್ ಸೈಟ್ http://ncpcr.gov.in/. ನಲ್ಲಿ ಇ-ಬಾಕ್ಸ್ ಅಳವಡಿಸಲಾಗಿದೆ.
- ದೂರುದಾರರು ವೆಬ್ ಸೈಟ್ ಗೆ ತೆರಳಿ ಅಗತ್ಯವಾದ ಮಾಹಿತಿ ಅಂದರೆ ಹೆಸರು, ಮೊಬೈಲ್, ಇ-ಮೇಲ್ ವಿಳಾಸ ಮತ್ತು ಶೋಷಣೆ ವಿವರರನ್ನು ತುಂಬಿ ದೂರನ್ನು ದಾಖಲಿಸಬಹುದು.

## NBAGR ನಿಂದ ಒಂಬತ್ತು ಹೊಸ ತಳಿಯ ಜಾನುವಾರು ಮತ್ತು ಕೋಳಿ ನೋಂದಣಿ

ರಾಷ್ಟ್ರೀಯ ಜಾನುವಾರು ವಂಶವಾಹಿ ಸಂಪನ್ಮೂಲ (National Bureau of Animal Genetic Resources (NBAGR)) ಸಂಸ್ಥೆಯು ಒಂಬತ್ತು ಹೊಸ ಜಾನುವಾರು ಮತ್ತು ಕೋಳಿ ತಳಿಗಳನ್ನು ಗುರುತಿಸಿದ್ದು, ನೋಂದಣಿ ಮಾಡಿದೆ. ವೈಜ್ಞಾನಿಕವಾಗಿ ಲಭ್ಯವಾದ ದಾಖಲೆಗಳನ್ನು ಪರಿಶೀಲಿಸಿ ಹೊಸ ತಳಿಯನ್ನು ಗುರುತಿಸಲಾಗಿದೆ.

- ಒಂಬತ್ತು ಹೊಸ ತಳಿಯ ಜಾನುವಾರಗಳ ಪೈಕಿ ಒಂದು ಹಸು ತಳಿ, ಎರಡು ಮೇಕೆ ಮತ್ತು ಕುರಿ ತಳಿ, ಮೂರು ಹಂದಿ ತಳಿ ಮತ್ತು ಒಂದು ಕೋಳಿ ತಳಿ ಸೇರಿವೆ.
- ಉತ್ತರಖಂಡದ ಬದ್ರಿ ಹಸು (*Badri cow*), ತಮಿಳುನಾಡಿನ ಕೊಡಿ ಆಡು ಮೇಕೆ (*Kodi Adu goat*), ನಿಕೋಬರ್ ದ್ವೀಪ ಪ್ರದೇಶದ ಟೆರೆಸ್ಸಾ ಮೇಕೆ (*Teressa goat*), ಒಡಿಶಾದ ಕೆಂದ್ರಪಡ ಕುರಿ (*Kendrapada sheep*), ತಮಿಳುನಾಡಿನ ಚೆವಾದು ಕುರಿ (*Chevaadu sheep*), ನಿಕೋಬರ್ ದ್ವೀಪದ ನಿಕೋಬರಿ ಹಂದಿ (*Nicobari pig*), ನಾಗಲ್ಯಾಂಡ್ ನ ತೆನ್ಯಿ ವೊ ಹಂದಿ (*Tenyi Vo pig*), ಅಸ್ಸಾಂ ಡೂಮ್ ಹಂದಿ(*Doom pig*) ಮತ್ತು ಮಣಿಪುರದ ಕೌನಯೆನ್ ಕೋಳಿ(*Kaunayenchicken*) ಹೊಸದಾಗಿ ನೋಂದಣಿಯಾಗಿರುವ ತಳಿಗಳಾಗಿವೆ.
- ಇದರೊಂದಿಗೆ ಸ್ವದೇಶಿ ಜಾನುವಾರು ತಳಿಗಳ ಸಂಖ್ಯೆ 160 ತಲುಪಿದೆ. ಇದರಲ್ಲಿ 40 ಹಸು ತಳಿ, 13 ಎಮ್ಮೆ ತಳಿ, 26 ಮೇಕೆ ತಳಿ, 42 ಕುರಿ ತಳಿ, 6 ಕುದುರೆ ತಳಿ, 9 ಒಂಟೆ ತಳಿ, 6 ಹಂದಿ ತಳಿ, 1 ಕತ್ತೆ ಮತ್ತು 17 ಕೋಳಿ ತಳಿಗಳು ಒಳಗೊಂಡಿವೆ.

www.karunaduexams.com

**ನೋಂದಣಿಯ ಉದ್ದೇಶ**:

- ನಿರ್ದಿಷ್ಟ ಪ್ರದೇಶಕ್ಕೆ ಹೊಂದಿಕೊಂಡಿರುವ ಮತ್ತು ರೋಗ ನಿರೋಧಕ ಸಾಮರ್ಥ್ಯವಿರುವ ಸ್ವದೇಶಿ ತಳಿಗಳನ್ನು ನೋಂದಾಯಿಸಿಕೊಳ್ಳುವ ಮೂಲಕ ಸಂರಕ್ಷಿಸುವುದು ಪ್ರಮುಖ ಉದ್ದೇಶ. ಆ ಮೂಲಕ ಸ್ಥಳೀಯ ಜನತೆಗೆ ತಳಿ ಮಹತ್ವವನ್ನು ವಿವರಿಸಿ ವಿನಾಶವಾಗದಂತೆ ಕ್ರಮವಹಿಸಲು ಅನುಕೂಲವಾಗಲಿದೆ.

**ರಾಷ್ಟ್ರೀಯ ಜಾನುವಾರು ವಂಶವಾಹಿ ಸಂಪನ್ಮೂಲ ಸಂಸ್ಥೆ:**

- ರಾಷ್ಟ್ರೀಯ ಜಾನುವಾರು ವಂಶವಾಹಿ ಸಂಪನ್ಮೂಲ ಸಂಸ್ಥೆ ಹರಿಯಾಣದ ಕರ್ನಲ್ ನಲ್ಲಿದೆ. 1995 ರಲ್ಲಿ ಇದನ್ನು ಸ್ಥಾಪಿಸಲಾಗಿದೆ. ದೇಶದಲ್ಲಿ ಸ್ವದೇಶಿ ಜಾನುವಾರು ಮತ್ತು ಕೋಳಿ ತಳಿಗಳನ್ನು ಗುರುತಿಸುವುದು, ವಿಂಗಡಿಸುವುದು, ಮೌಲ್ಯಮಾಪನ ಮಾಡುವುದು ಮತ್ತು ಸಂರಕ್ಷಿಸುವುದು ಇದರ ಪ್ರಮುಖ ಕಾರ್ಯ.

**<u>ಬಾಡಿಗೆ ತಾಯ್ತನ ಮಸೂದೆ (Surrogacy Regulation Bill)ಮಂಡಿಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ</u>**

ಕೇಂದ್ರ ಸಚಿವ ಸಂಪುಟ ಬಾಡಿಗೆ ತಾಯ್ತನ ಕರಡು ಮಸೂದೆಗೆ ಸಮ್ಮತಿ ಸೂಚಿಸಿದೆ. ವಾಣಿಜ್ಯ ಉದ್ದೇಶಕ್ಕಾಗಿ ಬಾಡಿಗೆ ತಾಯ್ತನವನ್ನು ನಿಷೇಧಿಸುವುದು ಈ ಮಸೂದೆಯ ಪ್ರಮುಖ ಅಂಶವಾಗಿದೆ. ಬಾಡಿಗೆ ತಾಯಂದಿರ ಹಿತಾಸಕ್ತಿ ರಕ್ಷಿಸುವ ದೃಷ್ಟಿಯಿಂದ ಮಸೂದೆಯನ್ನು ಜಾರಿಗೆ ತರಲಾಗುತ್ತಿದೆ.

**ಮಸೂದೆಯ ಪ್ರಮುಖ ಅಂಶಗಳು**:

- ವಾಣಿಜ್ಯ ಉದ್ದೇಶಕ್ಕೆ ಬಳಸುವ ಬಾಡಿಗೆ ತಾಯ್ತನವನ್ನು ನಿಷೇಧಿಸಲಾಗಿದೆ ಹಾಗೂ ಮಕ್ಕಳಿಲ್ಲದ ದಂಪತಿಗಳು ಕಾನೂನಿನ ಮೇರೆಗೆ ತಾಯ್ತನ ಪಡೆಯಬಹುದು.
- ಕಾನೂನಾತ್ಮಕವಾಗಿ ವಿವಾಹವಾದವರು ಬಾಡಿಗೆ ತಾಯ್ತನವನ್ನು ಹೊಂದಬಹುದು. ಅಲ್ಲದೆ ಮಕ್ಕಳು ಹೊಂದುವ ದಂಪತಿಗಳಲ್ಲಿ ಒಬ್ಬರಾದರೂ ಮಕ್ಕಳಾಗದ ಬಗ್ಗೆ ವೈದ್ಯಕೀಯ ಪ್ರಮಾಣಪತ್ರ ಹೊಂದಿರಬೇಕು
- ಏಕ ಪೋಷಕ, ಪರಸ್ಪರ ಒಪ್ಪಿಗೆಯ ಜೋಡಿ(ಲೀವಿಂಗ್ ಪಾರ್ಟ್‌ನರ್ಸ್), ಸಲಿಂಗಕಾಮಿ ದಂಪತಿಗಳಿಗೆ ಬಾಡಿಗೆ ತಾಯ್ತನಕ್ಕೆ ಅವಕಾಶವಿಲ್ಲ.
- ಬಾಡಿಗೆ ತಾಯ್ತನ ಪಡೆಯಬೇಕಾದರೆ ದಂಪತಿಗಳು ವಿವಾಹವಾಗಿ ಕನಿಷ್ಠ 5 ವರ್ಷಗಳಾಗಿರಬೇಕು
- ದಂಪತಿಗಳು ಬಾಡಿಗೆ ತಾಯ್ತನವನ್ನು ತಮ್ಮ ಹತ್ತಿರದ ಸಂಬಂಧಿಕರಿಂದಲೇ(ಭಾರತೀಯ ನಾಗರಿಕರಾಗಿರಬೇಕು) ಪಡೆಯಬೇಕು.
- ವಿದೇಶಿಯರು ಮತ್ತು ಸಾಗರೋತ್ತರ ಭಾರತೀಯ ಪೌರತ್ವ (ಒಸಿಐ) ಕಾರ್ಡ್ ಹೊಂದಿರುವವರು ಭಾರತದಲ್ಲಿ ಈ ಸೇವೆ ಪಡೆಯುವಂತಿಲ್ಲ.
- ಮಗುವನ್ನು ಪಡೆದ ದಂಪತಿ ವೈದ್ಯಕೀಯ ವೆಚ್ಚವನ್ನು ಮಾತ್ರ ಭರಿಸಬೇಕು. ಬಾಡಿಗೆ ತಾಯಿಗೆ ಪರಿಹಾರ ರೂಪದಲ್ಲಿ ಯಾವುದೇ ಹಣ ನೀಡುವಂತಿಲ್ಲ.
- ನಿಯಮ ಉಲ್ಲಂಘಿಸುವವರಿಗೆ 10 ವರ್ಷಗಳವರೆಗೆ ಜೈಲು ಮತ್ತು ₹ 10 ಲಕ್ಷದವರೆಗೆ ದಂಡ.

www.karunaduexams.com

**ಉಪಯೋಗಗಳು**:

- ವಾಣಿಜ್ಯ ಉದ್ದೇಶಕ್ಕಾಗಿ ಬಾಡಿಗೆ ತಾಯ್ತನ ಮೇಲೆ ಸಂಪೂರ್ಣ ನಿಷೇಧ.
- ಬಾಡಿಗೆ ತಾಯ್ತನ ಸೇವೆ ಮೇಲೆ ಸಂಪೂರ್ಣ ನಿಯಂತ್ರಣ ಸಾಧ್ಯವಾಗಲಿದೆ.
- ಮಕ್ಕಳಲಿಲ್ಲದ ದಂಪತಿಗಳಿಗೆ ಮಕ್ಕಳನ್ನು ಪಡೆಯಲು ವರದಾನವೆನಿಸಲಿದೆ.
- ಬಾಡಿಗೆ ತಾಯ್ತನ ಹೆಸರಿನಲ್ಲಿ ದುಬಾರಿ ಹಣ ಪಡೆದು ಸುಲಿಗೆ ಮಾಡುವುದು ನಿಯಂತ್ರಣಕ್ಕೆ ಬರಲಿದೆ.

**ಹಿನ್ನಲೆ**:

ಭಾರತದಲ್ಲಿ ಬಾಡಿಗೆ ತಾಯಿ ಸೇವೆ ಪಡೆಯುವುದು ದೊಡ್ಡ ಉದ್ಯಮವಾಗಿ ಬೆಳೆದಿದ್ದು, ಇದರ ಮೇಲೆ ನಿಯಂತ್ರಣ ಹೇರುವ ಉದ್ದೇಶದೊಂದಿಗೆ ಕೇಂದ್ರ ಆರೋಗ್ಯ ಸಚಿವಾಲಯ ಕರಡು ಮಸೂದೆ ರೂಪಿಸಿದೆ. ಪ್ರಧಾನ ಮಂತ್ರಿಯವರ ಕಚೇರಿಯ ಕೋರಿಕೆಯಂತೆ ಸಚಿವರ ಉನ್ನತಾಧಿಕಾರ ಸಮಿತಿಯನ್ನು ನೇಮಿಸಲಾಗಿತ್ತು. ಈ ಸಮಿತಿ ಇತ್ತೀಚೆಗೆ ಕರಡು ಮಸೂದೆಯನ್ನು ಸಿದ್ಧಪಡಿಸಿತ್ತು. ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್, ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅಲ್ಲದೆ ವಾಣಿಜ್ಯ ಸಚಿವೆ ನಿರ್ಮಲಾ ಸೀತಾರಾಮನ್, ಆಹಾರ ಸಂಸ್ಕರಣ ಖಾತೆ ಸಚಿವೆ ಹರ್‌ಸಿಮ್ರತ್ ಕೌರ್ ಬಾದಲ್ ಅವರು ಸಮಿತಿಯಲ್ಲಿದ್ದರು. ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಬಾಡಿಗೆ ತಾಯ್ತನದ ಹೆಸರಿನಲ್ಲಿ ಮಹಿಳೆಯರ ಶೋಷಣೆ ನಡೆಯುತ್ತಿದೆ ಎಂಬುದನ್ನು ಒಪ್ಪಿಕೊಂಡಿದ್ದ ಸರ್ಕಾರ, ಬಾಡಿಗೆ ತಾಯ್ತನವನ್ನು ಕಾನೂನಿನ ಚೌಕಟ್ಟಿನಡಿ ತರಬೇಕು ಎಂದಿತ್ತು. ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶದ ಮಹಿಳೆಯರನ್ನು ಶೋಷಣೆಯಿಂದ ತಪ್ಪಿಸುವ ಉದ್ದೇಶದಿಂದ ವಿದೇಶಿಯರಿಗೆ ಭಾರತದಲ್ಲಿ ಬಾಡಿಗೆ ತಾಯಿ ಸೇವೆ ಪಡೆಯುವುದನ್ನು ಕರಡು ಮಸೂದೆ ನಿಷೇಧಿಸಿದೆ.

**<u>ಕೇಂದ್ರ ಸರ್ಕಾರದಿಂದ ದೃಷ್ಟಿ ಮಾಂದ್ಯರಿಗೆ "ಸುಗಮ್ಯ ಪುಸ್ತಕಾಲಯ" ಇ-ಲೈಬ್ರರಿಗೆ ಚಾಲನೆ</u>**

ದೃಷ್ಟಿ ಮಾಂದ್ಯ ಓದುಗರಿಗೆ ಅನುಕೂಲವಾಗುವ ಸಲುವಾಗಿ ಕೇಂದ್ರ ಸರ್ಕಾರ ಸುಗಮ್ಯ ಪುಸ್ತಕಾಲಯ ಎಂಬ ಇ-ಲೈಬ್ರರಿಯನ್ನು ಇತ್ತೀಚೆಗೆ ಆರಂಭಿಸಿದೆ. ಪ್ರಧಾನ ಮಂತ್ರಿ ಸುಗಮ್ಯ ಭಾರತ್ ಅಭಿಯಾನದಡಿ ಈ ವಿನೂತನ ಲೈಬ್ರಿರಿಯನ್ನು ಸ್ಥಾಪಿಸಲಾಗಿದೆ. ಕೇಂದ್ರ ಸಚಿವರುಗಳಾದ ರವಿ ಶಂಕರ್ ಪ್ರಸಾದ್, ಪ್ರಕಾಶ್ ಜಾವೇದಕರ್ ಮತ್ತು ಥಾವರ್ ಚೆಂದ್ ಗೆಹ್ಲೋಟ್ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಂಟಿಯಾಗಿ ಈ ಲೈಬ್ರರಿಗೆ ಚಾಲನೆ ನೀಡಿದರು.

**ಸುಗಮ್ಯ ಪುಸ್ತಕಾಲಯದ ಬಗ್ಗೆ:**

- ಸುಗಮ್ಯ ಪುಸ್ತಕಾಲಯ ಒಂದು ಆನ್ ಲೈನ್ ಲೈಬ್ರರಿಯಾಗಿದ್ದು, ದೃಷ್ಟಿ ಮಾಂದ್ಯ ಓದುಗರಿಗಾಗಿ ಸ್ಥಾಪಿಸಲಾಗಿದೆ. ಈ ಲೈಬ್ರರಿಯು ಹಲವು ಭಾಷೆಯ, ವಿಭಿನ್ನ ವಿಷಯಗಳ ಪುಸ್ತಕಗಳನ್ನು ಒಳಗೊಂಡಿದೆ.
- ಡೈಸಿ ಫೋರಂ ಆಫ್ ಇಂಡಿಯಾದ ಅಂಗ ಸಂಸ್ಥೆಯಾದ ನ್ಯಾಷನಲ್ ಇನ್ಸ್ ಟಿಟ್ಯೂಟ್ ಆಫ್ ವಿಷುಯಲಿ ಹ್ಯಾಂಡಿಕ್ಯಾಪ್ಡ್ ಮತ್ತು ಬುಕ್ ಶೇರ್ ಸಹಯೋಗದೊಂದಿಗೆ ಈ ಲೈಬ್ರರಿಯನ್ನು ಸ್ಥಾಪಿಸಲಾಗಿದೆ. ಟಿಸಿಎಸ್ ಅಕ್ಸೆಸ್ ಇದಕ್ಕೆ ನೆರವು ನೀಡಿದೆ.
- ಈ ಲೈಬ್ರರಿಯಲ್ಲಿ ದೃಷ್ಟಿ ಹೀನರು ಮತ್ತು ಇತರೆ ಮುದ್ರಣ ವಿಕಲಾಂಗರಿಗೆ ಸುಲಭವಾಗಿ ಓದಬಹುದಾದ ಪುಸ್ತಕಗಳು ಲಭ್ಯವಿರಲಿವೆ.
- ಸುಮಾರು 2 ಲಕ್ಷಕ್ಕೂ ಹೆಚ್ಚು ವಿವಿಧ ಭಾಷೆಯ ಪುಸ್ತಕಗಳು ಇಲ್ಲಿವೆ. ಜೊತೆಗೆ ದೇಶ ವಿದೇಶದ ವಿವಿಧ ಲೈಬ್ರರಿಗಳೊಂದಿಗೆ ಸಂಪರ್ಕ ಹೊಂದಿರಲಿದೆ.

www.karunaduexams.com

## ಕಾರ್ಡ್ ಪಾವತಿ ಉತ್ತೇಜನಕ್ಕೆ ಸಮಿತಿ ರಚಿಸಿದ ಕೇಂದ್ರ ಸರ್ಕಾರ

ದೇಶದಲ್ಲಿ ನಗದು ಪಾವತಿಯನ್ನು ಕಡಿಮೆಗೊಳಿಸಿ ಕಾರ್ಡ್ ಮೂಲಕ ಪಾವತಿಸುವ ವ್ಯವಸ್ಥೆಯನ್ನು ಉತ್ತೇಜಿಸಲು ಅಗತ್ಯ ಕ್ರಮಗಳನ್ನು ಶಿಫಾರಸ್ಸು ಮಾಡುವ ಸಲುವಾಗಿ ಕೇಂದ್ರ ಸರ್ಕಾರ 11 ಜನ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಿದೆ. ಮಾಜಿ ಹಣಕಾಸು ಕಾರ್ಯದರ್ಶಿ ಹಾಗೂ ಹಾಲಿ ನೀತಿ ಆಯೋಗದ ಸಾಮಾಜಿಕ ವಲಯಕ್ಕೆ ಪ್ರಧಾನ ಸಲಹೆಗಾರರಾಗಿರುವ ರತನ್ ಪಿ ವಟಲ್ ಅವರು ಸಮಿತಿಯ ಅಧ್ಯಕ್ಷರಾಗಿದ್ದಾರೆ.

**ಸಮಿತಿಯ ಹೊಣೆಗಾರಿಕೆ:**

- ಕಾರ್ಡ್ ಮತ್ತು ಡಿಜಿಟಲ್ ಕ್ಷೇತ್ರದ ಮೂಲಕ ಹಣ ಪಾವತಿಯನ್ನು ಉತ್ತೇಜಿಸಲು ಅಗತ್ಯವಿರುವ ಕ್ರಮಗಳನ್ನು ಶಿಫಾರಸ್ಸು ಮಾಡುವುದು.
- ಪ್ರಸ್ತುತ ದೇಶದಲ್ಲಿ ಚಾಲ್ತಿಯಲ್ಲಿರುವ ಪಾವತಿ ವ್ಯವಸ್ಥೆಯನ್ನು ಪರಾಮರ್ಶಿಸುವುದು ಮತ್ತು ಡಿಜಿಟಲ್ ಪೇಮೆಂಟ್ ಅನ್ನು ಪ್ರೋತ್ಸಾಹಿಸಲು ತೆಗೆದುಕೊಳ್ಳಬೇಕಿರುವ ಕ್ರಮಗಳನ್ನು ಶಿಫಾರಸ್ಸು ಮಾಡುವುದು.
- ಡಿಜಿಟಲ್ ಪೇಮೆಂಟ್ ಸಂಬಂಧಿಸಿದಂತೆ ಅಧ್ಯಯನ ನಡೆಸಿ, ಅಗತ್ಯವೆನಿಸಿದರೆ ಕಾನೂನು ತಿದ್ದುಪಡಿಗೆ ಶಿಫಾರಸ್ಸು ಮಾಡುವುದು.
- ಕಾರ್ಡ್ ಮತ್ತು ಡಿಜಿಟಲ್ ವ್ಯವಸ್ಥೆ ಮೂಲಕ ಪಾವತಿ ಮಾಡಲಾದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಡುವ ಮೂಲಕ ಗ್ರಾಹಕ ಮತ್ತು ವ್ಯಾಪಾರಸ್ಥರಿಗೆ ಮಾಹಿತಿ ಹಂಚಿಕೊಳ್ಳಲು ಸಹಾಯವಾಗುವ ಬಗ್ಗೆ ಅಧ್ಯಯನ ನಡೆಸುವುದು.
- ಕಾರ್ಡ್ ಮತ್ತು ಡಿಜಿಟಲ್ ವ್ಯವಹಾರಗಳ ದೃಢೀಕರಣಕ್ಕೆ ವಿಶಿಷ್ಟ ಗುರುತಿನ ಸಂಖ್ಯೆ ಅಥವಾ ಇತರೆ ಪುರಾವೆಗಳ ಬಗ್ಗೆ ಅಧ್ಯಯನ ನಡೆಸಿ ಶಿಫಾರಸ್ಸು ಮಾಡುವುದು.
- ಎಲ್ಲಾ ರೀತಿಯ ಕಾರ್ಡ್ ಮತ್ತು ಡಿಜಿಟಲ್ ಪಾವತಿ ಸ್ವೀಕೃತಿಗೆ ಏಕರೂಪದ ಗವಾಕ್ಷಿ ವ್ಯವಸ್ಥೆಯನ್ನು ಪರಿಚಯಿಸಲು ಪರಿಶೀಲನೆ ನಡೆಸಿ ವರದಿ ಸಲ್ಲಿಸುವುದು.

ಸಮಿತಿಯು ತನ್ನ ವರದಿಯನ್ನ ಒಂದು ವರ್ಷದೊಳಗೆ ಸಲ್ಲಿಸಲಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಡೆಪ್ಯೂಟಿ ಗವರ್ನರ್ ಎಚ್.ಆರ್.ಖಾನ್, ಭಾರತೀಯ ಬ್ಯಾಂಕ್ಗಳ ಒಕ್ಕೂಟದ ಅಧ್ಯಕ್ಷರು, ನಾಸ್ಕಂ ಅಧ್ಯಕ್ಷರು ಮತ್ತು ಕೇಂದ್ರ ನೇರ ತೆರಿಗೆ ಮಂಡಳಿ ಅಧ್ಯಕ್ಷರು ಸಮಿತಿಯ ಸದಸ್ಯರಾಗಿದ್ದಾರೆ.

**ಹಿನ್ನಲೆ:**

- ದೇಶದಲ್ಲಿ ಕಾರ್ಡ್ ಮತ್ತು ಡಿಜಿಟಲ್ ವ್ಯವಸ್ಥೆ ಮೂಲಕ ಪಾವತಿಯನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸಚಿವ ಸಂಪುಟ ಫೆಬ್ರವರಿ 2016 ರಲ್ಲಿ ಸಮಿತಿಯನ್ನು ರಚಿಸಲು ನಿರ್ಧರಿಸಿತ್ತು. ಕಾರ್ಡ್ ಮತ್ತು ಡಿಜಿಟಲ್ ಪಾವತಿ ಮೇಲೆ ವಿಧಿಸಲಾಗುವ ಮೇಲ್ತೆರಿಗೆ, ಸೇವಾ ಶುಲ್ಕ ಮತ್ತಿತರ ಶುಲ್ಕಗಳನ್ನು ರದ್ದುಗೊಳಿಸಲು ಸಚಿವ ಸಂಪುಟ ನಿರ್ಧರಿಸಿದೆ.

www.karunaduexams.com

## ವಿಜ್ಞಾನ-ತಂತ್ರಜ್ಞಾನ

**ಭಾರತೀಯ ವೈದ್ಯಕೀಯ ಮಂಡಳಿ (ತಿದ್ದುಪಡಿ) ಮಸೂದೆ -2016 ಗೆ ಅಂಗೀಕಾರ**

ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಮುಂದಿನ ವರ್ಷದಿಂದ ದೇಶದಾದ್ಯಂತ ಏಕರೂಪದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (NEET) ನಡೆಸುವ ಸಂಬಂಧ ಭಾರತೀಯ ವೈದ್ಯಕೀಯ ಮಂಡಳಿ (ತಿದ್ದುಪಡಿ) ಮಸೂದೆ-2016 ಮತ್ತು ದಂತ ತಜ್ಞರ ಮಸೂದೆ-2016 ಗಳಿಗೆ ಸಂಸತ್ತು ಅನುಮೋದನೆ ನೀಡಿದೆ. ಅಂಗೀಕಾರದ ಅನ್ವಯ ಭಾರತೀಯ ವೈದ್ಯಕೀಯ ಮಂಡಳಿ (ತಿದ್ದುಪಡಿ) ಸುಗ್ರೀವಾಜ್ಞೆ-2016 ರದ್ದುಗೊಳ್ಳಲಿದ್ದು, ತಿದ್ದುಪಡಿ ಮಸೂದೆಯ ನಿಬಂಧನೆಗಳು ಮೇ 24, 2016 ರಿಂದಲೇ ಅನ್ವಯಯಾಗಲಿವೆ.

**ಮಸೂದೆಯ ಪ್ರಮುಖ ಅಂಶಗಳು**:

- ಎಲ್ಲಾ ವೈದ್ಯಕೀಯ ಸಂಸ್ಥೆಗಳ ಪ್ರವೇಶಕ್ಕೆ ಏಕರೂಪದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ ಖಡ್ಡಾಯ. ಪದವಿಪೂರ್ವ ಮತ್ತು ಸ್ನಾತ್ತಕೋತ್ತರ ಪ್ರವೇಶಕ್ಕೂ ಇದು ಅನ್ವಯವಾಗಲಿದೆ.
- **ಹೊಸ ವ್ಯವಸ್ಥೆಯಡಿ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು ಎರಡಕ್ಕೂ ಇದು ಅನ್ವಯವಾಗಲಿದೆ.**
- ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಹಿಂದಿ, ಇಂಗ್ಲೀಷ್ ಮತ್ತು ಸ್ಥಳೀಯ ಭಾಷೆಯಲ್ಲೂ ಪ್ರವೇಶ ಪರೀಕ್ಷೆ ಬರೆಯುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.
- ಒಂದು ವೇಳೆ ಯಾವುದಾದರೂ ರಾಜ್ಯ NEET ಅಳವಡಿಸಿಕೊಳ್ಳದಿದ್ದಾರೆ, ಪರೀಕ್ಷೆಯು 2016-17ನೇ ಶೈಕ್ಷಣಿಕ ವರ್ಷದಲ್ಲಿ ಪದವಿಪೂರ್ವ ಮಟ್ಟದಲ್ಲಿ ಅನ್ವಯವಾಗುವುದಿಲ್ಲ.
- ಹೊಸ ಮಸೂದೆಯ ಅನ್ವಯ ಪರೀಕ್ಷೆ ನಡೆಸುವ ರೀತಿ, ಪರೀಕ್ಷೆ ನಡೆಸುವ ಪ್ರಾಧಿಕಾರ ಮತ್ತು ಹಿಂದಿ, ಇಂಗ್ಲೀಷ್ ಭಾಷೆಯನ್ನು ಹೊರತುಪಡಿಸಿ ಬೇರೆ ಯಾವ ಭಾಷೆಯಲ್ಲಿ ಪರೀಕ್ಷೆಯನ್ನು ನಡೆಸಬೇಕು ಎಂಬ ನಿರ್ಧಾರವನ್ನು ಭಾರತೀಯ ವೈದ್ಯಕೀಯ ಮಂಡಳಿಗೆ ಬಿಡಲಾಗಿದೆ.

**ದಂತ ತಜ್ಞರ (ತಿದ್ದುಪಡೆ) ಮಸೂದೆ-2016:**

- ದಂತ ತಜ್ಞರ (ತಿದ್ದುಪಡೆ) ಮಸೂದೆ-2016 ಸಂಸತ್ತು ಅನುಮೋದನೆ ನೀಡಿದೆ. ದಂತ ವೈದ್ಯಕೀಯ ಕಾಲೇಜುಗಳ ಪ್ರವೇಶ ಏಕರೂಪದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಗೆ ಈ ಮಸೂದೆ ಅವಕಾಶ ಕಲ್ಪಿಸಿದೆ.
- ಮಸೂದೆಯ ಅನ್ವಯ ದಂತ ತಜ್ಞರ ಕಾಯಿದೆ-1948 ಕ್ಕೆ ತಿದ್ದುಪಡಿ ತರಲಾಗುವುದು.

ಈ ಎರಡು ಮಸೂದೆಗಳ ಮೂಲಕ ದೇಶದಾದ್ಯಂತ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ಗಳ ಪ್ರವೇಶಕ್ಕೆ ಏಕರೂಪದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಜಾರಿಗೆ ತಂದು, ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದು ಭ್ರಷ್ಟಚಾರವನ್ನು ತಡೆಯುವುದಾಗಿದೆ. ಅಲ್ಲದೇ ಬಹು ವಿಧದ ಪರೀಕ್ಷೆಗಳಿಂದ ವಿದ್ಯಾರ್ಥಿಗಳಿಗೂ ಮುಕ್ತಿಸಿಗಲಿದೆ.

**ಕುಡಂಕುಳಂ ಅಣು ವಿದ್ಯುತ್ ಸ್ಥಾವರದ ಮೊದಲ ಘಟಕ ರಾಷ್ಟ್ರಕ್ಕೆ ಅರ್ಪಣೆ**

ರಷ್ಯಾದ ಸಹಯೋಗದೊಂದಿಗೆ ತಮಿಳುನಾಡಿನ ಕುಡಂಕುಳಂನಲ್ಲಿ ನಿರ್ಮಿಸಲಾದ ಅಣು ವಿದ್ಯುತ್ ಸ್ಥಾವರದ ಮೊದಲ ಘಟಕವನ್ನು ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹಾಗೂ ತಮಿಳುನಾಡು ಮುಖ್ಯಮಂತ್ರಿ ಲೋಕಾರ್ಪಣೆಗೊಳಿಸಿದರು. ನವದೆಹಲಿ ಮತ್ತು ಮಾಸ್ಕೋದಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಲೋಕಾರ್ಪಣೆ ಕಾರ್ಯ ನೆರವೇರಿಸಲಾಯಿತು. 1000 ಮೆಗಾ ವ್ಯಾಟ್ ಸಾಮರ್ಥ್ಯ ಮೂಲಕ ದೇಶದ ಅತಿ ದೊಡ್ಡ ಅಣು ವಿದ್ಯುತ್ ಉತ್ಪಾದನ ಘಟಕ ಇದಾಗಿದೆ.

- ತಮಿಳುನಾಡಿನ ತಿರುನೆಲ್ವೆಲಿ ಜಿಲ್ಲೆಯಲ್ಲಿರುವ ಈ ಘಟಕವನ್ನು 1988ರ ಭಾರತ-ರಷ್ಯಾ ಅಣು ಒಪ್ಪಂದದಡಿಯಲ್ಲಿ ಸ್ಥಾಪಿಸಲಾಗಿದೆ.
- PWR (Pressurized Water Technology) ತಂತ್ರಜ್ಞಾನ ಬಳಸಿ ಸ್ಥಾಪಿಸಲಾಗಿರುವ ದೇಶದ ಮೊದಲ ಅಣು ವಿದ್ಯುತ್ ಘಟಕ.
- ನ್ಯಾಷನಲ್ ಪವರ್ ಕಾರ್ಪೋರೇಷನ್ ಆಫ್ ಇಂಡಿಯಾ ಮತ್ತು ರಷ್ಯಾದ ಅಟಂಸ್ಟೋರೆ ಎಕ್ಸಪೋರ್ಟ್ ಜಂಟಿಯಾಗಿ ವಿದ್ಯುತ್ ಘಟಕದ ರಿಯಾಕ್ಟರ್ ಗಳನ್ನು ಅಭಿವೃದ್ಧಿಪಡಿಸಿವೆ.
- ಈ ಅಣು ವಿದ್ಯುತ್ ಸ್ಥಾವರದ 1ನೆ ಘಟಕವು 2014ರಿಂದ ವಿದ್ಯುತ್ ಉತ್ಪಾದಿಸುತ್ತಿದ್ದು, 2013 ರಲ್ಲಿ ದಕ್ಷಿಣ ಗ್ರಿಡ್ ಗೆ ಸಂಪರ್ಕಿಸಲಾಗಿದೆ. ಇದುವರೆಗೆ ಘಟಕ ದಿಂದ 1 ಸಾವಿರ ಕೋಟಿ ಯುನಿಟ್ ವಿದ್ಯುದುತ್ಪಾದನೆಯಾಗಿದೆ.

**ಪ್ರಸೂತಿ ಕಾಯಿದೆ (ತಿದ್ದುಪಡಿ) ಮಸೂದೆ-2016 ಗೆ ರಾಜ್ಯಸಭೆ ಒಪ್ಪಿಗೆ**

ಮಹಿಳಾ ಕಾರ್ಮಿಕರ ಹೆರಿಗೆ ರಜೆಯನ್ನು 12 ವಾರದಿಂದ 26 ವಾರದವರೆಗೆ ವಿಸ್ತರಿಸಲು ಅವಕಾಶ ಮಾಡಿಕೊಡುವ ಪ್ರಸೂತಿ ಕಾಯ್ದೆ ತಿದ್ದುಪಡಿಗೆ (Maternity Benefit Amendment Bill) ರಾಜ್ಯಸಭೆಯಲ್ಲಿ ಅಂಗೀಕರಿಸಲಾಯಿತು. ಈ ಮಸೂದೆಯು ಪ್ರಸೂತಿ ಕಾಯಿದೆ-1961ಕ್ಕೆ ತಿದ್ದುಪಡಿ ತರಲಿದೆ. ಕಾಯಿದೆಯಡಿ ಗರ್ಭ ಧರಿಸಿದ ನಂತರ ಹಾಗೂ ಶಿಶು ಪಾಲನೆಗೆ ಗೈರಾಗುವ ದಿನದಲ್ಲಿ ಪೂರ್ಣ ಸಂಬಳ ಪಡೆಯಲು ಮಹಿಳೆಯರು ಅರ್ಹರಿದ್ದಾರೆ.

ಉದ್ದೇಶಿತ ತಿದ್ದುಪಡಿಗಳು:

- ಮೊದಲ ಎರಡು ಹೆರಿಗೆಗೆ ರಜೆ ಅವಧಿಯನ್ನು 12 ರಿಂದ 26 ವಾರಗಳಿಗೆ ಹೆಚ್ಚಳ, ನಂತರದ ಹೆರಿಗೆಗೆ 12 ವಾರ ರಜಗೆ ಅವಕಾಶ ನೀಡಲಾಗಿದೆ.
- ನವಜಾತ ಶಿಶುವನ್ನು ದತ್ತು ಪಡೆಯುವ ಮಹಿಳೆಯರು ಹಾಗೂ ಬಾಡಿಗೆ ತಾಯಂದರು (surrogacy)ಗಳಿಗೂ ಈ ತಿದ್ದುಪಡಿ ಅನ್ವಯವಾಗಲಿದ್ದು, 12 ವಾರಗಳ ರಜೆಗೆ ಅವಕಾಶ ಸಿಗಲಿದೆ.
- ಹೆರಿಗೆಯಾದ ಅವಧಿಯಲ್ಲಿ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಕಲ್ಪಿಸಲಾಗಿದೆ.
- 50 ಕ್ಕೂ ಹೆಚ್ಚು ನೌಕರರನ್ನು ಹೊಂದಿರುವ ಸಂಸ್ಥೆ ಅಥವಾ ಕಚೇರಿಗಳಿಗೆ ಈ ನಿಯಮ ಕಡ್ಡಾಯ.
- ಕಾಯ್ದೆ ತಿದ್ದುಪಡಿಯಿಂದ 1.8 ಕೋಟಿ ಉದ್ಯೋಗಸ್ಥ ಮಹಿಳೆಯರಿಗೆ ಸಹಾಯವಾಗಲಿದೆ.

www.karunaduexams.com

ಈ ಘಟಕದಲ್ಲಿ ಸುಮಾರು 1 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ. ಕುಡಂಕುಳಂ ಪರಮಾಣು ವಿದ್ಯುತ್ ಸ್ಥಾವರ ಆರಂಭಕ್ಕೆ ಅಣು ಶಕ್ತಿ ನಿಯಂತ್ರಣ ಆಯೋಗ (ಎಇಆರ್‌ಬಿ) ಹಸಿರು ನಿಶಾನೆ ತೋರಿತ್ತು.ಈ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ವಿರುದ್ಧ ಸಾಕಷ್ಟು ವಿರೋಧದವೂ ವ್ಯಕ್ತವಾಗಿತ್ತು.

ಕುಡಂಕುಳಂ ಅಣು ವಿದ್ಯುತ್ ಸ್ಥಾವರ ಘಟಕವನ್ನು ದೇಶಕ್ಕೆ ಸಮರ್ಪಿಸುವ ಮೂಲಕ ಭಾರತ ಮತ್ತು ರಷ್ಯಾ ನಡುವೆ ಮತ್ತೊಂದು ಐತಿಹಾಸಿಕ ಬೆಸುಗೆ ಏರ್ಪಟ್ಟಂತಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

**ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ AUSC ತಂತ್ರಜ್ಞಾನ ಅಭಿವೃದ್ಧಿ ಯೋಜನೆಗೆ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಒಪ್ಪಿಗೆ**

ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಅಡ್ವಾನ್ಸ್ಡ್ ಅಲ್ಟ್ರಾ ಸೂಪರ್ ಕ್ರಿಟಿಕಲ್ ಟೆಕ್ನಾಲಜಿಯನ್ನು ಅಭಿವೃದ್ದಿಪಡಿಸಲು ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆ ಪ್ರಸ್ತಾವನೆಗೆ ಕೇಂದ್ರ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಒಪ್ಪಿಗೆ ಸೂಚಿಸಿದೆ. ಈ ಯೋಜನೆಯ ಅಂದಾಜು ಮೊತ್ತ ರೂ 1554 ಕೋಟಿ. ಈ ಯೋಜನೆಯನ್ನು ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (BHEL) ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಲಿದ್ದು, ಇದಕ್ಕಾಗಿ ಒಂದೇ ಬಾರಿಗೆ ರೂ ೯೦೦ ಕೋಟಿಯನ್ನು ಕೇಂದ್ರ ಸರ್ಕಾರ ಬಿಡುಗಡೆಗೊಳಿಸಲಿದೆ.

**ಪ್ರಮುಖಾಂಶಗಳು:**

- ಈ ಯೋಜನೆಯಿಂದ ಸ್ಥಳೀಯ ಕೈಗಾರಿಕೆಗಳು ಸ್ವದೇಶಿ ತಂತ್ರಜ್ಞಾನ ಮತ್ತು ತಯಾರಿಕಾ ವಿಧಾನವನ್ನು ಬಳಸಿಕೊಂಡು ಸುರಕ್ಷಿತ ಮತ್ತು ಹೆಚ್ಚು ಕಾರ್ಯದಕ್ಷತೆ ಹೊಂದಿರುವ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರಗಳನ್ನು ವಿನ್ಯಾಸಗೊಳಿಸಲು ಸಾಧ್ಯವಾಗಲಿದೆ.
- ಇದೇ ಮೊದಲ ಬಾರಿಗೆ ಯಾವುದೇ ವಿದೇಶಿ ಕಂಪನಿಗಳ ಜೊತೆ ತಾಂತ್ರಿಕ ಸಹಾಯ ಮತ್ತು ತಂತ್ರಜ್ಞಾನ ಪರವಾನಗೆ ಒಪ್ಪಂದವಿಲ್ಲದೇ ದೊಡ್ಡ ವಿದ್ಯುತ್ ಸ್ಥಾವರಗಳಿಗೆ ಬೇಕಾಗುವ ಉಪಕರಣಗಳನ್ನು ಸುಧಾರಿತ ತಂತ್ರಜ್ಞಾನದಿಂದ ಅಭಿವೃದ್ಧಿಪಡಿಸಲಾಗುತ್ತಿದೆ.

**ಪರಿಸರಕ್ಕೆ ಆಗುವ ಅನುಕೂಲ:**

- ಸುಧಾರಿತ ಅಲ್ಟ್ರಾ ಸೂಪರ್ ಕ್ರಿಟಿಕಲ್ ತಂತ್ರಜ್ಞಾನ ಅಳವಡಿಕೆಯಿಂದ ವಿದ್ಯುತ್ ಸ್ಥಾವರಗಳಿಂದ ಬಿಡುಗಡೆಯಾಗುವ ಇಂಗಾಲದ ಡೈಆಕ್ಸೈಡ್ ಪ್ರಮಾಣ ಗಣನೀಯವಾಗಿ ತಗ್ಗಲಿದೆ. ಅಲ್ಲದೇ ಕಲ್ಲಿದ್ದಲ ಬಳಕೆ ಪ್ರಮಾಣ ಕೂಡ ಕಡಿಮೆಯಾಗಲಿದೆ. ಪ್ರಸ್ತುತ ಕಲ್ಲಿದ್ದಲಿನಿಂದ ವಿದ್ಯುತ್ ತಯಾರಿಸುವ ಪ್ರಕ್ರಿಯೆಯು ವಾತಾವರಣದಲ್ಲಿ ಶೇ 38 ಇಂಗಾಲದ ಡೈಆಕ್ಸೈಡ್ ಮಾಲಿನ್ಯಕ್ಕೆ ಕಾರಣವಾಗಿದೆ.

ಹಿನ್ನಲೆ:

- ಭವಿಷ್ಯದಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲ ಬಳಕೆ ಹಾಗೂ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯನ್ನು ಪ್ರಮಾಣ ಕಡಿಮೆಗೊಳಿಸುವುದಕ್ಕಾಗಿ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಸುಧಾರಿತ ಅಲ್ಟ್ರಾ ಸೂಪರ್ ಕ್ರಿಟಿಕಲ್ ತಂತ್ರಜ್ಞಾನ ಅಳವಡಿಸುವ ಸಲುವಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಾಗಿ ದೇಶದ ಮೂರು ಸರ್ಕಾರಿ ಸಂಸ್ಥೆಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದವು. ಆ ಮೂರು ಸಂಸ್ಥೆಗಳು ಮತ್ತು ಈ ಯೋಜನೆಗೆ ತೊಡಗಿಸಲಿರುವ ಮೊತ್ತ ಹೀಗಿದೆ.

www.karunadueams.com

ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (270 ಕೋಟಿ), ಇಂದಿರಾ ಗಾಂಧಿ ಸೆಂಟರ್ ಫಾರ್ ಅಟಾಮಿಕ್ ರಿಸರ್ಚ್ (234 ಕೋಟಿ) ಮತ್ತು ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಷನ್ (50 ಕೋಟಿ). ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಈ ಯೋಜನೆಗೆ ಕೈಜೋಡಿಸಲಿದ್ದು, 100 ರೂ ಕೋಟಿಯನ್ನು ಹೂಡಲಿದೆ. ಬಾಕಿ 900 ರೂ ಕೋಟಿಯನ್ನು ಡಿಪಾರ್ಟ್ ಮೆಂಟ್ ಆಫ್ ಹೆವಿ ಇಂಡಸ್ಟ್ರೀಸ್ ನೀಡಲಿದೆ.

**ಜಾರ್ಖಂಡ್ ನಲ್ಲಿ ದೇಶದ ಮೊದಲ ನಿಕ್ಕಲ್ (Nickel )ಉತ್ಪಾದನ ಘಟಕ ಸ್ಥಾಪನೆ**

ದೇಶದ ಮೊದಲ ನಿಕ್ಕಲ್ ಉತ್ಪಾದನ ಘಟಕವನ್ನು ಜಾರ್ಖಂಡ್ ನಲ್ಲಿ ಸ್ಥಾಪಿಸಲಾಗಿದೆ. ಜಾರ್ಖಂಡ್ ನ ಘಾಟ್ ಶಿಲದಲ್ಲಿರುವ ಹಿಂದೂಸ್ತಾನ್ ಕಾಪರ್ ಲಿಮಿಟೆಡ್ನ ಇಂಡಿಯನ್ ಕಾಪರ್ ಕಾಂಪ್ಲೆಕ್ಸ್ ನಲ್ಲಿ ಈ ಘಟಕ ಕಾರ್ಯರಂಭ ಮಾಡಿದೆ. ಈ ಹೊಸ ನಿಕ್ಕಲ್,ಕಾಪರ್ ಮತ್ತು ಆಮ್ಲ ಮರುಬಳಕೆ ಘಟಕದಲ್ಲಿ ತಯಾರಾಗಲಿರುವ ನಿಕ್ಕಲ್ ಲೋಹವು ಲಂಡನ್ ಮೆಟಲ್ ಎಕ್ಸ್ಚೇಂಜ್ ಗುಣಮಟ್ಟಕ್ಕೆ ಸಮನಾಗಿರಲಿದೆ.

- ಆರಂಭದಲ್ಲಿ ಈ ಘಟಕವು ವಾರ್ಷಿಕ 50 ಟನ್ ನಿಕ್ಕಲ್ ಲೋಹವನ್ನು ಉತ್ಪಾದಿಸಲಿದೆ. ಆದರೆ ಮುಂದಿನ ದಿನಗಳಲ್ಲಿ ಎಂಟು ಪಟ್ಟು ಹೆಚ್ಚು ನಿಕ್ಕಲ್ ಅನ್ನು ಇಲ್ಲಿ ಉತ್ಪಾದಿಸಲಾಗುವುದು.
- ಪರಿಸರ-ಸ್ನೇಹಿ ತಂತ್ರಜ್ಞಾನದ ಮೂಲಕ ಈ ಘಟಕ ಕಾರ್ಯನಿರ್ವಹಿಸಲಿದೆ. ಆ ಮೂಲಕ ಪರಿಸರ ಮಾಲಿನ್ಯ, ಸೀಸದ ಬಳಕೆ ಸೇರಿದಂತೆ ಘನ ತ್ಯಾಜ್ಯ ವಿಲೇವಾರಿ ಶೇ 75% ನಿವಾರಣೆಯಾಗಲಿದೆ.
- ಮಾಹಿತಿ ಪ್ರಕಾರ ಈ ಘಟಕವು ಕಡಿಮೆ ಇಂಧನ ಬಳಕೆ ಮಾಡಲಿದ್ದು, ಸುರಕ್ಷಿತ ಕೆಲಸದ ವಾತಾವರಣ ಹೊಂದಿದ್ದು, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಕೂಡ ಆಗಲಿದೆ.
- ಪ್ರಸ್ತುತ ಭಾರತದಲ್ಲಿ ವಾರ್ಷಿಕ 45,000 ಮೆಟ್ರಿಕ್ ಟನ್ ನಿಕ್ಕಲ್ ಬೇಡಿಕೆ ಇದೆ. ದೇಶದಲ್ಲಿ ನಿಕ್ಕಲ್ ಬೇಡಿಕೆಯನ್ನು ಆಮದಿನ ಮೂಲಕ ಪೂರೈಸಲಾಗುತ್ತಿದೆ. ಈ ಘಟಕದ ನಿರ್ಮಾಣದಿಂದ ಭಾರತ ನಿಕ್ಕಲ್ ಲೋಹಕ್ಕಾಗಿ ಪರದೇಶಗಳ ಮೇಲೆ ಅವಲಂಭಿತವಾಗುವುದು ತಪ್ಪಲಿದೆ.

**ಜಗತ್ತಿನ ಮೊದಲ ಕ್ವಾಂಟಮ್ ಸಂವಹನ ಉಪಗ್ರಹವನ್ನು ಉಡಾವಣೆ ಮಾಡಿದ "ಚೀನಾ"**

ವಿಶ್ವದ ಮೊಲದ ಕ್ವಾಂಟಮ್ ಉಪ್ರಗಹ ಕ್ವಾಂಟಮ್ ಎಕ್ಸ್‌ಪೆರಿಮೆಂಟ್ಸ್ ಅಟ್ ಸ್ಪೇಸ್ ಸ್ಕೇಲ್ (QUESS)ನ್ನು ಚೀನಾ ಈಚೆಗೆ ಯಶಸ್ವಿಯಾಗಿ ಉಡಾವಣೆ ಮಾಡಿದೆ. ಚೀನಾದ ಗನ್ಸುನಲ್ಲಿರುವ ಜಿಕ್ವಾನ್ ಉಪಗ್ರಹ ಉಡಾವಣ ಕೇಂದ್ರದಿಂದ ಈ ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಲಾಗಿದೆ.

ಈ ಉಪಗ್ರಹದ ಬಗ್ಗೆ:

- ಈ ಉಪಗ್ರಹಕ್ಕೆ ಮಿಸಿಯಸ್ ಎಂದು ಹೆಸರಿಡಲಾಗಿದೆ. ಮಿಸಿಯಸ್ ಚೀನಾದಲ್ಲಿ ಕ್ರಿ.ಪೂ. 5ನೇ ಶತಮಾನದಲ್ಲಿ ಬದುಕಿದ್ದ ತತ್ವಶಾಸ್ತ್ರಜ್ಞ ಹಾಗೂ ವಿಜ್ಞಾನಿ. ಮಾನವನ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಬೆಳಕಿನ ಪ್ರಯೋಗಗಳನ್ನು ನಡೆಸಿದವ ಎಂಬ ಖ್ಯಾತಿ ಇವರದು. ಬೆಳಕಿನ ವೇಗಕ್ಕಿಂತ ಮೀರಿದ ವೇಗದಲ್ಲಿ ಉಪಗ್ರಹ ಮತ್ತು ಭೂಮಿ ನಡುವೆ

www.karunaduexams.com

ಸಂದೇಶ ರವಾನೆ ಮಾಡಿ ಭೂ ಕೇಂದ್ರದಲ್ಲಿ ಸ್ವೀಕರಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಗುರಿಯೊಂದಿಗೆ ಈ ಉಪಗ್ರಹವನ್ನು ಅಭಿವೃದ್ಧಿಪಡಿಸಲಾಗಿದೆ.

- ಈ ಉಪಗ್ರಹದಿಂದ ಸ್ವೀಕರಿಸುವ ಮಾಹಿತಿಯನ್ನು ಕದಿಯಲು ಸಾಧ್ಯವೇ ಇಲ್ಲದೆ ಹ್ಯಾಕ್ ಪ್ರೂಫ್ ತಂತ್ರಜ್ಞಾನವನ್ನು ಇದು ಹೊಂದಿದೆ ಇಂತಹ ತಂತ್ರಜ್ಞಾನ ಅಭಿವೃದ್ಧಿಪಡಿಸಿದ ಮೊದಲ ದೇಶ ಚೀನಾ. ಕ್ವಾಂಟಮ್‌ಗಳ ಮೂಲಕ (ಫೋಟಾನ್ ಕಣ) ಮಾಹಿತಿಯನ್ನು ರವಾನಿಸುವುದರಿಂದ ನಕಲು ಮಾಡಲು ಅಥವಾ ಗೂಢಲಿಪಿ ಬಿಡಿಸಿ ಓದಲು ಸಾಧ್ಯವಿಲ್ಲ.

**<u>ವಿಶ್ವದ ಅತಿದೊಡ್ಡ ವಿಮಾನ "ಏರ್ ಲ್ಯಾಂಡರ್-10" ಪರೀಕ್ಷಾರ್ಥ ಹಾರಾಟ ಯಶಸ್ವಿ</u>**

ವಿಶ್ವದ ಅತಿದೊಡ್ಡ ವಿಮಾನ "ಏರ್ ಲ್ಯಾಂಡರ್-10 (Airlander-10)"ನ ಮೊದಲ ಪರೀಕ್ಷಾರ್ಥ ಹಾರಾಟವನ್ನು ಕೇಂದ್ರ ಇಂಗ್ಲೆಂಡ್‌ನ ಕಾರ್ಡಿಂಗ್ಟನ್ ವಾಯುನೆಲೆಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಸರಕು ಸಾಗಣೆ ಸೇರಿದಂತೆ ವಾಣಿಜ್ಯವಲಯದಲ್ಲೂ ಬಳಸಬಹುದಾದ ಈ ವಿಮಾನವನ್ನು ಯುನೈಟೆಡ್ ಕಿಂಗ್ಡಮ್ ನ ಹೈಬ್ರೀಡ್ ಏರ್ ವೆಹಿಕಲ್ಸ್ ಅಭಿವೃದ್ಧಿಪಡಿಸಿದೆ. ಇದೇ ಜಾಗದಲ್ಲಿ 86 ವರ್ಷಗಳ ಹಿಂದೆ ಅಂದರೆ 1930ರ ಅಕ್ಟೋಬರ್‌ನಲ್ಲಿ ಮೊಟ್ಟಮೊದಲ ಗಗನನೌಕೆ ಆರ್-101 ಹಾರಾಟ ನಡೆಸಲಾಗಿತ್ತು. ಆದರೆ ಈ ವಾಯುನೌಕೆ ಫ್ರಾನ್ಸ್‌ನಲ್ಲಿ ಅಪಘಾತಕ್ಕೀಡಾಗಿ 48 ಮಂದಿಯನ್ನು ಬಲಿ ಪಡೆದಿತ್ತು

**ಏರ್ ಲ್ಯಾಂಡರ್-10 ವಿಶೇಷತೆಗಳು:**

- ಏರ್ ಲ್ಯಾಂಡರ್-10 ಭಾಗಶಃ ವಿಮಾನ ಮತ್ತು ಭಾಗಶಃ ವಾಯುನೌಕೆಯಾಗಿದ್ದು, ಹೀಲಿಯಂ ಅನಿಲ ತುಂಬಲಾಗಿದೆ. ಏರ್‌ಲ್ಯಾಂಡರ್ 10 ವಿಮಾನ 92 ಮೀಟರ್ ಉದ್ದ ಮತ್ತು 43.5 ಮೀ ಅಗಲವಿದೆ.
- ಏರ್‌ಲ್ಯಾಂಡರ್ 4880 ಮೀಟರ್ ಎತ್ತರದವರೆಗೂ ಹಾರಬಲ್ಲದು ಮತ್ತು 148 ಕಿಲೋಮೀಟರ್ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ ಮತ್ತು 10 ಟನ್ ಭಾರವನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ.
- ಇದು ಗಾಳಿಯಲ್ಲಿ ಎರಡು ವಾರಗಳ ಕಾಲ ಮಾನವರಹಿತವಾಗಿ ತೇಲುವ ಮತ್ತು ಜನರು ಇರುವಾಗ ಐದು ದಿನಗಳ ಕಾಲ ಆಗಸದಲ್ಲಿ ತೇಲಾಡುವ ಸಾಮರ್ಥ್ಯ ಹೊಂದಿದೆ.
- ಅಮೆರಿಕನ್ ಸೇನೆಯ ಗಸ್ತು ವಿಮಾನವಾಗಿ ಈ ಏರ್‌ಲ್ಯಾಂಡರ್-10 ಅಭಿವೃದ್ಧಿಪಡಿಸಲಾಗಿತ್ತು ಆದರೆ ಈಗ ಉದ್ದೇಶವನ್ನು ಕೈಬಿಡಲಾಗಿದೆ. ಸರಕು ಸಾಗಾಣಿಕೆಯಂಥ ಉದ್ದೇಶಕ್ಕೆ ವಾಣಿಜ್ಯ ವಲಯದಲ್ಲೂ ಈ ವಿಮಾನವನ್ನು ಬಳಸಬಹುದಾಗಿದೆ.

**<u>ಕುಡಿಯುವ ನೀರಿನಲ್ಲಿ ವಿಷಕಾರಿ ಕ್ರೋಮಿಯಂ ಪತ್ತೆ ಹಚ್ಚಲು ಪೋರ್ಟಬಲ್ ಕಿಟ್ ಅಭಿವೃದ್ಧಿಪಡಿಸಿದ BARC</u>**

ಕುಡಿಯುವ ನೀರಿನಲ್ಲಿ ವಿಷಕಾರಿ ಹೆಕ್ಸಾವೆಲೆಂಟ್ ಕ್ರೋಮಿಯಂಯನ್ನು ಸ್ಥಳದಲ್ಲೇ ಪತ್ತೆ ಹಚ್ಚುವ ಪೋರ್ಟಬಲ್ (Portable) ಕಿಟ್‌ಅನ್ನು ಬಾಬಾ ಅಣು ಸಂಶೋಧನಾ ಸಂಸ್ಥೆ (BARC) ಅಭಿವೃದ್ಧಿಪಡಿಸಿದೆ. ಇದೊಂದು ಸರಳ, ಬಳಕೆದಾರ ಸ್ನೇಹಿ, ತ್ವರಿತವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಸ್ಥಳದಲ್ಲೇ ನೀರಿನ ಗುಣಮಟ್ಟವನ್ನು ಪರೀಕ್ಷಿಸುವ ಸಾಮರ್ಥ್ಯದಿಂದ ಕೂಡಿದೆ.

- ಕುಡಿಯುವ ನೀರು ಮತ್ತು ನೆಲ್ಲಿ ನೀರು, ನದಿಗಳು, ಸರೋವರಗಳು ಹಾಗೂ ಅಂತರ್ಜಲದಲ್ಲಿ ಕ್ರೋಮಿಯಂ ಮಟ್ಟವನ್ನು ಮಟ್ಟವನ್ನು ಸ್ಥಳದಲ್ಲೇ ಅಳೆಯುವ ಮೂಲಕ ಅಗತ್ಯ ಪರಿಹಾರ ಒದಗಿಸಲಿದೆ.
- ನೀರಿನ ಮಾದರಿಗೆ ನಿರ್ದಿಷ್ಟ ಪ್ರಮಾಣದ ನಿರ್ದಿಷ್ಟ ಕಾರಕಗಳನ್ನು ಸೇರಿಸಿ ಮತ್ತು ಬಣ್ಣದಲ್ಲಾಗುವ ಬದಲಾವಣೆಯನ್ನು ಗುರುತಿಸುವ ವಿಧಾನದ ಮೂಲಕ ಪರೀಕ್ಷಿಸಲಾಗುತ್ತದೆ.

- ಕೇವಲ ಐದು ನಿಮಿಷದಲ್ಲಿ ಬಣ್ಣದಲ್ಲಿ ಬದಲಾವಣೆಯಾಗಲಿದ್ದು, ಬರಿಗಣ್ಣಿನಿಂದ ನೋಡುವ ಮೂಲಕ ನೀರಿನ ಗುಣಮಟ್ಟವನ್ನು ತಿಳಿಯಬಹುದು. ಕಿಟ್ ಜೊತೆಗೆ ನೀಡಿರುವ ಕಲರ್ ಚಾರ್ಟ್ ನಿಂದ ಸುಲಭವಾಗಿ ಹೋಲಿಕೆ ಮಾಡಬಹುದಾಗಿದೆ. ಕಲರ್ ಚಾರ್ಟ್ ನೊಂದಿಗೆ ಹೋಲಿಕೆ ಮಾಡುವ ಮೂಲಕ ನೀರು ಕುಡಿಯಲು ಯೋಗ್ಯವಾಗಿದೆಯೋ ಅಥವಾ ವಿಷಯುಕ್ತವೊ ಎಂಬುದನ್ನು ಸ್ಥಳದಲ್ಲಿಯೇ ತಿಳಿಯಬಹುದು.

**ಈ ಕಿಟ್ನ ಉಪಯೋಗಗಳು:**

- ಸ್ಥಳದಲ್ಲಿಯೇ ನೀರಿನ ಮಾದರಿ ಪರೀಕ್ಷಿಸುವ ಸಾಮರ್ಥ್ಯ, ಯಾವುದೇ ಉಪಕರಣಗಳ ಅಗತ್ಯವಿಲ್ಲ, ಕಡಿಮೆ ಬಂಡವಾಳ, ಉತ್ತಮ ಫಲಿತಾಂಶ ಮತ್ತು ಸರಳ ಬಳಕೆ ವಿಧಾನ.

**ಹಿನ್ನಲೆ:**

- ಕ್ರೋಮಿಯಂ ವ್ಯಾಪಕವಾಗಿ ಉಕ್ಕು, ಚರ್ಮ, ಕ್ರೋಮ್ ಲೋಹ ಲೇಪ, ಬಣ್ಣ ತಯಾರಿಕೆ, ಮರದ ಸಂರಕ್ಷಣೆ ಮುಂತಾದ ವಿವಿಧ ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ. ಈ ಕೈಗಾರಿಕೆಗಳಿಂದ ಬರುವ ನೀರನ್ನು ಸಂಸ್ಕರಿಸಿದೆ ನೇರವಾಗಿ ಜಲಮೂಲಗಳಿಗೆ ಬಿಡುತ್ತಿರುವ ಕಾರಣ ನೀರಿನ ವ್ಯಾಪಕ ಮಾಲಿನ್ಯಕ್ಕೆ ಕಾರಣವಾಗುತ್ತಿದೆ.
- ಪರಿಸರದಲ್ಲಿ ಕ್ರೋಮಿಯಂ ಪ್ರಮುಖವಾಗಿ ತ್ರಿವೆಲೆಂಟ್ ಕ್ರೋಮಿಯಂ ಸಿಆರ್ (III) ಮತ್ತು ಹೆಕ್ಸಾವೆಲೆಂಟ್ ಕ್ರೋಮಿಯಂ CR (VI) ರೂಪದಲ್ಲಿ ಕಾಣಬಹುದಾಗಿದೆ. ಕ್ರೋಮಿಯಂ ಸಿಆರ್ (III)ಗೆ ಹೋಲಿಸಿದರೆ ಹೆಕ್ಸಾವೆಲೆಂಟ್ ಕ್ರೋಮಿಯಂ CR (VI) ಹೆಚ್ಚು ವಿಷಕಾರಿಯಾಗಿರುತ್ತದೆ.
- ವಿಶ್ವ ಆರೋಗ್ಯ ಸಂಸ್ಥೆ (WHO) ಹೆಕ್ಸಾವೆಲೆಂಟ್ ಕ್ರೋಮಿಯಂ CR (VI) ಕ್ಯಾನ್ಸರ್ ಕಾರಕ ಎಂದು ವರ್ಗೀಕರಿಸಲಾಗಿದ್ದು, ಹೊಟ್ಟೆ ಹುಣ್ಣು, ಕ್ಯಾನ್ಸರ್ ಮತ್ತು ಮೂತ್ರ ಪಿಂಡ ಮತ್ತು ಯಕೃತ್ತು ಸಂಬಂಧಿತ ಕಾಯಿಲೆಗೆ ಕಾರಣವಾಗುತ್ತದೆ.
- ಇಂಡಿಯನ್ ಸ್ಟಾಂಡರ್ಡ್ IS10500 ಪ್ರಕಾರ, ಕುಡಿಯುವ ನೀರಿನಲ್ಲಿ CR (VI) ಗರಿಷ್ಠ ಅನುಮತಿ ಸಾಂದ್ರತೆ ಪ್ರತಿ ಲೀಟರ್ಗೆ 50 ಮಿಲಿಗ್ರಾಂನಷ್ಟಿರಬೇಕು.

**<u>ದೇಶದ ಮೊದಲ ಸಮಗ್ರ" ಕ್ರೈಂ ಅಪರಾಧ ಪತ್ತೆ ಜಾಲ ವ್ಯವಸ್ಥೆ"ಗೆ ಮಹಾರಾಷ್ಟ್ರದಲ್ಲಿ ಚಾಲನೆ</u>**

ಭಾರತದ ಮೊದಲ ಸಮಗ್ರ ಕ್ರೈಂ ಅಪರಾಧ ಪತ್ತೆ ಜಾಲ ವ್ಯವಸ್ಥೆ (Crime Criminal Tracking Network System' (CCTNS))ಗೆ ಮಹಾರಾಷ್ಟ್ರದಲ್ಲಿ ಚಾಲನೆ ನೀಡಲಾಗಿದೆ. ಆ ಮೂಲಕ ಇಂತಹ ವ್ಯವಸ್ಥೆಯನ್ನು ಜಾರಿಗೊಳಿಸಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕಗೆ ಮಹಾರಾಷ್ಟ್ರ ಪಾತ್ರವಾಗಿದೆ. ತಡೆ ಇಲ್ಲದೆ ಹೆಚ್ಚುತ್ತಿರುವ ಸೈಬರ್ ಕ್ರೈಂಗಳನ್ನು ಮಟ್ಟಹಾಕುವ ಸಲುವಾಗಿ ರಾಜ್ಯದಾದ್ಯಂತ 34 ಸೈಬರ್ ಲ್ಯಾಬ್ ಗಳನ್ನು ಆರಂಭಿಸುವ ಮೂಲಕ ಈ ವ್ಯವಸ್ಥೆಯನ್ನು ಆರಂಭಿಸಲಾಯಿತು.

**CCTNS ಬಗ್ಗೆ:**

- ಪುಣೆ ಮೂಲದ ಸೆಂಟರ್ ಫಾರ್ ಡೆವಲಪ್ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ ಈ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ.

- ಈ ವ್ಯವಸ್ಥೆಯಡಿ ರಾಜ್ಯದ ಎಲ್ಲಾ ಆರಕ್ಷಕ ಠಾಣೆಗಳನ್ನು ಲಿಂಕ್ ಮಾಡುವ ಮೂಲಕ ಠಾಣಗಳ ವ್ಯಾಪ್ತಿಯಲ್ಲಾಗುವ ಅಪರಾಧಗಳ ಮಾಹಿತಿಯನ್ನು ಎಲ್ಲಾ ಠಾಣೆಗಳಿಗೂ ರವಾನಿಸಲಾಗುವುದು. ಇದರಿಂದ ಮಹಾರಾಷ್ಟ್ರದಲ್ಲಿ ಡಿಜಿಟಲ್ ಪೊಲೀಸ್ ವ್ಯವಸ್ಥೆಗೆ ನಾಂದಿಯಾಗಲಿದೆ.
- ಖಾಸಗಿ ಸಂಸ್ಥೆಗಳು ಹಾಗೂ ಬ್ಯಾಂಕಗಳಲ್ಲಿ ಸೈಬರ್ ಭದ್ರತೆ ಒದಗಿಸಲುವ ಸಹ ಈ ವ್ಯವಸ್ಥೆ ನೆರವಾಗಲಿದೆ.
- ಇದಕ್ಕೆಂದೆ ಮಹಾರಾಷ್ಟ್ರ ಸರ್ಕಾರ ನುರಿತ ಸೈಬರ್ ಪೊಲೀಸ್ ತಂಡವನ್ನು ರಚಿಸಲಿದೆ. ಈ ತಂಡದಲ್ಲಿ ಸೈಬರ್ ಕ್ಷೇತ್ರದಲ್ಲಿ ವಿಶೇಷ ತರಭೇತಿ ಪಡೆದ 1000ಕ್ಕೂ ಹೆಚ್ಚು ಪೊಲೀಸರು ಕಾರ್ಯನಿರ್ವಹಿಸಲಿದ್ದಾರೆ.

**ಜಿಕಾ ವೈರಸ್ ನಿಂದ ವಯಸ್ಕರಲ್ಲಿ ಮಿದುಳಿನ ಜೀವಕೋಶಗಳಿಗೆ ಹಾನಿ**

ಜಿಕಾ ವೈರಸ್ ನಿಂದ ಕೇವಲ ನವಜಾತ ಶಿಶುಗಳಲ್ಲಿ ಅಲ್ಲದೇ ವಯಸ್ಕರ ಮಿದುಳಿನ ಜೀವಕೋಶಗಳಿಗೂ ಹಾನಿಯಾಗಬಹುದೆಂದು ಅಮೆರಿಕಾದಲ್ಲಿ ನಡೆಸಲಾದ ಸಂಶೋಧನೆಯಿಂದ ತಿಳಿದು ಬಂದಿದೆ. ಆದರೆ ಈ ಸಂಶೋಧನೆ ಪ್ರಾಥಮಿಕ ಹಂತದಲ್ಲಿದ್ದು, ಇನ್ನು ಅಧ್ಯಯನ ನಡೆಸಬೇಕಿದೆ. ಈ ಸಂಶೋಧನೆಯಲ್ಲಿ ಮಿದುಳಿನ ನ್ಯೂರನ್ ಪ್ರೊಗೆನಿಟರ್ (Progenitor) ಜೀವಕೋಶಗಳ ಹೆಚ್ಚು ಒತ್ತು ನೀಡಲಾಗಿದೆ. ಈ ಕೋಶಗಳನ್ನು ಮಿದುಳಿನ ಸ್ಟೆಮ್ ಸೆಲ್ ಎನ್ನಲಾಗುತ್ತದೆ. ಭ್ರೂಣದ ಬೆಳವಣಿಗೆ ಹಂತದಲ್ಲಿ ಈ ಜೀವಕೋಶಗಳು ವಿಭಜನೆಗೊಂಡು ನ್ಯೂರನ್ ಆಗಿ ರಚನೆಯಾಗುತ್ತವೆ. ಮಿದುಳಿನಲ್ಲಿ ಮಾಹಿತಿಯನ್ನು ಒತ್ತೊಯ್ಯಲು ನ್ಯೂರನ್ ಪ್ರಮುಖ ಪಾತ್ರವಹಿಸುತ್ತದೆ.

- ಸಂಶೋಧನೆಯ ಪ್ರಕಾರ ವಯಸ್ಕರಲ್ಲೂ ಕಡಿಮೆ ಸಂಖ್ಯೆಯಲ್ಲಿ ಪ್ರೊಗೆನಿಟರ್ ಜೀವಕೋಶಗಳು ಇರುವುದರಿಂದ ಜಿಕಾ ವೈರಸ್ ಗೆ ಸಂಪೂರ್ಣವಾಗಿ ಪ್ರತಿರೋಧಕವನ್ನು ಹೊಂದಿರುತ್ತಾರೆ ಎನ್ನುವುದು ಕಷ್ಟ ಎನ್ನಲಾಗಿದೆ. ಪ್ರೊಗೆನಿಟರ್ ಜೀವಕೋಶಗಳು ವಯಸ್ಕರಲ್ಲಿ ಕಲಿಯಲು ಮತ್ತು ನೆನಪಿನ ಶಕ್ತಿಯನ್ನು ಕಾಪಾಡಲು ಪಾತ್ರವಹಿಸುತ್ತವೆ. ಪ್ರೊಗೆನಿಟರ್ ಜೀವಕೋಶಗಳು ಜಿಕಾ ವೈರಸ್ ಸೋಂಕಿಗೆ ಒಳಗಾಗುವಬಹುದರಿಂದ ವಯಸ್ಕರಲ್ಲಿ ಕಲಿಕೆ ಮತ್ತು ನೆನಪಿನ ಶಕ್ತಿ ಮೇಲೆ ಪರಿಣಾಮ ಬೀರಲಿದೆ.

**ಜಿಕಾ ವೈರಸ್ ಬಗ್ಗೆ:**

- ಜಿಕಾ ವೈರಸ್ ಏಡಿಸ್ ಈಜಿಪ್ಟಿ ಸೊಳ್ಳೆಗಳ ಮೂಲಕ ಹರಡಬಲ್ಲ ರೋಗವಾಗಿದೆ.
- ಈ ವೈರಸ್ ನಿಂದ ಹುಟ್ಟುವ ಮಕ್ಕಳ ಮೆದುಳು ನಿಷ್ಕ್ರೀಯಗೊಳ್ಳುತ್ತದೆ. ಮಕ್ಕಳು ಹುಟ್ಟುವಾಗಲೇ ಚಿಕ್ಕ ತಲೆ ಹೊಂದಿರುತ್ತಾರೆ. ಇದನ್ನು Microcephaly ಎನ್ನಲಾಗುತ್ತದೆ.
- ಜ್ವರ, ಕೆಂಪು ಕಣ್ಣು, ಮೂಳೆ ನೋವು ಈ ಸೋಂಕಿನ ಲಕ್ಷಣವಾಗಿದೆ. ಇದು ಅತಿ ಹೆಚ್ಚಾಗಿ ಗರ್ಭಿಣಿ ಸ್ತ್ರೀಯರಿಗೆ ಅತಿ ಹೆಚ್ಚು ಹರಡವುದರಿಂದ ಈ ಬಗ್ಗೆ ಹೆಚ್ಚಿನ ಮನ್ನೆಚ್ಚರಿಕ ಕ್ರಮ ಕೈಗೊಳ್ಳಬೇಕಿದೆ. ಈ ಸೋಂಕಿಗೆ ಯಾವುದೇ ಔಷಧಿಗಳಿಲ್ಲ ಎಂದು ವೈದ್ಯಕೀಯ ಜಗತ್ತು ಹೇಳುತ್ತಿದೆ.

www.karunaduexams.com

**<u>ತಂತ್ರಜ್ಞಾನ ಆಧಾರಿತ ಸ್ಟಾರ್ಟ್ ಆಫ್: ಭಾರತಕ್ಕೆ ಮೂರನೇ ಸ್ಥಾನ</u>**

ತಂತ್ರಜ್ಞಾನ ಆಧಾರಿತ ಸ್ಟಾರ್ಟ್ ಆಫ್ ಗಳನ್ನು ಆರಂಭಿಸುವ ವಿಷಯದಲ್ಲಿ ಭಾರತ ವಿಶ್ವದ ಮೂರನೇ ಅತಿದೊಡ್ಡ ದೇಶವಾಗಿದೆ. ಅಮೆರಿಕಾ ಮತ್ತು ಇಂಗ್ಲೆಂಡ್ ಪಟ್ಟಿಯಲ್ಲಿ ಕ್ರಮವಾಗಿ ಪ್ರಥಮ ಮತ್ತು ಎರಡನೇ ಸ್ಥಾನದಲ್ಲಿವೆ. ಅಸ್ಸೋಚಾಮ್ ಅಸೋಷಿಯೇಶನ್ ಅರ್ಬಿಟ್ರೇಜ್ ಸಂಶೋಧನಾ ಸಂಸ್ಥೆ ಜಂಟಿಯಾಗಿ ನಡೆಸಿದ ಸಮೀಕ್ಷೆಯಲ್ಲಿ ಈ ವಿಷಯ ಬಹಿರಂಗಗೊಂಡಿದೆ.

**ಸಮೀಕ್ಷೆ ಪ್ರಮುಖಾಂಶಗಳು**:

- ಸಮೀಕ್ಷೆ ಪ್ರಕಾರ ಅಮೆರಿಕದಲ್ಲಿ 47 ಸಾವಿರ ಸ್ಟಾರ್ಟ್ ಅಪ್‌ಗಳಿದ್ದರೆ, ಬ್ರಿಟನ್‌ನಲ್ಲಿ 4,500 ಸ್ಟಾರ್ಟ್ ಅಪ್‌ಗಳಿವೆ. ಮೂರನೇ ಸ್ಥಾನದಲ್ಲಿರುವ ಭಾರತದಲ್ಲಿ 4200 ಸ್ಟಾರ್ಟ್ ಆಫ್ ಕಾರ್ಯನಿರ್ವಹಿಸುತ್ತಿವೆ.
- ತಾಂತ್ರಿಕ ಮತ್ತು ತಾಂತ್ರಿಕೇತರ ಸ್ಟಾರ್ಟ್ ಉದ್ಯಮದಲ್ಲಿ ಚೀನಾ ಅಗ್ರಸ್ಥಾನದಲ್ಲಿದ್ದರೆ, ಭಾರತ 5ನೇ ಸ್ಥಾನವನ್ನು ಪಡೆದುಕೊಂಡಿದೆ.
- ಸ್ಟಾರ್ಟ್ ಆಫ್ ಗಳಲ್ಲಿ ದೇಶದಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ದೆಹಲಿ, ಮುಂಬೈ, ಹೈದ್ರಾಬಾದ್ ಮತ್ತು ಚೆನ್ನೈ ನಗರಗಳು ಗುರುತಿಸಿಕೊಂಡಿವೆ.
- ಸ್ಟಾರ್ಟ್‌ಅಪ್ ಗಳಲ್ಲಿ ಸಾಫ್ಟ್ವೇರ್ ರಾಜಧಾನಿ ಖ್ಯಾತಿಯ ಬೆಂಗಳೂರು ಶೇ. 26ರಷ್ಟು ಪಾಲನ್ನು ಹೊಂದಿದೆ. ದೆಹಲಿ ಶೇ. 23 ಹಾಗೂ ಮುಂಬೈ ಶೇ. 17 ಪಾಲನ್ನು ಹೊಂದಿದೆ.

**<u>ವಿಶ್ವದ ಮೊದಲ ಚಾಲಕ ರಹಿತ ಟ್ಯಾಕ್ಸಿ ಸೇವೆ ಸಿಂಗಾಪುರದಲ್ಲಿ ಆರಂಭ</u>**

ಜಗತ್ತಿನ ಮೊದಲ ಸ್ವಯಂಚಾಲಿತ ಟ್ಯಾಕ್ಸಿ ಸೇವೆಯನ್ನು ಸಿಂಗಾಪುರದಲ್ಲಿ ಆರಂಭಿಸಿಲಾಗಿದೆ. ತಂತ್ರಜ್ಞಾನ ಬಳಕೆಯಿಂದ ಗಮನ ಸೆಳೆದಿರುವ ಈ ವಿಶಿಷ್ಠ ಸೇವೆ ಮುಂದಿನ ದಿನಗಳಲ್ಲಿ ಸಾರಿಗೆ ಸೇವೆಯಲ್ಲಿ ಮಹತ್ವದ ಬದಲಾವಣೆ ತರುವ ಸೂಚನೆ ನೀಡಿದೆ. ಸಿಂಗಾಪುರ ಮೂಲದ ಸ್ಟಾರ್ಟಪ್ ಸಂಸ್ಥೆ ನುಟುನೋಮಿ (nuTonomy) ಇದನ್ನು ಅಭಿವೃದ್ದಿಪಡಿಸಿದ್ದು, ವಿಶ್ವದ ಮೊದಲ ಚಾಲಕ ರಹಿತ ಟ್ಯಾಕ್ಸಿ ಸೇವೆಯನ್ನು ಆರಂಭಿಸಿದೆ ಸ್ಟಾರ್ಟ್ ಆಫ್ ಎನಿಸಿದೆ. ನುಟನೋಮಿ ಮೂಲತಃ ಅಮೆರಿಕದ ಎಂಐಟಿಯ ಪದವೀಧರರಾದ ಲ್ಯಾಗ್ನೆಮ್ಮಾ ಮತ್ತು ಎಮಿಲಿಯೋ ಎಂಬ ತಂತ್ರಜ್ಞರು 2013ರಲ್ಲಿ ಹುಟ್ಟುಹಾಕಿದ್ದ ಸಂಸ್ಥೆಯಾಗಿದೆ.

- ಚಾಲಕ ರಹಿತ ಈ ವಿನೂತನ ಪರಿಕಲ್ಪನೆಯ ಟ್ಯಾಕ್ಸಿ ಸೇವೆಗೆ ಸಿಂಗಾಪುರ ಸರ್ಕಾರ ಕಳೆದ ತಿಂಗಳು ಅನುಮತಿ ನೀಡಿತ್ತು.
- ಆರಂಭಿಕ ಹಂತದಲ್ಲಿ ಆರು ಕಾರುಗಳನ್ನು ಪ್ರಾಯೋಗಿಕವಾಗಿ ಬಿಡಲಾಗಿದ್ದು, ನಗರದ 6.5 ಚದರ ಮೈಲು ಸುತ್ತಳತೆಯ ಪ್ರದೇಶಕ್ಕೆ ಮಾತ್ರ ಈ ಸೇವೆ ಸೀಮಿತವಾಗಿದೆ. ಇದಕ್ಕಾಗಿ ಜಪಾನ್ ನ ಮಿತ್ಸುಬಿಷಿ ಹಾಗೂ ಫ್ರಾನ್ಸ್ ಮೂಲದ ರೆನಾಲ್ಟ್ ಸಂಸ್ಥೆಗಳ ಸಣ್ಣ ಕಾರುಗಳನ್ನು ಬಳಸಿಕೊಳ್ಳಾಗಿದೆ.
- ಪ್ರತಿ ಕಾರಿನಲ್ಲೂ ಆರು ಲಿಡರ್ ಸೆಟ್ (Light Detection and Ranging) ಅಳವಡಿಸಲಾಗಿದ್ದು, ಲೇಸರ್ ತಂತ್ರಜ್ಞಾನ ಮೂಲಕ ಸ್ವಯಂಚಾಲಿತವಾಗಿ ಚಲಿಸುವಂಥ ಸಾಫ್ಟ್ ವೇರ್ ಅಭಿವೃದ್ದಿಪಡಿಸಲಾಗಿದೆ.
- ಕಾರಿನ ಡ್ಯಾಶ್ ಬೋರ್ಡ್ನಲ್ಲಿ ಎರಡು ಕ್ಯಾಮೆರಗಳನ್ನು ಅಳವಡಿಸಲಾಗಿದ್ದು, ದಾರಿಯಲ್ಲಿ ಅಡ್ಡಬರುವ ವಸ್ತುಗಳನ್ನು ಹಾಗೂ ಟ್ರಾಪಿಕ್ ಸಿಗ್ನಲ್ ದೀಪದಲ್ಲಿ ಆಗುವ ಬದಲಾವಣೆಯನ್ನು ಗುರುತಿಸಲಿದೆ.

www.karunaduexams.com

**<u>ಸ್ಕ್ರಾಮ್ ಜೆಟ್ (Scram Jet)ಎಂಜಿನ್ ಯಶಸ್ವಿಯಾಗಿ ಪರೀಕ್ಷಿಸಿದ ಇಸ್ರೋ</u>**

ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಸ್ಕ್ರಾಮ್ ಜೆಟ್ (Supersonic Combusting Ramjet) ಎಂಜಿನ್ ನ ಮೊದಲ ಪರೀಕ್ಷೆಯಲ್ಲೇ ಯಶಸ್ವಿಯಾಗಿದೆ. ಆಂಧ್ರಪ್ರದೇಶದ ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಕಾಶ ಕೇಂದ್ರದಲ್ಲಿ ಪರೀಕ್ಷೆಯನ್ನು ನಡೆಸಲಾಗಿದ್ದು, ಯಶಸ್ವಿಯಾಗುವ ಮೂಲಕ ಇಸ್ರೋ ಮತ್ತೊಂದು ಗೆಲುವಿನ ನಗೆ ಬೀರಿದೆ.

- ಸ್ವದೇಶಿ ನಿರ್ಮಿತ ಸ್ಕ್ರಾಮ್ ಜೆಟ್ ಅನ್ನು RH-560 ಸೌಂಡಿಂಗ್ ರಾಕೆಟ್ ನಲ್ಲಿ ಅಳವಡಿಸಿ ಪರೀಕ್ಷೆಸಲಾಯಿತು. RH-560 ಎರಡು ಹಂತದ ಸುಧಾರಿತ ತಂತ್ರಜ್ಞಾನದ ವಾಹನವಾಗಿದೆ(Advanced Technology Vehicle (ATV)).
- ATV ಮತ್ತು ಸ್ಕ್ರಾಮ್ ಜೆಟ್ ನ ಒಟ್ಟು ತೂಕ 3277 ಕೆ.ಜಿ. ಈ ಪರೀಕ್ಷ ವೇಳೆಯಲ್ಲಿ ಎಟಿವಿ ಮ್ಯಾಕ್ 6 (ಶಬ್ದಕ್ಕಿಂತಲೂ ಆರು ಪಟ್ಟು ಹೆಚ್ಚು ವೇಗ) ವೇಗದಲ್ಲಿ ಸಾಗುವ ಸಾಮರ್ಥ್ಯವನ್ನು ತೋರಿದೆ.
- ಸ್ಕ್ರಾಮ್ ಜೆಟ್ ಎಂಜಿನ್ ಜಲಜನಕದ ಇಂಧನವನ್ನು ದಹಿಸಲು ವಾತಾವರಣದಲ್ಲಿರುವ ಆಮ್ಲಜನಕವನ್ನು ಆಕ್ಸಿಡೈಸರ್ ಆಗಿ ಬಳಸಿಕೊಳ್ಳಲಿದೆ.
- ಅಮೆರಿಕಾ, ಜಪಾನ್ ಮತ್ತು ಚೀನಾ ನಂತರ ಈ ಎಂಜಿನ್ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದ ದೇಶ ಭಾರತ ಆಗಿದೆ.

**ಸ್ಕ್ರಾಮ್ ಜೆಟ್ ಬಗ್ಗೆ:**

- ಸ್ಕ್ರಾಮ್ ಜೆಟ್ ಏರ್ ಬ್ರೆಥಿಂಗ್ ಪ್ರೊಪುಲ್ಶನ್ ಸಿಸ್ಟಮ್ (Air Breathing Propulsion System (ABPS))ಆಧಾರದ ಮೇಲೆ ಕಾರ್ಯನಿರ್ವಹಿಸಲಿದೆ. ಈ ತಂತ್ರಜ್ಞಾನದಲ್ಲಿ ರಾಕೆಟ್ ನಲ್ಲಿ ಬಳಸುವ ಇಂಧನವು ವಾತಾವರಣದಲ್ಲಿರುವ ಆಮ್ಲಜನಕವನ್ನು ಬಳಸಿ ದಹಿಸಲಿದೆ. ಆದ್ದರಿಂದ ಆಕ್ಸಿಡೈಸರ್ ಪ್ರಮಾಣ ಗಣನೀಯವಾಗಿ ತಗ್ಗಲಿದ್ದು, ಉಡಾವಣೆ ವೆಚ್ಚದಲ್ಲಿ ಸಾಕಷ್ಟು ಕಡಿಮೆಯಾಗಲಿದೆ.

**ಉಪಯೋಗಗಳು:**

- ದ್ರವೀಕೃತ ಆಮ್ಲಜನಕವನ್ನು ಒತ್ತೊಯ್ಯುವ ಅವಶ್ಯಕತೆ ಇಲ್ಲದಿರುವುದರಿಂದ ಉಡಾವಣ ತೂಕ ಗಣನೀಯವಾಗಿ ಕಡಿಮೆಯಾಗಲಿದೆ.
- ಇದರಿಂದ ರಾಕೆಟ್ ಕಾರ್ಯಕ್ಷಮತೆ ಹೆಚ್ಚಲಿದ್ದು, ಉಡಾವಣ ವೆಚ್ಚ ಕಡಿಮೆಯಾಗಲಿದೆ.
- ಈ ಎಂಜಿನ್ ನಲ್ಲಿ ತಿರುಗುವ ಭಾಗಗಳು ಇಲ್ಲದ ಕಾರಣ ವಿಫಲವಾಗುವ ಸಾಧ್ಯತೆ ತೀರಾ ಕಡಿಮೆ.

www.karunaduexams.com

# ವಿಶೇಷ ದಿನ

**ಬೆಂಗಳೂರಿನಲ್ಲಿ 15ನೇ ಪ್ರವಾಸಿ ಭಾರತೀಯ ದಿವಸ್**

ಹದಿನೈದನೆ ಪ್ರವಾಸಿ ಭಾರತೀಯ ದಿವಸ್ ಅನ್ನು ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಆಯೋಜಿಸಲಾಗುವುದು. 2017ರ ಜನವರಿ 7ರಿಂದ 9ರವರೆಗೆ ನಡೆಯಲಿರುವ ಪ್ರವಾಸಿ ಭಾರತೀಯ ದಿವಸ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ, ಪ್ರಧಾನಿ ನರೇಂದ್ರ ಮೋದಿ ಹಾಗೂ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಪಾಲ್ಗೊಳ್ಳಲಿದ್ದಾರೆ. ನಗರದ ತುಮಕೂರು ರಸ್ತೆಯ ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಮೈದಾನದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಸುಮಾರು 2500ಕ್ಕೂ ಅಧಿಕ ಎನ್‌ಆರ್‌ಐಗಳು ಭಾಗವಹಿಸುವ ನಿರೀಕ್ಷೆಯಿದೆ.

- ಪ್ರವಾಸಿ ಭಾರತೀಯ ದಿವಸ್‌ನ 3 ದಿನ ಸಂಜೆ ಕರ್ನಾಟಕದ ಹಿರಿಮೆ ಯನ್ನು ಪ್ರದರ್ಶಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ರಾಜ್ಯದಲ್ಲಿನ ಕಲೆ, ಸಂಸ್ಕೃತಿ, ಪ್ರವಾಸಿ ತಾಣ ಹಾಗೂ ಉದ್ಯಮಗಳ ಬಗ್ಗೆ ಕಾರ್ಯಕ್ರಮದಲ್ಲಿ ಮಾಹಿತಿ ನೀಡಲಾಗುವುದು.
- ಜನವರಿ 7ರಂದು ಯುವ ಪ್ರವಾಸಿ ಭಾರತೀಯರ ದಿನ ಆಚರಿಸಲಾಗುತ್ತಿದ್ದು, ಸಚಿವೆ ಸುಷ್ಮಾ ಸ್ವರಾಜ್ ಉದ್ಘಾಟಿಸಲಿದ್ದಾರೆ.

**ಪ್ರವಾಸಿ ಭಾರತೀಯ ದಿವಸ್**:

- ಪ್ರವಾಸಿ ಭಾರತೀಯ ದಿವಸ್ ಅನ್ನು ಪ್ರತಿ ವರ್ಷ ಜನವರಿ 9ರಂದು ಆಚರಿಸಲಾಗುತ್ತದೆ. ಭಾರತದ ಅಭಿವೃದ್ಧಿಗೆ ಸಾಗರೋತ್ತರ ಭಾರತೀಯ ಸಮುದಾಯ (NRI) ನೀಡುತ್ತಿರುವ ಕೊಡುಗೆಯನ್ನು ಗುರುತಿಸುವ ಸಲುವಾಗಿ ಈ ದಿನವನ್ನು ಆಚರಿಸಲಾಗುತ್ತದೆ.
- ಪ್ರವಾಸಿ ಭಾರತೀಯ ದಿವಸ್ ಅನ್ನು 2003 ರಿಂದ ಆಚರಿಸಲಾಗುತ್ತಿದ್ದು, ಮಹಾತ್ಮ ಗಾಂಧೀರವರು ದಕ್ಷಿಣಾ ಆಫ್ರಿಕಾದಿಂದ ಭಾರತಕ್ಕೆ ಜನವರಿ 9, 1915 ರಲ್ಲಿ ಹಿಂತಿರುಗಿ ಬಂದ ಸ್ಮರಣಾರ್ಥ ಈ ದಿನದಂದು ಆಚರಿಸಲಾಗುತ್ತಿದೆ.
- ಭಾರತ ಸರ್ಕಾರ ರಚಿಸಿದ್ದ ಎಲ್.ಎಂ.ಸಿಂಘ್ವಿ ಸಮಿತಿಯ ಶಿಫಾರಸ್ಸಿನ ಮೇರೆಗೆ ಪ್ರವಾಸಿ ಭಾರತೀಯ ದಿವಸ್ ಜಾರಿಗೆ ಬಂದಿದೆ.

**ಆಗಸ್ಟ್ 7 ರಾಷ್ಟ್ರೀಯ ಕೈಮಗ್ಗ ದಿನ (National Handloom Day)**

ಎರಡನೇ ರಾಷ್ಟ್ರೀಯ ಕೈಮಗ್ಗ ದಿನವನ್ನು ಆಗಸ್ಟ್ 7 ರಂದು ದೇಶವ್ಯಾಪ್ತಿ ಆಚರಿಸಲಾಯಿತು. ಉತ್ತರಪ್ರದೇಶದ ವಾರಣಾಸಿಯಲ್ಲಿ ಕೈಮಗ್ಗ ದಿನ ಆಚರಣೆ ಪ್ರಯುಕ್ತ ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರಧಾನಿ ಮೋದಿ ಸೇರಿದಂತೆ ವಿವಿಧ ರಾಜಕೀಯ ಗಣ್ಯರು ಪಾಲ್ಗೊಂಡಿದ್ದರು. ಕೈಮಗ್ಗ ದಿನದ ಅಂಗವಾಗಿ ಸಂತ ಕಬೀರ ಮತ್ತು ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿಗಳ ವಿತರಣೆ ಸಹ ನಡೆಯಿತು.

- ರಾಷ್ಟ್ರೀಯ ಕೈಮಗ್ಗ ದಿನವನ್ನು ಕಳೆದ ವರ್ಷದಿಂದ ಆಗಸ್ಟ್ 7 ರಂದು ಆಚರಿಸಲಾಗುತ್ತಿದೆ. ಮೊದಲನೆ ರಾಷ್ಟ್ರೀಯ ಕೈಮಗ್ಗ ದಿನವನ್ನು ಪ್ರಧಾನಿ ಮೋದಿ ರವರು ಚೆನ್ನೈನ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಆಗಸ್ಟ್ 7, 2015 ರಂದು ಉದ್ಘಾಟಿಸಿದ್ದರು.

www.karunaduexams

**ಹಿನ್ನಲೆ**:

- ಕೈಮಗ್ಗ ಉದ್ಯಮದ ಮಹತ್ವವನ್ನು ಸಾರುವ ಹಿನ್ನಲೆಯಲ್ಲಿ ಆಗಸ್ಟ್ 7ನ್ನು ರಾಷ್ಟ್ರೀಯ ಕೈಮಗ್ಗ ದಿನವೆಂದು ಕೇಂದ್ರ ಸರ್ಕಾರ ಕಳೆದ ವರ್ಷ ಘೋಷಿಸಿದೆ.
- ಸಾಮಾಜಿಕ ಆರ್ಥಿಕ ಅಭಿವೃದ್ದಿಗೆ ಕೈಮಗ್ಗ ಉದ್ಯಮದ ಕೊಡುಗೆಯನ್ನು ತೋರ್ಪಡಿಸುವುದರ ಜೊತೆಗೆ ಕೈಮಗ್ಗ ಉದ್ಯಮವನ್ನು ಪ್ರೋತ್ಸಾಹಿಸಿ, ನೇಕಾರರ ಜೀವನ ಮಟ್ಟವನ್ನು ಉತ್ತಮಪಡಿಸುವ ಸಲುವಾಗಿ ಆಚರಿಸಲಾಗುತ್ತಿದೆ.
- ಆಗಸ್ಟ್ 7, 1905 ರಂದು ಕೊಲ್ಕತ್ತ ಟೌನ ಹಾಲ್ ಬಳಿ ರಾಷ್ಟ್ರವ್ಯಾಪ್ತಿ ಸ್ವದೇಶಿ ಚಳುವಳಿಗೆ ಕರೆನೀಡಲಾಗಿತ್ತು. ಇದರ ಸ್ಮರಣಾರ್ಥ ಆಗಸ್ಟ್ 7 ಅನ್ನು ರಾಷ್ಟ್ರೀಯ ಕೈಮಗ್ಗ ದಿನವನ್ನಾಗಿ ಘೋಷಿಸಲಾಗಿದೆ.

**“ಯಾದ್ ಕರೋ ಕುರ್ಬಾನಿ’ ಕಾರ್ಯಕ್ರಮ ಉದ್ಘಾಟಿಸಿದ ಪ್ರಧಾನಿ ಮೋದಿ**

ಪ್ರಧಾನ ಮಂತ್ರಿ ನರೇದ್ರ ಮೋದಿ ಅವರು 70ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ‘ಆಜಾದಿ 70 ಸಾಲ್-ಯಾದ್ ಕರೋ ಕುರ್ಬಾನಿ’ ಕಾರ್ಯಕ್ರಮಕ್ಕೆ ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜಾದ್ ಹುಟ್ಟೂರು ಮಧ್ಯಪ್ರದೇಶದ ಅಲಿರಾಜ್ಪುರ್ ನಲ್ಲಿ ಚಾಲನೆ ನೀಡಿದರು. ಯಾದ್ ಕರೋ ಕುರ್ಬಾನಿ 15 ದಿನಗಳ ಕಾರ್ಯಕ್ರಮವಾಗಿದ್ದು, 70ನೇ ಸ್ವಾತಂತ್ರ್ಯೋತ್ಸವ ಹಾಗೂ ಕ್ವಿಟ್ ಇಂಡಿಯಾ ಚಳವಳಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ಕೇಂದ್ರದ ಸಚಿವರು, ಬಿಜೆಪಿಯ ಹಿರಿಯ ನಾಯಕರು ಮುಂದಿನ 15 ದಿನಗಳ ಕಾಲ ದೇಶಾದ್ಯಂತ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

- “70 ಸಾಲ್-ಯಾದ್ ಕರೋ ಕುರ್ಬಾನಿ’ ಕಾರ್ಯಕ್ರಮ ಪ್ರತಿ ವ್ಯಕ್ತಿಯಲ್ಲೂ ದೇಶ ಮೊದಲು ನಂತರ ತಾನು ಎಂಬ ಭಾವನೆ ಬಿತ್ತುವ ಧ್ಯೇಯೋದ್ದೇಶವನ್ನು ಹೊಂದಿದೆ.
- ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸ್ವಾತಂತ್ರ್ಯ ಯೋಧರು ಮಾಡಿದ ಸರ್ವೋಚ್ಚ ತ್ಯಾಗವನ್ನು ಜನರು ಸ್ಮರಿಸಲು ಈ ಕಾರ್ಯಕ್ರಮ ವೇದಿಕೆ ಸೃಷ್ಟಿಸಲಿದೆ.
- ಈ ಕಾರ್ಯಕ್ರಮದಲ್ಲಿ ಕೇಂದ್ರದ ಸಚಿವರು ದೇಶದ ನಾನಾ ಭಾಗದಲ್ಲಿ ಸ್ವಾತಂತ್ರ ಹೋರಾಟ ಇತಿಹಾಸ ಹಿನ್ನಲೆ ಇರುವ ಸ್ಥಳಗಳಿಗೆ ಭೇಟಿ ನೀಡಿ ರಾಷ್ಟ್ರಭಕ್ತಿ ಭಾವನೆಯನ್ನು ಪ್ರೇರಿಪಿಸಲಿದ್ದಾರೆ. ಇದರ ಜೊತೆಗೆ ದೇಶದ ಯುವ ಜನತೆಗೆ ದೇಶಕ್ಕಾಗಿ ಸ್ವಾತಂತ್ರ ಹೋರಾಟಗಾರರು ಮಾಡಿದೆ ತ್ಯಾಗ ಮತ್ತು ಸ್ವಾತಂತ್ರ ಪೂರ್ವ ಭಾರತದ ಇತಿಹಾಸದ ಮಾಹಿತಿಯನ್ನು ರವಾನಿಸುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ.

**ಕ್ವಿಟ್ ಇಂಡಿಯಾ ಚಳುವಳಿ**:

- **ಭಾರತ ಬಿಟ್ಟು ತೊಲಗಿ ಚಳುವಳಿ**ಯು ಒಂದು ಅಸಹಕಾರ ಚಳುವಳಿಯಾಗಿದ್ದು ಆಗಸ್ಟ್ ೧೯೪೨ರಲ್ಲಿ ಮಹಾತ್ಮಾ ಗಾಂಧಿಯವರ ಮುಂದಾಳತ್ವದಲ್ಲಿ ನಡೆಯಿತು. ಇದರ ಗುರಿ ಬ್ರಿಟಿಷ್ ಸರ್ಕಾರದಿಂದ ಭಾರತದ ಸ್ವಾತಂತ್ರ್ಯ ಪಡೆಯುವುದಾಗಿತ್ತು. ೮ ಆಗಸ್ಟ್ ರಂದು ಮುಂಬಯಿಯ ಗೊವಾಳಿಯ ಮೈದಾನ(ಇಂದಿನ ಹೆಸರು - ಆಗಸ್ಟ್ ಕ್ರಾಂತಿ ಮೈದಾನ)ದಲ್ಲಿ ಗಾಂಧೀಜಿಯವರ ಮಾಡು ಇಲ್ಲವೆ ಮಡಿ ಎಂಬ ಘೋಷಣೆಯೊಂದಿಗೆ ಪ್ರಾರಂಭವಾಯಿತು. ಆದರೆ ಈ

ಘೋಷಣೆಯ ೨೪ ಗಂಟೆಗಳೊಳಗೆ ಬಹುತೇಕ ಕಾಂಗ್ರೆಸ್ ನಾಯಕರು ಬಂಧಿತರಾಗಿ ಆ ವರ್ಷವನ್ನು ಕಾರಾಗೃಹದಲ್ಲಿ ಕಳೆಯಬೇಕಾಯಿತು.

**ಆಗಸ್ಟ್ 29: ರಾಷ್ಟ್ರೀಯ ಕ್ರೀಡಾ ದಿನ (National Sports Day)**

ರಾಷ್ಟ್ರೀಯ ಕ್ರೀಡಾ ದಿನವನ್ನು ಪ್ರತಿವರ್ಷ ಆಗಸ್ಟ್ 29 ರಂದು ಆಚರಿಸಲಾಗುತ್ತದೆ. ಹಾಕಿ ದಂತಕಥೆ ಮೇಜರ್ ಧ್ಯಾನ್ ಚಂದ್ ಅವರ ಹುಟ್ಟುಹಬ್ಬವನ್ನು ಕ್ರೀಡಾದಿನವೆಂದು ಆಚರಿಸಲಾಗುವ ಮೂಲಕ ಗೌರವಸಲ್ಲಿಸಲಾಗುವುದು. ಈ ದಿನದಂದು ರಾಷ್ಟ್ರಪತಿಗಳು ಕ್ರೀಡಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದವರಿಗೆ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳನ್ನು ವಿತರಿಸುವರು.

**ಧ್ಯಾನ್ ಚಂದ್ ಬಗ್ಗೆ:**

- ಧ್ಯಾನ್ ಚಂದ್ ಅವರು ಉತ್ತರ ಪ್ರದೇಶದ ಅಲಹಬಾದ್ ನಲ್ಲಿ 29 ಆಗಸ್ಟ್ 1905 ರಂದು ಜನಿಸಿದರು.
- ಧ್ಯಾನ್ ಚಂದ್ ಕೇವಲ ಭಾರತದಲ್ಲಷ್ಟೇ ಅಲ್ಲ ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಹಾಕಿಪಟು. ಹದಿನಾರನೇ ವಯಸ್ಸಿನಲ್ಲಿ ಸೇನೆಗೆ ಸೇರಿದ ಚಂದ್ ಅಲ್ಲಿಂದಲೇ ಹಾಕಿ ಆಡುವುದನ್ನು ಮೈಗೂಡಿಸಿಕೊಂಡಿದ್ದರು.
- "ದಿ ವಿಝರ್ಡ್ (The Wizard) ಎಂದೇ ಖ್ಯಾತರಾಗಿದ್ದ ಇವರು ತಮ್ಮ ವೃತ್ತಿಜೀವನದಲ್ಲಿ 1000ಕ್ಕೂ ಹೆಚ್ಚು ಗೋಲುಗಳನ್ನು ಗಳಿಸಿದ್ದರು.
- ಭಾರತ ಹಾಕಿ ತಂಡ 1928, 1932 ಮತ್ತು 1936 ರ ಒಲಂಪಿಕ್ಸ್ ನಲ್ಲಿ ಚಿನ್ನದ ಪದಕವನ್ನು ಗೆದ್ದಾಗ ಧ್ಯಾನ್ ಚಂದ್ ತಂಡದಲ್ಲಿ ಭಾಗವಹಿಸಿದ್ದರು, ಅಲ್ಲದೇ ಗೆಲುವಿಗೆ ಪ್ರಮುಖ ಪಾತ್ರವಹಿಸಿದ್ದರು.
- ಭಾರತ ಸರ್ಕಾರ ಇವರಿಗೆ "ಪದ್ಮ ವಿಭೂಷಣ" ಪ್ರಶಸ್ತಿಯನ್ನು ನೀಡಿದೆ. ಮರಣೋತ್ತರವಾಗಿ ಇವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಬೇಕೆಂಬ ಕೂಗು ಸಹ ದೇಶದಲ್ಲೆಡೆ ಇದೆ.

www.karunaduexams.com

## ಕ್ರೀಡೆ

**ಟೊರಾಂಟೊ ಮಾಸ್ಟರ್ಸ್ ಟೆನಿಸ್ ಟೂರ್ನಿ ನೊವಾಕ್ ಜೊಕೊವಿಕ್ ಚಾಂಪಿಯನ್**

ಸರ್ಬಿಯಾದ ನೊವಾಕ್ ಜೊಕೊವಿಕ್ ರವರು ಟೊರಾಂಟೊ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಸಿಂಗಲ್ಸ್ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ವಿಶ್ವದ ನಂ.1 ಆಟಗಾರ ಜೊಕೊವಿಕ್ ರವರು ಫೈನಲ್ ಪಂದ್ಯದಲ್ಲಿ ಆರನೇ ಶ್ರೇಯಾಂಕಿತ ಕೀ ನಿಶಕೋರಿರವರನ್ನು 6-3, 7-5 ಅಂತರದಿಂದ ಮಣಿಸುವ ಮೂಲಕ ವಿಜೇತರಾದರು.

- ಟೊರಾಂಟೊ ಟೂರ್ನಿಯನ್ನು ರೋಜರ್ಸ್ ಕ್ಲಬ್ ಟೈಟಲ್ ಎಂತಲೂ ಕರೆಯಲಾಗುತ್ತದೆ. ಈ ಟೂರ್ನಿಯಲ್ಲಿ ಜೊಕೊವಿಕ್ ಗೆ ಇದು ನಾಲ್ಕನೇ ಪ್ರಶಸ್ತಿ.
- ಪ್ರಸ್ತಕ ಸಾಲಿನಲ್ಲಿ ಜೊಕೊವಿಕ್ ರವರು ಆಸ್ಟ್ರೇಲಿಯಾ ಮತ್ತು ಫ್ರೆಂಚ್ ಓಪನ್ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಸಿದ್ದಾರೆ.

**ಮಹಿಳೆಯರ ಸಿಂಗಲ್ಸ್:**

- ಮಹಿಳೆಯರ ಸಿಂಗಲ್ಸ್ ನಲ್ಲಿ ವಿಶ್ವದ ನಂ.5 ಆಟಗಾರ್ತಿ ಸಿಮೊನ ಹಲೆಪ್ ರವರು ಅಮೆರಿಕಾದ ಮಡಿಸನ್ ಕೀ ರವರನ್ನು ಸೋಲಿಸುವ ಮೂಲಕ ಪ್ರಶಸ್ತಿಯನ್ನು ಗೆದ್ದುಕೊಂಡರು.

**ಪುರುಷರ ಡಬ್ಬಲ್ಸ್:**

- ಕ್ರೊಯೊಟೆಯಾದ ಇವಾನ್ ದೊಡಿಗ್ ಮತ್ತು ಬ್ರೆಜಿಲ್ ನ ಮರ್ಸೆಲೊ ಮೆಲೊ ಜೋಡಿ ಸ್ಕಾಟಲ್ಯಾಂಡ್ ನ ಜಮಿ ಮುರ್ರೆ ಹಾಗೂ ಬ್ರೆಜಿಲ್ ನ ಬ್ರುನೊ ಸೋರ್ಸ್ ಜೋಡಿ ವಿರುದ್ದ ಜಯ ಸಾಧಿಸಿತು.

**ಮಹಿಳೆಯರ ಡಬ್ಬಲ್ಸ್:**

- ರಷ್ಯಾದ ಎಕಟೆರಿನ ಮಕರೋವ ಮತ್ತು ಎಲೆನ ವೆಸ್ನಿನ ಜೋಡಿಯು ರೋಮೆನಿಯಾದ ಜೋಡಿ ಸಿಮೊನ ಹಲೆಪ್ ಮತ್ತು ಮೊನಿಕ ನಿಕೊಲೆಸ್ಕು ಜೋಡಿಯನ್ನು ಮಣಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿತು.

**2020 ಟೊಕಿಯೋ ಒಲಂಪಿಕ್ಸ್ ಗೆ 5 ಹೊಸ ಕ್ರೀಡೆಗಳ ಸೇರ್ಪಡೆಗೆ ಸಮ್ಮತಿ**

ಜಪಾನ್ ನ ಟೊಕಿಯೋದಲ್ಲಿ 2020 ರಲ್ಲಿ ನಡೆಯಲಿರುವ ಒಲಂಪಿಕ್ಸ್ ಗೆ 5 ಹೊಸ ಕ್ರೀಡೆಗಳನ್ನು ಸೇರಿಸಲು ಅಂತರರಾಷ್ಟ್ರೀಯ ಒಲಂಪಿಕ್ಸ್ ಸಮಿತಿ ಒಪ್ಪಿಗೆ ಸೂಚಿಸಿದೆ. ಬ್ರೆಜಿಲ್ ನ ರಿಯೋ ಡಿ ಜನ್ಯೆರೊದಲ್ಲಿ ನಡೆದ ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿಯ 129ನೇ ಅಧಿವೇಶನದಲ್ಲಿ ಈ ಮಹತ್ವದ ನಿರ್ಣಯವನ್ನು ಕೈಗೊಳ್ಳಲಾಯಿತು.

**ಹೊಸದಾಗಿ ಸೇರ್ಪಡೆಗೊಳ್ಳಿರುವ ಆಟಗಳು:**

- ಬೇಸ್‌ಬಾಲ್/ಸಾಫ್ಟ್ ಬಾಲ್, ಕರಾಟೆ, ಸ್ಕೇಟ್ಬೋರ್ಡ್ (Skateboard), ಕ್ಲೈಂಬಿಂಗ್ (Climbing) ಹಾಗೂ ಸರ್ಫಿಂಗ್ (Surfing).
- ಈ 5 ಆಟಗಳು ಬ್ರೆಜಿಲ್‌ನ ರಿಯೋ ಡಿ ಜನ್ಯೆರೊ ದಲ್ಲಿ ನಡೆಯುತ್ತಿರುವ ರಿಯೋ ಒಲಿಂಪಿಕ್ಸ್ ಗೆ ಅನ್ವಯವಾಗುವುದಿಲ್ಲ. ಮುಂದಿನ 32ನೇ ಒಲಿಂಪಿಕ್ ಕ್ರೀಡಾಕೂಟ ನಡೆಯುವ ಟೊಕಿಯೋದಲ್ಲಿ ಅಂದರೆ 2020ರಲ್ಲಿ. ಸೇರ್ಪಡೆಯಾಗಲಿವೆ.
- ಐದು ಆಟಗಳನ್ನು ಆರಂಭಿಸಲು ಐಒಸಿಗೆ 2015 ಸೆಪ್ಟಂಬರ್ನಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು.

www.karunaduexams.com

- ಯುವಕರನ್ನು ಹುರಿದುಂಬಿಸಲು ಈ ಹೊಸ ಆಟಗಳನ್ನು ಆರಂಭಿಸಲಾಗಿದ್ದು, ಇದರಿಂದ ಯುವ ಜನರಿಗೆ ಹೆಚ್ಚು ಅವಕಾಶ ಸಿಗಲಿದೆ ಎಂದು ಐಒಸಿ ಅಧ್ಯಕ್ಷ ಥಾಮಸ್ ಬ್ಯಾಚ್ ತಿಳಿಸಿದ್ದಾರೆ.
- ನೂತನ 5 ಕ್ರೀಡೆಗಳಿಂದ ವಿಶ್ವದಾದ್ಯಂತ 474 ಕ್ರೀಡಾಳುಗಳಿಗೆ ಅವಕಾಶ ಸಿಗಲಿದೆ.

**ಒಲಂಪಿಕ್ಸ್ ನಲ್ಲಿ ಇತಿಹಾಸ ಬರೆದ ಜಿಮ್ನಾಸ್ಟಿಕ್ ದೀಪಾ ಕರ್ಮಾಕರ್**

ಜಿಮ್ನಾಸ್ಟಿಕ್ ದೀಪಾ ಕರ್ಮಾಕರ್ ಒಲಿಂಪಿಕ್ಸ್ ಕ್ರೀಡಾಕೂಟದ ವಾಲ್ಟ್ ನಲ್ಲಿ ಫೈನಲ್‌ಗೆ ಅರ್ಹತೆ ಪಡೆಯುವ ಮೂಲಕ ಭಾರತೀಯ ಕ್ರೀಡಾ ಇತಿಹಾಸದಲ್ಲಿ ದಾಖಲೆ ಬರೆದರು.

- ಅರ್ಹತಾ ಸುತ್ತಿನಲ್ಲಿ 8ನೇ ಸ್ಥಾನ ಪಡೆದ ದೀಪಾ ವೈಯಕ್ತಿಕ ವಾಲ್ಟ್ ಫೈನಲ್‌ಗೆ ಅರ್ಹತೆ ಪಡೆದ ಭಾರತದ ಮೊಟ್ಟ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
- ಪ್ರೋಡುನೊವಾ ವಾಲ್ಟ್ ನಲ್ಲಿ ಎರಡು ಪ್ರಯತ್ನಗಳ ನಂತರ 14.850 ಪಾಯಿಂಟ್‌ಗಳೊಂದಿಗೆ ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ಸಫಲರಾದರು.
- ಐದು ಉಪವಿಭಾಗಗಳ ಮೂರನೇ ಸುತ್ತಿನ ನಂತರ ದೀಪಾ ಆರನೇ ಸ್ಥಾನ ಗಳಿಸಿದರು. ಆದರೆ ಕೆನಡಾದ ಜಿಮ್ನಾಸ್ಟ್ ಪಟು ಶಾಲೋನ್ ಓಲ್ಸೆನ್ ಅವರು ಉತ್ತಮ ಸಾಧನೆಯೊಂದಿಗೆ 14.950 ಪಾಯಿಂಟ್‌ಗಳಿಂದ ಸಮಗ್ರ ಶ್ರೇಣಿ ಪಡೆದ ನಂತರ ದೀಪಾ 8ನೇ ಸ್ಥಾನಕ್ಕೆ ಇಳಿದರು.

**ದೀಪಾ ಕರ್ಮಾಕರ್ ಬಗ್ಗೆ:**

- ತ್ರಿಪುರ ಮೂಲದ ದೀಪಾ ಕರ್ಮಾಕರ್ ಸದ್ಯ ಭಾರತದ ಭರವಸೆಯ ಜಿಮ್ನಾಸ್ಟಿಕ್ ಎನಿಸಿದ್ದಾರೆ. 22 ವರ್ಷದ ಕರ್ಮಾಕರ್ 2014ರಲ್ಲಿ ಗ್ಲಾಸ್ಗೊದಲ್ಲಿ ನಡೆದ ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಜಿಮ್ನಾಸ್ಟಿಕ್ ಎನಿಸಿದ್ದರು.
- ಏಪ್ರಿಲ್ 2016 ರಲ್ಲಿ ಒಲಂಪಿಕ್ಸ್ ನಲ್ಲಿ ಭಾಗವಹಿಸಲು ಅರ್ಹತೆ ಪಡೆಯುವ ಮೂಲಕ ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಜಿಮ್ನಾಸ್ಟಿಕ್ ಆಗಿ ಇತಿಹಾಸ ಬರೆದರು.

**ಪಾಕಿಸ್ತಾನದ ಮಾಜಿ ಕ್ರಿಕೆಟ್ ಆಟಗಾರ ಹನೀಫ್ ಮುಹಮ್ಮದ್ ನಿಧನ**

ಪಾಕಿಸ್ತಾನ ಮಾಜಿ ಕ್ರಿಕೆಟ್ ಆಟಗಾರ, 'ಲಿಟ್ಲ್ ಮಾಸ್ಟರ್' ಎಂದೇ ಖ್ಯಾತರಾಗಿದ್ದ ಹನೀಫ್ ಮುಹಮ್ಮದ್(81) ನಿಧನರಾದರು. ವಯೋ ಸಂಬಂಧಿ ಮತ್ತು ಶ್ವಾಸ ಕೋಶದ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ ಹನೀಫ್ ಮುಹಮ್ಮದ್ ಅವರು ಕರಾಚಿಯ ಆಗಾ ಖಾನ್ ಆಸ್ಪತ್ರೆಗೆ ದಾಖಲಾಗಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು.

- ಹನೀಫ್ ಮುಹಮ್ಮದ್ 1954-55ರಲ್ಲಿ ಭಾರತಕ್ಕೆ ಮೊದಲ ಬಾರಿ ಪ್ರವಾಸ ಕೈಗೊಂಡ ಪಾಕಿಸ್ತಾನ ಕ್ರಿಕೆಟ್ ತಂಡದ ಸದಸ್ಯರಾಗಿದ್ದರು.
- 1952-53 ರಿಂದ 1969-70ರ ನಡುವಿನ ಸುದೀರ್ಘ ವೃತ್ತಿ ಜೀವನದಲ್ಲಿ 55 ಟೆಸ್ಟ್ ಗಳನ್ನು ಆಡಿದ್ದಾರೆ.

- 1957-58ರಲ್ಲಿ ವೆಸ್ಟ್ಇಂಡೀಸ್ ವಿರುದ್ಧದ ಟೆಸ್ಟ್ನಲ್ಲಿ 337ರನ್ ದಾಖಲಿಸಿದ್ದರು. ಈ ಟೆಸ್ಟ್ನಲ್ಲಿ ಅವರು 970 ನಿಮಿಷಗಳ ಕಾಲ ಬ್ಯಾಟಿಂಗ್ ನಡೆಸಿದ್ದರು. ಇದು ಟೆಸ್ಟ್ ಹಾಗೂ ಪ್ರಥಮ ದರ್ಜೆ ಕ್ರಿಕೆಟ್ನಲ್ಲಿ ಅತ್ಯಂತ ಹೆಚ್ಚು ಹೊತ್ತು ಕ್ರೀಸ್ನಲ್ಲಿ ನಿಂತು ಬ್ಯಾಟಿಂಗ್ ನಡೆಸಿದ ಅಪೂರ್ವ ದಾಖಲೆಯಾಗಿದೆ.
- ಟೆಸ್ಟ್ ಕ್ರಿಕೆಟ್ ನಲ್ಲಿ 223 ಬಾಲುಗಳಿಂದ 20 ರನ್ ಗಳಿಸುವ ಮೂಲಕ ಅತ್ಯಂತ ನಿಧಾನವಾದ ಆಟವಾಡಿದ ದಾಖಲೆ ಅವರದು.
- ಹನೀಫ್ ಮುಹಮ್ಮದ್ 55 ಟೆಸ್ಟ್ ಗಳಲ್ಲಿ ಅವರು 12 ಶತಕ ಮತ್ತು 15 ಅರ್ಧಶತಕಗಳನ್ನು ಒಳಗೊಂಡ 3915 ರನ್ ದಾಖಲಿಸಿ 1 ವಿಕೆಟ್ ಪಡೆದಿದ್ದರು. 238 ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಗಳಲ್ಲಿ 55 ಶತಕ ಮತ್ತು 66 ಅರ್ಧಶತಕಗಳನ್ನು ಒಳಗೊಂಡ 17,059 ರನ್ ಮತ್ತು 53 ವಿಕೆಟ್ ಸಂಪಾದಿಸಿದ್ದರು.
- 1968 ರಲ್ಲಿ ಇವರನ್ನು ವಿಸ್ಡನ್ ವರ್ಷದ ಕ್ರಿಕೆಟಿಗ ಪ್ರಶಸ್ತಿಗೆ ಆಯ್ಕೆಮಾಡಲಾಗಿತ್ತು.
- 1969ರಲ್ಲಿ ನ್ಯೂಜಿಲೆಂಡ್ ವಿರುದ್ಧ ತಮ್ಮ ವೃತ್ತಿ ಜೀವನದ ಕೊನೆಯ ಟೆಸ್ಟ್ ಆಡಿದ್ದರು
- 2009 ರಲ್ಲಿ ಐಸಿಸಿ ಹಾಲ್ ಆಫ್ ಫೇಮ್ ಅನಾವರಣಗೊಂಡಾಗ ಹನೀಫ್ ಸೇರಿದಂತೆ ಪಾಕಿಸ್ತಾನದ ಇಮ್ರಾನ್ ಖಾನ್ ಮತ್ತು ಜಾವೇದ್ ಮಿಯಾಂದಾದ್ ಅವರನ್ನು ಐಸಿಸಿ ಹಾಲ್ ಫೇಮ್ ಗೆ ಸೇರ್ಪಡೆಗೊಳಿಸಲಾಗಿತ್ತು.

**ಒಲಂಪಿಕ್ಸ್ ಗೆ ವಿದಾಯ ಹೇಳಿದ ಚಿನ್ನದ ಮೀನು "ಮೈಕಲ್ ಪೆಲ್ಪ್"**

ವಿಶ್ವವಿಖ್ಯಾತ ಈಜುಗಾರ ಅಮೆರಿಕದ ಮೈಕೆಲ್ ಫೆಲ್ಪ್ಸ್ ಒಲಿಂಪಿಕ್ಸ್ ಗೆ ವಿದಾಯ ಹೇಳಿದರು. ಒಲಂಪಿಕ್ಸ್ ನಲ್ಲಿ ಅತಿ ಹೆಚ್ಚು ಅಂದರೆ 23ನೇ ಚಿನ್ನದ ಪದಕ ಗೆಲ್ಲುವ ಮೂಲಕ ಒಲಿಂಪಿಕ್ಸ್ ಗೆ ವಿದ್ಯುಕ್ತ ವಿದಾಯ ಹೇಳಿದ್ದಾರೆ. ಪೆಲ್ಪ್ಸ್ ತಮ್ಮ ಯಶಸ್ವಿ ಒಲಂಪಿಕ್ಸ್ನಲ್ಲಿ 23 ಚಿನ್ನದ ಪದಕ, 3 ಬೆಳ್ಳಿ ಮತ್ತು ಎರಡು ಕಂಚಿನ ಪದಕ ಸಹಿತ ಒಟ್ಟು 28 ಪದಕಗಳನ್ನು ಗೆದ್ದಿದ್ದಾರೆ. ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಅತಿ ಹೆಚ್ಚು ಚಿನ್ನದ ಪದಕಗಳನ್ನು ಪಡೆದ ದಾಖಲೆ ಇವರದು. ರಿಯೋ ಒಲಂಪಿಕ್ಸ್ ಪೆಲ್ಪ್ಸ್ ಗೆ ಐದನೇ ಒಲಂಪಿಕ್ಸ್.

**ಮೈಕಲ್ ಪೆಲ್ಪ್ಸ್ ಬಗ್ಗೆ:**

- ಫೆಲ್ಪ್ಸ್ ಜನಸಿದ್ದು ಜೂನ್ 30, 1985 ರಲ್ಲಿ. ಅಮೆರಿಕದ ಬಾಲ್ಟಿಮೋರ್ ಇವರ ಹುಟ್ಟೂರು. ಇವರ ತಾಯಿ ಶಾಲಾ ಶಿಕ್ಷಕಿ. ತಂದೆ ಭದ್ರತಾ ಅಧಿಕಾರಿ. ಹರ್ನಿಯಾ ಸಮಸ್ಯೆ ಜೊತೆಗೆ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದ ಇವರನ್ನು ಶಾಲೆಯಿಂದ ಹೊರಹಾಕಲಾಗಿತ್ತು. ಆಗ ಅಕ್ಕಂದಿರು ಈಜು ಕಲಿಯಲು ಅಕಾಡೆಮಿಯೊಂದಕ್ಕೆ ಸೇರಿಸಿದರು.
- ಪೆಲ್ಪ್ಸ್ ತಮ್ಮ 15ನೇ ವಯಸ್ಸಿನಲ್ಲಿ ಸಿಡ್ನಿ ಒಲಿಂಪಿಕ್ಸ್ಗೆ (2000) ಅರ್ಹತೆ ಗಿಟ್ಟಿಸಿದರು. 200 ಮೀಟರ್ ಬಟರ್ಪ್ಲೈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಆದರೆ ಪದಕ ಗೆಲ್ಲುವಲ್ಲಿ ವಿಫಲರಾದರು.
- 2004ರಲ್ಲಿ ಅಥೆನ್ಸ್ ನಲ್ಲಿ ನಡೆದ ಒಲಿಂಪಿಕ್ಸ್ನಲ್ಲಿ ಪ್ರಥಮ ಬಾರಿಗೆ ಚಿನ್ನ ಗೆದ್ದಾಗ ಅವರಿಗೆ 18 ವರ್ಷ.
- 2008ರ ಬೀಜಿಂಗ್ ಒಲಿಂಪಿಕ್ಸ್ನಲ್ಲಿ 8 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದರು. ಆ ಮೂಲಕ ಅಮೆರಿಕಾದವರೇ ಆದ ಮಾರ್ಕ್ ಸ್ಪಿಟ್ಜ್ (ಮ್ಯೂನಿಕ್ ಒಲಿಂಪಿಕ್ಸ್; 7 ಚಿನ್ನ) ದಾಖಲೆ ಅಳಿಸಿ ಹಾಕಿದ್ದರು.
- ತದ ನಂತರ 2012ರಲ್ಲಿ ಲಂಡನ್ ಒಲಿಂಪಿಕ್ಸ್ನಲ್ಲಿ ನಾಲ್ಕು ಸ್ವರ್ಣ ಪದಕ ಜಯಿಸಿದ್ದರು. ಆ ಸಂದರ್ಭದಲ್ಲೇ ವಿದಾಯ ಹೇಳುವ ತೀರ್ಮಾನ ಕೈಗೊಂಡಿದ್ದರು. ಆದರೆ ಮನ ಬದಲಿಸುವ ಮೂಲಕ 2016 ಒಲಂಪಿಕ್ಸ್ ನಲ್ಲಿ ಭಾಗವಹಿಸಲು ನಿರ್ಧರಿಸಿದ್ದರು.

www.karunaduexams.com

- 2016 ರಿಯೋ ಒಲಂಪಿಕ್ಸ್ ನಲ್ಲಿ ಚಿನ್ನ ಗೆಲ್ಲುವ ಮೂಲಕ ಸತತವಾಗಿ ನಾಲ್ಕು ಒಲಂಪಿಕ್ಸ್ ನಲ್ಲಿ ಚಿನ್ನ ಗೆದ್ದ ದಾಖಲೆಯನ್ನು ಅವರು ನಿರ್ಮಿಸಿದ್ದಾರೆ.

**ಫಿಫಾದ ಮಾಜಿ ಅಧ್ಯಕ್ಷ ಜಾವೋ ಹ್ಯಾವಲೆಂಜ್ ವಿಧಿವಶ**

ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಫಿಫಾ ಮಾಜಿ ಅಧ್ಯಕ್ಷ ಜಾವೊ ಹ್ಯಾವಲೆಂಜ್ ನಿಧನರಾದರು. ಅವರಿಗೆ 100 ವರ್ಷ ವಯಸ್ಸಾಗಿತ್ತು. ಹ್ಯಾವಲೆಂಜ್ ಅವರು 1974 ರಲ್ಲಿ ಮೊದಲ ಬಾರಿಗೆ ಫಿಫಾದ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಬಳಿಕ ಸತತವಾಗಿ ಆರು ಅವಧಿಗೆ ಅಧ್ಯಕ್ಷರಾಗಿ ಸೇವೆ ನಿರ್ವಹಿಸಿದ್ದರು.

- 1974 ರಿಂದ 1998 ರವರೆಗೆ ಸತತವಾಗಿ ಆರು ಬಾರಿ ಅಧ್ಯಕ್ಷರಾಗಿದ್ದರು. ಇವರ ಅಧ್ಯಕ್ಷ ಅವಧಿಯಲ್ಲಿ ಒಟ್ಟು ಆರು ವಿಶ್ವಕಪ್ ಟೂರ್ನಿಗಳು ಆಯೋಜನೆಯಾಗಿದ್ದವು.
- ಮಹಿಳಾ ವಿಶ್ವಕಪ್ ಆರಂಭ ಮತ್ತು ಪುರುಷರ ವಿಭಾಗದ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುವ ತಂಡಗಳ ಸಂಖ್ಯೆಯನ್ನು 16ರಿಂದ 32ಕ್ಕೆ ಹೆಚ್ಚಿಸಿದ್ದು ಸೇರಿದಂತೆ ಅನೇಕ ಮಹತ್ವದ ನಿರ್ಣಯಗಳನ್ನು ಕೈಗೊಂಡಿದ್ದರು. 2013ರಲ್ಲಿ ಫಿಫಾದಲ್ಲಿ ನಡೆದಿದ್ದ ಭ್ರಷ್ಟಾಚಾರ ಹಗರಣದಲ್ಲಿ ಹ್ಯಾವಲೆಂಜ್ ಅವರ ಹೆಸರೂ ಕೇಳಿಬಂದಿತ್ತು. ಆದರೆ ಅವರಿಗೆ ಯಾವುದೇ ಶಿಕ್ಷೆಯಾಗಿರಲಿಲ್ಲ. ಹೀಗಿದ್ದರೂ ಅವರು ಫಿಫಾದ ಗೌರವಾ ಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.
- 1963ರಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯತ್ವ ಪಡೆದಿದ್ದ ಅವರು 2011ರ ಡಿಸೆಂಬರ್ ನಲ್ಲಿ ಈ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.
- ಸುಮಾರು 20 ವರ್ಷಗಳ ಕಾಲ ಬ್ರೆಜಿಲ್ ಕಾನ್ಫೆಡರೇಷನ್‌ನ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. ಇವರ ಅವಧಿಯಲ್ಲಿ ಬ್ರೆಜಿಲ್ ತಂಡ ಮೂರು ಬಾರಿ (1958, 1962 ಮತ್ತು 1970) ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿತ್ತು.

**ಮಾಜಿ ಕ್ರಿಕೆಟ್ ಆಟಗಾರ ವಿರೇಂದ್ರ ಸೆಹ್ವಾಗ್ ಗೆ ಮೆಲ್ಬೋರ್ನ್ ಕ್ರಿಕೆಟ್ ಕ್ಲಬ್ ಗೌರವ ಸದಸ್ಯತ್ವ**

ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ವಿರೇಂದ್ರ ಸೆಹ್ವಾಗ್ ಮೆಲ್ಬೋರ್ನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಗೌರವ ಸದಸ್ಯತ್ವ ಪಡೆದಿದ್ದಾರೆ. ಕ್ರಿಕೆಟ್ ಆಟಕ್ಕೆ ನೀಡಿರುವ ಕೊಡುಗೆಯನ್ನು ಗುರುತಿಸಿ ಎಂಸಿಸಿ ಸದಸ್ಯತ್ವನ್ನು ವಿಸ್ತರಿಸಲಾಗುತ್ತದೆ. ವಿರೇಂದ್ರ ಸೆಹ್ವಾಗ್ ಎಂಸಿಸಿ ಸದಸ್ಯತ್ವ ಪಡೆದ 23ನೇ ಆಟಗಾರ ಮತ್ತು ಭಾರತದ ಐದನೇ ಆಟಗಾರ ಎನಿಸಿದ್ದಾರೆ. ಈ ಹಿಂದೆ ಭಾರತದ ಕ್ರಿಕೆಟ್ ದಿಗ್ಗಜರುಗಳಾದ ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ, ರಾಹುಲ್ ದ್ರಾವಿಡ್ ಮತ್ತು ಅನಿಲ್ ಕುಂಬ್ಳೆ ಸದಸ್ಯತ್ವನ್ನು ಪಡೆದುಕೊಂಡಿದ್ದಾರೆ.

**ವಿರೇಂದ್ರ ಸೆಹ್ವಾಗ್:**

- ಭಾರತ ಕಂಡ ಅಪ್ರತಿಮ ಒಪನಿಂಗ್ ಬ್ಯಾಟ್ಸಮನ್.
- 37 ವರ್ಷ ವಯಸ್ಸಿನ ಸೆಹ್ವಾಗ್ ವೃತ್ತಿ ಜೀವನದಲ್ಲಿ ಭಾರತದ ಪರ 104 ಟೆಸ್ಟ್, 251 ಏಕದಿನ ಮತ್ತು 19 ಟಿ20 ಪಂದ್ಯಗಳನ್ನಾಡಿದ್ದಾರೆ.

www.karunaduexams.com

- ಸ್ಫೋಟಕ ಬ್ಯಾಟ್ಸ್ಮನ್ ಎಂದೇ ಹೆಸರಾಗಿದ್ದ ಸೆಹ್ವಾಗ್ ಟೆಸ್ಟ್ನಲ್ಲಿ 49.34ರ ಸರಾಸರಿಯಲ್ಲಿ 8,586 ರನ್ ಗಳಿಸಿದ್ದರೆ, ಏಕದಿನ ಕ್ರಿಕೆಟ್ನಲ್ಲಿ 35.05ರ ಸರಾಸರಿಯಲ್ಲಿ 8273 ರನ್ ಕಲೆಹಾಕಿದ್ದಾರೆ. ಒಟ್ಟಾರೆ 16,892 ರನ್ ಗಳಿಸಿ ವಿಶ್ವದ ಅತ್ಯುತ್ತಮ ಕ್ರಿಕೆಟ್ ಆಟಗಾರರಲ್ಲಿ ಒಬ್ಬರಾಗಿದ್ದಾರೆ.

**ರಿಯೋ ಒಲಂಪಿಕ್ಸ್ ನಲ್ಲಿ ಭಾರತಕ್ಕೆ ಮೊದಲ ಪದಕ ತಂದ "ಸಾಕ್ಷಿ ಮಲ್ಲಿಕ್"**

ಭಾರತದ ಮಹಿಳಾ ಕುಸ್ತಿಪಟು ಸಾಕ್ಷಿ ಮಲ್ಲಿಕ್ ರಿಯೋ ಒಲಿಂಪಿಕ್ಸ್‌ನ ಮಹಿಳೆಯರ ಕುಸ್ತಿ 58 ಕೆ.ಜಿ ಫ್ರೀ ಸ್ಟೈಲ್ ವಿಭಾಗದಲ್ಲಿ ರಿಪಿಚೇಜ್ ಸ್ಪರ್ಧೆಯಲ್ಲಿ ಕಂಚು ಗೆದ್ದಿದ್ದಾರೆ. ಆ ಮೂಲಕ ಈ ಒಲಂಪಿಕ್ಸ್ನಲ್ಲಿ ಪದಕಕ್ಕೆ ಎದುರು ನೋಡುತ್ತಿದ್ದ ಭಾರತಕ್ಕೆ ಮೊದಲ ಪದಕ ತಂದಿಟ್ಟರು. ಮಹಿಳೆಯರ 58 ಕೆಜಿ ಫ್ರೀ ಸ್ಟೈಲ್ ರಿಪಿಚೇಜ್ ಸ್ಪರ್ಧೆಯಲ್ಲಿ ಕುಸ್ತಿ ಸ್ಪರ್ಧೆಯಲ್ಲಿ ಸಾಕ್ಷಿ ಮಲಿಕ್ ಅವರು ಕಿರ್ಗಿಸ್ತಾನದ ಐಸಿಲೂ ಟೈನೀಬೆಕೋವಾ ಅವರನ್ನು 8-5 ಅಂತರದಿಂದ ಮಣಿಸಿ ಕಂಚಿನ ಪದಕ ಬಾಚಿಕೊಂಡರು.

- ಸಾಕ್ಷಿ ಮಲಿಕ್ ಒಲಿಂಪಿಕ್ಸ್ ಪದಕ ಜಯಿಸಿದ ಬಾರತದ ಮೊದಲ ಮಹಿಳಾ ಕುಸ್ತಿಪಟು ಹಾಗೂ ದೇಶದ ನಾಲ್ಕನೇ ಮಹಿಳಾ ಕ್ರೀಡಾಪಟು ಇದರೊಂದಿಗೆ ಒಲಿಂಪಿಕ್ಸ್ ನಲ್ಲಿ ಭಾರತ ಜಯಿಸಿದ ಪದಕದ ಸಂಖ್ಯೆ 25 ಕ್ಕೆ ಏರಿದೆ.

**ಸಾಕ್ಷಿ ಮಲ್ಲಿಕ್ ಬಗ್ಗೆ:**

- ಸಾಕ್ಷಿ ಮಲಿಕ್ ಸೆಪ್ಟೆಂಬರ್ 3, 1992 ರಂದು ಹರ್ಯಾಣದ ರೋಹತಕ್ ನಲ್ಲಿ ಜನಿಸಿದ್ದರು. ಅವರ ತಂದೆ ಸುದೇಶ್ ಮತ್ತು ತಾಯಿ ಸುಖ್ಬೀರ್. ತಮ್ಮ 12ನೇ ವಯಸ್ಸಿಗೆ ಚೋಟು ರಾಮ್ ಕ್ರೀಡಾಂಗಣದ ಕುಸ್ತಿ ಅಖಾಡದಲ್ಲಿ ಈಶ್ವರ್ ದಹಿಯಾ ಮಾರ್ಗದರ್ಶನದಲ್ಲಿ ಕುಸ್ತಿ ತರಬೇತಿ ಪಡೆಯಲಾರಂಭಿಸಿದ್ದರು.
- **2010:** ಜೂನಿಯರ್-ಮಟ್ಟದ ಸ್ಪರ್ಧೆಗಳಲ್ಲಿ ಜಯಿಸಿದ್ದ ಸಾಕ್ಷಿ 2010ರಲ್ಲಿ 59 ಕೆಜಿ ವಿಭಾಗದಲ್ಲಿ 2010 ಕಿರಿಯರ ವಿಶ್ವ ಚಾಂಪಿಯನ್ ಶಿಪ್‌ನಲ್ಲಿ ಕಂಚಿನ ಪದಕ ಗೆದ್ದರು.
- **2014:** ಡೇವ್ ಷುಲ್ಟ್ಜ್ ಅಂತಾರಾಷ್ಟ್ರೀಯ ಕುಸ್ತಿ ಪಂದ್ಯಾವಳಿ (60 ಕೆಜಿ)ಯಲ್ಲಿ ಚಿನ್ನ ಜಯಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದರು.
- **2014 ಆಗಸ್ಟ್:** ಗ್ಲಾಸ್ಗೋದಲ್ಲಿ 2014 ರ ಕಾಮನ್ವೆಲ್ತ್ ಗೇಮ್ಸ್ ನಲ್ಲಿ ಬೆಳ್ಳಿ ಪದಕ, ಅಂತಾರಾಷ್ಟ್ರೀಯ ವೃತ್ತಿಜೀವನ ಆರಂಭ.
- **2015ಮೇ:** ದೋಹಾದಲ್ಲಿ ಹಿರಿಯ ಏಷ್ಯನ್ ಕುಸ್ತಿ ಚಾಂಪಿಯನ್ ಶಿಪ್‌ನಲ್ಲಿ ಕಂಚು.
- **ಮೇ 2016:** ಇಸ್ತಾಂಬುಲ್‌ನಲ್ಲಿ ರಿಯೋ ಒಲಿಂಪಿಕ್ಸ್ ಅರ್ಹತಾ ಸ್ಪರ್ಧೆಯ ಸೆಮಿಫೈನಲ್ ನಲ್ಲಿ ಚೇನಾದ ಲ್ಯಾನ್ ಝೂಂಗ್ ಅವರನ್ನು ಸೋಲಿಸಿ ಒಲಿಂಪಿಕ್ಸ್ ಗೆ ಪ್ರವೇಶ
- **ಜುಲೈ 2016:** ಸ್ಪ್ಯಾನಿಷ್ ಗ್ರ್ಯಾಂಡ್ ಪ್ರಿ 60 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಕಂಚು.

**ಹಿಂದೆ ಒಲಂಪಿಕ್ಸ್ ನಲ್ಲಿ ಪದಕ ಗೆದ್ದ ಮಹಿಳೆಯರು:**

- ಕರ್ಣ ಮಲ್ಲೇಶ್ವರಿ, ವೇಟ್ ಲಿಫ್ಟಿಂಗ್, ಸಿಡ್ನಿ ಒಲಂಪಿಕ್ಸ್, 2000
- ಎಂ.ಸಿ.ಮೇರಿ ಕೋಮ್, ಬಾಕ್ಸಿಂಗ್, ಲಂಡನ್ ಒಲಂಪಿಕ್ಸ್, 2012
- ಸೈನಾ ನೆಹ್ವಾಲ್, ಬ್ಯಾಡ್ಮಿಂಟನ್, ಲಂಡನ್ ಒಲಂಪಿಕ್ಸ್, 2012

**2016 ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ: ಸಿಂಧು, ಸಾಕ್ಷಿ ಮಲಿಕ್, ದೀಪಾ ಕಮಾರ್ಕರ್ ಮತ್ತು ಜಿತು ರಾಯ್ ಗೆ ಖೇಲ್ ರತ್ನ**

ಕ್ರೀಡಾ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ತೋರಿದವರಿಗೆ ಕೇಂದ್ರ ಸರ್ಕಾರ ನೀಡುವ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಯನ್ನು 2016ನೇ ಸಾಲಿಗೆ ಪ್ರಕಟಿಸಿದೆ.

**ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ:**

ಪಿವಿ ಸಿಂಧು -ಬ್ಯಾಡ್ಮಿಂಟನ್, ದೀಪಾ ಕರ್ಮಾಕರ್ - ಜಿಮ್ನಾಸ್ಟಿಕ್ಸ್, ಜಿತು ರಾಯ್ - ಶೂಟಿಂಗ್ ಮತ್ತು ಸಾಕ್ಷಿ ಮಲಿಕ್ - ಕುಸ್ತಿ.

**ಅರ್ಜುನ ಪ್ರಶಸ್ತಿ**: ಶ್ರೀ ರಜತ್ ಚೌಹಾಣ್ - ಬಿಲ್ವಿದ್ಯೆ, ಶಿವ ಥಾಪಾ - ಬಾಕ್ಸಿಂಗ್, ಅಜಿಂಕ್ಯ ರೆಹಾನೆ- ಕ್ರಿಕೆಟ್, ಲಲಿತಾ ಬಾಬರ್ ಅಥ್ಲೆಟಿಕ್ಸ್, ಅಮಿತ್ ಕುಮಾರ್ - ಕುಸ್ತಿ, ಸಂದೀಪ್ ಸಿಂಗ್ ಮನ್ನ್ - ಪ್ಯಾರಾ ಅಥ್ಲೆಟಿಕ್ಸ್, ವಿರೇಂದ್ರ ಸಿಂಗ್- ಕುಸ್ತಿ, ಸೌರವ್ ಕೊಠಾರಿ - ಬಿಲಿಯರ್ಡ್ ಮತ್ತು ಸ್ನೂಕರ್ ಅಪೂರ್ವಿ ಚಂಡೇಲಾ -ಶೂಟಿಂಗ್, ಸೌಮ್ಯಜಿತ್ ಘೋಷ್- ಟೇಬಲ್ ಟೆನಿಸ್, ವಿನೇಶ್ ಫೋಗಟ್ - ಕುಸ್ತಿ, ಸುಬ್ರತಾ ಪೌಲ್ -ಫುಟ್ಬಾಲ್, ರಾಣಿ - ಹಾಕಿ, ರಘುನಾಥ್ ವಿ. ಆರ್- ಹಾಕಿ ಮತ್ತು ಗುರ್ಪ್ರೀತ್ ಸಿಂಗ್- ಶೂಟಿಂಗ್.

**ಧ್ಯಾನ್ ಚಂದ್ ಪ್ರಶಸ್ತಿ**: ಸತ್ತಿ ಗೀತಾ - ಅಥ್ಲೆಟಿಕ್ಸ್, ರಾಜೇಂದ್ರ ಪ್ರಹ್ಲಾದ್ ಶೆಲ್ಕೆ-ರೋಯಿಂಗ್, ಸೆಲ್ವಾನಸ್ ಡುಂಗ್ ಡುಂಗ್ -ಹಾಕಿ

**ದ್ರೋಣಾಚಾರ್ಯಪ್ರಶಸ್ತಿ:**

ರಾಜ್ ಕುಮಾರ್ ಶರ್ಮಾ -ಕ್ರಿಕೆಟ್, ಬಿಶೇಶ್ವರ್ ನಂದಿ- ಜಿಮ್ನಾಸ್ಟಿಕ್ಸ್, ನಾಗಪುರಿ ರಮೇಶ್ -ಅಥ್ಲೆಟಿಕ್ಸ್, ಸಾಗರ್ ಮಲ್ ದಯಾಳ್ - ಬಾಕ್ಸಿಂಗ್, ಎಸ್ ಪ್ರದೀಪ್ ಕುಮಾರ್ - ಈಜು (ಜೀವಮಾನ ಸಾಧನೆ), ಮಹಾಬೀರ್ ಸಿಂಗ್ - ಕುಸ್ತಿ (ಜೀವಮಾನ ಸಾಧನೆ).

ಖೇಲ್ ರತ್ನ ಪ್ರಶಸ್ತಿ: ಖೇಲ್ ರತ್ನ ಪ್ರಶಸ್ತಿಯು ಪದಕ, ಸ್ಮರಣಿಕೆ, ಪ್ರಶಸ್ತಿ ಪತ್ರ ಮತ್ತು ರು.7.5 ಲಕ್ಷ ನಗದು ಬಹುಮಾನವನ್ನು ಹೊಂದಿದೆ. ಅರ್ಜುನ ಪ್ರಶಸ್ತಿ, ದ್ರೋಣಾಚಾರ್ಯ ಮತ್ತು ಧ್ಯಾನ್‌ಚಂದ್ ಪ್ರಶಸ್ತಿಯು ಸ್ಮರಣಿಕೆ, ಪ್ರಶಸ್ತಿ ಪತ್ರ ಮತ್ತು ತಲಾ ರು. 5 ಲಕ್ಷ ನಗದು ಬಹುಮಾನವನ್ನು ಹೊಂದಿದೆ.

**ಅಭಿನವ್ ಬಿಂದ್ರಾ ನೇತೃತ್ವದಲ್ಲಿ ಪರಾಮರ್ಶೆ ಸಮಿತಿ ರಚಿಸಿದ NRAI**

ರಿಯೋ ಒಲಂಪಿಕ್ಸ್ ಶೂಟಿಂಗ್ ವಿಭಾಗದಲ್ಲಿ ಭಾರತದ ಶೂಟರ್ ಗಳು ತೋರಿದ ಕಳಪೆ ಪ್ರದರ್ಶನದ ಪರಾಮರ್ಶೆ ಮಾಡಲು ನ್ಯಾಷನಲ್ ರೈಫಲ್ ಅಸೋಸಿಯೇಶನ್ ಆಫ್ ಇಂಡಿಯಾ(NRAI) ಸಮಿತಿ ರಚಿಸಿದೆ. ಒಲಂಪಿಕ್ಸ್ ನಲ್ಲಿ ಚಿನ್ನದ ಪದಕ ಗೆದ್ದಿರುವ ಶೂಟರ್ ಅಭಿನವ್ ಬಿಂದ್ರಾ ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸಮಿತಿಯು ನಾಲ್ಕು ವಾರದೊಳಗೆ ತನ್ನ ವರದಿಯನ್ನು ಸಲ್ಲಿಸಲಿದೆ.

- ಒಲಂಪಿಕ್ಸ್ ನ ಶೂಟಿಂಗ್ ನಲ್ಲಿ ಭಾರತದ ಶೂಟರ್ ಗಳು ಪದಕ ಗೆಲ್ಲದೆ ವಿಫಲರಾಗಲು ಕಾರಣವೇನು ಎಂಬುದನ್ನು ಸಮಿತಿ ಅಧ್ಯಯನ ನಡೆಸಲಿದೆ.
- ಮುಂದಿನ ಒಲಂಪಿಕ್ಸ್ ನಲ್ಲಿ ಇದೇ ರೀತಿ ವೈಫಲ್ಯತೆ ಮುಂದುವರೆಯದಿರಲು NRAI ತೆಗೆದುಕೊಳ್ಳಬೇಕಾಗಿರುವ ಅಗತ್ಯ ಕ್ರಮಗಳನ್ನು ಸಮಿತಿ ಶಿಫಾರಸ್ಸು ಮಾಡಲಿದೆ.

**ನ್ಯಾಷನಲ್ ರೈಫಲ್ ಅಸೋಸಿಯೇಶನ್ ಆಫ್ ಇಂಡಿಯಾ:**

- ಶೂಟಿಂಗ್ ಕ್ರೀಡೆಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ನ್ಯಾಷನಲ್ ರೈಫಲ್ ಅಸೋಸಿಯೇಶನ್ ಆಫ್ ಇಂಡಿಯಾವನ್ನು 1951 ರಲ್ಲಿ ಸ್ಥಾಪಿಸಲಾಗಿದೆ.
- ಅಂತಾರಾಷ್ಟ್ರೀಯ ಶೂಟಿಂಗ್ ಫೆಡರೇಶನ್ ಮತ್ತು ಭಾರತೀಯ ಒಲಂಪಿಕ್ ಅಸೋಸಿಯೇಶನ್ ಮಾನ್ಯತೆ ಪಡೆದಿದೆ.

- ಲೋಕಸಭೆಯ ಮೊದಲ ಸ್ಪೀಕರ್ ಜಿ.ವಿ.ಮಾವ್ಳಂಕರ್ ಅವರು NRAIನ ಸಂಸ್ಥಾಪಕರು ಮತ್ತು ಮೊದಲ ಅಧ್ಯಕ್ಷರು.
- ಪ್ರಸ್ತುತ ರಣವೀರ್ ಸಿಂಗ್ NRAIನ ಅಧ್ಯಕ್ಷರಾಗಿದ್ದಾರೆ.

**ಕ್ರಿಸ್ಟಿಯಾನೋ ರೊನಾಲ್ಡೊಗೆ ಯುರೋಪ್ ನ UEFA ಶ್ರೇಷ್ಠ ಆಟಗಾರ ಪ್ರಶಸ್ತಿ**

ಪೋರ್ಚುಗೀಸ್ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೋ ರೊನಾಲ್ಡೋ ಅವರು 2015-16 ಯುರೋಪ್ UEFA ಶ್ರೇಷ್ಠ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಎರಡನೇ ಬಾರಿ ರೊನಾಲ್ಡೊ ಈ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ರಿಯಲ್ ಮ್ಯಾಡ್ರಿಡ್ ನ ಗರೇಟ್ ಬೇಲ್ ಹಾಗೂ ಅಟ್ಲೆಟಿಕೊ ಮ್ಯಾಡ್ರಿಡ್ ನ ಅಂಟೊನೆ ಗ್ರಿಜ್ಮನ್ ರನ್ನು ಹಿಂದಿಕ್ಕಿ ರೊನೊಲ್ಡೋ ಪ್ರಶಸ್ತಿ ಗಳಿಸಿದ್ದಾರೆ. ರೋನಾಲ್ಡೋ ಈ ಹಿಂದೆ 2013-14ರಲ್ಲಿ ಪ್ರಶಸ್ತಿಯನ್ನು ಗೆದಿದ್ದರು.

**ಅಡ ಹೇಗರ್ಬರ್ಗ್ (Ada Hegerberg)**: 2015-16 ಯುರೋಪ್ UEFA ಶ್ರೇಷ್ಠ ಮಹಿಳಾ ಆಟಗಾರ್ತಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಲಿಯೊನೆಲ್ ಮೆಸ್ಸಿ**: UEFA ಸೀಸನ್ ನ ಶೇಷ್ಠ ಗೋಲು ಪ್ರಶಸ್ತಿಯನ್ನು ಮೆಸ್ಸಿಗೆ ನೀಡಲಾಗಿದೆ. ರೋಮ್ ವಿರುದ್ದ ಗಳಿಸಿದ ಗೋಲ್ ಗಾಗಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**UEFA ಪ್ರಶಸ್ತಿಯ ಬಗ್ಗೆ**:

- ಯುರೋಪ್ನ ಫುಟ್ಬಾಲ್ ಕ್ಲಬ್ ನಲ್ಲಿ ಆಡುವ ಫುಟ್ಬಾಲ್ ಆಟಗಾರರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಹಿಂದಿನ ವರ್ಷದಲ್ಲಿ ತೋರಿದ ಪ್ರದರ್ಶನದ ಮೇಲೆ ಪ್ರಶಸ್ತಿಗೆ ಆಯ್ಕೆಮಾಡಲಾಗುತ್ತದೆ.
- UEFA ವರ್ಷದ ಫುಟ್ಬಾಲ್ ಆಟಗಾರ ಪ್ರಶಸ್ತಿಯ ಬದಲಿಗೆ 2011 ರಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಫಿಫಾ ವಿಶ್ವ ಆಟಗಾರ ಪ್ರಶಸ್ತಿಯನ್ನು ಬ್ಯಾಲನ್ ಡಿ'ಒರ್ ಎಂದು ಮರು ನಾಮಕರಣ ಮಾಡಿದಂತೆಯೇ ಯುರೋಪಿಯನ್ ವರ್ಷದ ಫುಟ್ಬಾಲ್ ಗೌರವವನ್ನು ಯುಇಎಫ್ಎ ಪ್ರಶಸ್ತಿ ಎಂದು ಬದಲಿಸಲಾಗಿತ್ತು.

**ಗುಜರಾತ್ ನ ಅಹಮದಬಾದ್ ನಲ್ಲಿ 2016 ಕಬಡ್ಡಿ ವಿಶ್ವ ಕಪ್**

ಗುಜರಾತ್ನ ಅಹಮದಬಾದ್ ನಲ್ಲಿ 2016 ಕಬಡ್ಡಿ ವಿಶ್ವ ಕಪ್ ನಡೆಯಲಿರುವುದಾಗಿ ಅಂತಾರಾಷ್ಟ್ರೀಯ ಕಬಡ್ಡಿ ಫೇಡರೇಷನ್ ಘೋಷಿಸಿದೆ. ಅಕ್ಟೋಬರ್ 7 ರಿಂದ 22 ರವರೆಗೆ ನಡೆಯಲಿರುವ ಪಂದ್ಯಾವಳಿಯಲ್ಲಿ ವಿಶ್ವದ 12 ರಾಷ್ಟ್ರಗಳು ಭಾಗವಹಿಸಲಿವೆ. ಭಾರತ, ಕೆನಡಾ, ಅಮೆರಿಕಾ, ಯು.ಕೆ, ಇರಾನ್, ಆಸ್ಟ್ರೇಲಿಯಾ, ಪೋಲ್ಯಾಂಡ್, ಪಾಕಿಸ್ತಾನ, ಬಾಂಗ್ಲದೇಶ, ದಕ್ಷಿಣ ಕೊರಿಯ ಜಪಾನ್ ಮತ್ತು ಕೀನ್ಯಾ ಭಾಗವಹಿಸಲಿರುವ 12 ರಾಷ್ಟ್ರಗಳಾಗಿವೆ. 2016 ಕಬಡ್ಡಿ ವಿಶ್ವ ಕಪ್ ಅಧಿಕೃತ ಪ್ರಸಾರದ ಹಕ್ಕನ್ನು ಸ್ಟಾರ್ ಸ್ಪೋರ್ಟ್ಸ್ ಪಡೆದುಕೊಂಡಿದೆ.

**ಕಬಡ್ಡಿ ಬಗ್ಗೆ:**

- ಕಬಡ್ಡಿ ಭಾರತದ ಗ್ರಾಮೀಣ ಕ್ರೀಡೆ. ಭಾರತದ ದೇಸೀ ಕ್ರೀಡೆ ಕಬಡ್ಡಿ ಸುಮಾರು ೪೦೦೦ ವರ್ಷ ಪುರಾತನವಾದದ್ದು. ಕಬಡ್ಡಿ ಬಾಂಗ್ಲದೇಶದ ರಾಷ್ಟ್ರೀಯ ಕ್ರೀಡೆಯಾಗಿದ್ದು, ಇದನ್ನು ಹುತುತು ಎನ್ನಲಾಗುತ್ತದೆ.
- ಭಾರತದಲ್ಲಿ ಕಬಡ್ಡಿ ಮಹಾರಾಷ್ಟ್ರ, ತಮಿಳು ನಾಡು, ಬಿಹಾರ, ತೆಲಂಗಣ, ಆಂಧ್ರಪ್ರದೇಶ ಮತ್ತು ಪಂಜಾಬ್ ರಾಜ್ಯಗಳ ರಾಜ್ಯ ಕ್ರೀಡೆ.



www.karunaduexams.com

**ಕಬಡ್ಡಿ ವಿಶ್ವಕಪ್ ಬಗ್ಗೆ:**

- 2004ರಲ್ಲಿ ಆರಂಭವಾದ ವಿಶ್ವಕಪ್ ಕಬಡ್ಡಿ ಟೂರ್ನಿ 2005 ಮತ್ತು 2006ರನ್ನು ಹೊರತುಪಡಿಸಿ ಈವರೆಗೂ ಆರು ಬಾರಿ ನಡೆದಿದೆ. ವಾರ್ಷಿಕ ಟೂರ್ನಿ ಇದಾಗಿದ್ದು, ಭಾರತ ಸತತ ಆರು ಬಾರಿಯು ಚಾಂಪಿ ಯನ್ ಪಟ್ಟ ಅಲಂಕರಿಸಿದೆ.ಅದರಲ್ಲೂ 2010, 2012,2013ರಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಭಾರತ ಹೊರತುಪಡಿಸಿದರೆ, ಪಾಕಿಸ್ತಾನ ಮತ್ತು ಇರಾನ್ ಕ್ರಮುವಾಗಿ ಮೂರು ಹಾಗೂ ಎರಡು ಬಾರಿ ರನ್ನರ್‌ಅಪ್ ಸ್ಥಾನಗಳಿಸಿದ್ದು, ಭಾರತಕ್ಕೆ ಸವಾಲೊಡ್ಡಬಲ್ಲ ತಂಡಗಳಾಗಿವೆ.
- 2012ರಲ್ಲಿ ಆರಂಭವಾದ ಮಹಿಳಾ ಟೂರ್ನಿ 2013ರಲ್ಲಿ ಎರಡನೇ ಬಾರಿಗೆ ನಡೆದಿದ್ದು, ಭಾರತವೇ ಇಲ್ಲಿಯೂ ಪ್ರಭುತ್ವ ಸಾಧಿಸಿದೆ.

www.karunaduexams.com